## ಅಧ್ಯಾಯ 2

# ಆಸ್ಯ ಸೀಮೆಯಲ್ಲಿರುವ ಏಳು ಸಭೆಗಳಿಗೆ ಬರೆದ ಪತ್ರಗಳು

# (ಭಾಗ 1)

ಹೊಸ ಒಡಂಬಡಿಕೆಯಲ್ಲೆಲ್ಲಾ ಪತ್ರಿಕೆಗಳು ತುಂಬಿರುತ್ತವೆ. ಹೊಸ ಒಡಂಬಡಿಕೆಯ ಇಪ್ಪತ್ತೇಳು ಪುಸ್ತಕಗಳಲ್ಲಿ ಇಪ್ಪತ್ತೊಂದು ಪುಸ್ತಕಗಳು ಸಭೆಗಳಿಗೆ ಹಾಗೂ ವ್ಯಕ್ತಿಗಳಿಗೆ ಬರೆದಿರುವಂತಹ ಪತ್ರಿಕೆಗಳೇ ಆಗಿರುತ್ತವೆ. ಎಲ್ಲವೂ ತನ್ನ ಜನರ ಮೇಲೆ ಕರ್ತನು ವ್ಯಕ್ತಪಡಿಸಿರುವ ಪ್ರೀತಿಯೇ ಆಗಿರುತ್ತವೆ. ಪ್ರಕಟನೆ ಪುಸ್ತಕವು Domitianನ ಆಳ್ವಿಕೆಯ ಕಡೇ ಭಾಗದಲ್ಲಿ ಬರೆಯಲ್ಪಟ್ಟಿತೆಂದು ನಾವು ಊಹಿಸಿಕೊಳ್ಳುವದಾದರೆ, ಅದು ಆತನು ಬರೆದಂಥ ಕೊನೆಯ ಪತ್ರಗಳನ್ನೊಳಗೊಂಡಿರುತ್ತದೆ ಎಂದಾಗುತ್ತದೆ. 2 ಮತ್ತಗು 3 ಅಧ್ಯಾಯಗಳಲ್ಲಿ, ಆಸ್ಯ ಸೀಮೆಯಲ್ಲಿರುವ ಸಭೆಗಳಿಗೆ ಯೇಸು ಬರೆಯುವ ಏಳು ಪತ್ರಗಳನ್ನು ಕಾಣುತ್ತೇವೆ. ಪ್ರಕಟನೆ ಪುಸ್ತಕವು ಮೂಲತಃ ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಏಳು ಸಭೆಗಳಿಗಾಗಿ ಬರೆಯಲ್ಪಟ್ಟಿತು. ಈ ಏಳು ಸಭೆಗಳು ಯೋಹಾನನ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ನಿಜವಾದ ಸಭೆಗಳು ಮತ್ತು "ಸಭೆಯ ಏಳು ಯುಗಗಳನ್ನು"[1] ಪ್ರತಿನಿಧಿಸುವದಿಲ್ಲ ಎಂಬುದನ್ನು ಒತ್ತಿ ಹೇಳುವದು ಪ್ರಾಮುಖ್ಯವಾಗಿರುತ್ತದೆ.

ಈ ಪತ್ರಗಳು ಏಕೆ ಪುಸ್ತಕದಲ್ಲಿ ಸೇರಿಸಲ್ಪಟ್ಟವು ಎಂದು ಕೆಲವರು ಚಕಿತಗೊಂಡಿರುತ್ತಾರೆ. ಒಮ್ಮೆ ನಾವು 1ನೇ ಅಧ್ಯಾಯದಲ್ಲಿ ಯೇಸುವಿನ ಮಹಿಮೆಯನ್ನು ಕಂಡ ಬಳಿಕ, 4 ಮತ್ತು 5 ಅಧ್ಯಾಯಗಳಲ್ಲಿರುವ ಪರಲೋಕದ ವೈಭವವನ್ನು ಕಾಣುವದಕ್ಕೆ ಸಿದ್ಧಗೊಂಡಿರುತ್ತೇವೆ. ಅದರ ಬದಲಾಗಿ, 2 ಮತ್ತು 3 ಅಧ್ಯಾಯಗಳಲ್ಲಿ ಸಭೆಗಳ ಅಪರಾಧಿತ್ವವನ್ನು ಕುರಿತು ಓದುತ್ತೇವೆ. ಈ ಪತ್ರಗಳು ಅನಂತರದಲ್ಲಿ ಪುಸ್ತಕದಲ್ಲಿ ಸೇರ್ಪಡೆಗೊಳಿಸಲ್ಪಟ್ಟವೆಂದು ಕೆಲವರು ಅಭಿಪ್ರಾಯ ಪಡುತ್ತಾರೆ, ಆದರೆ ಅವುಗಳು ಆರಂಭದಿಂದಲೇ ಪ್ರಕಟನೆ ಪುಸ್ತಕದ ಭಾಗವಾಗಿದ್ದವೆಂಬುದನ್ನು ಹಸ್ತಪ್ರತಿಗಳ ಪುರಾವೆಯು ಸೂಚಿಸುತ್ತದೆ.

ಈ ಪತ್ರಗಳು ಹಲವಾರು ಉದ್ದೇಶಗಳನ್ನು ನೆರವೇರಿಸುತ್ತವೆ. ಮೊದಲನೆಯದಾಗಿ, ಅವುಗಳು ಪುಸ್ತಕವನ್ನು ಕಾರ್ಯರೂಪವಾಗಿಸುವದಕ್ಕೆ ಸಹಾಯ ಮಾಡುತ್ತವೆ. ಪತ್ರಗಳಿಲ್ಲದ ಹೋಗಿದ್ದರೆ, 1:3ರಲ್ಲಿರುವ ಬರೆದಿರುವ ಮಾತುಗಳನ್ನು "ಓದುವವನೂ" ಮತ್ತು "ಕೇಳುವಂಥವರೂ" ಎಂಬುದಕ್ಕೆ ಅಷ್ಟೇನೂ ಅರ್ಥವಿರುತ್ತಿರಲಿಲ್ಲ, ಯಾಕೆಂದರೆ ಪುಸ್ತಕದ ಉಳಿದ ಭಾಗದಲ್ಲಿರುವ ಒಟ್ಟಾರೆ ಆಜ್ಞೆಗಳಿಗಿಂತಲೂ ಅಧಿಕವಾದ ನೇರವಾಗಿ ಹೇಳಲ್ಪಟ್ಟಿರುವ

ಆಜ್ಞೆಗಳನ್ನು 2 ಮತ್ತು 3 ಅಧ್ಯಾಯಗಳು ಒಳಗೊಂಡಿರುತ್ತವೆ.

ಎರಡನೆಯದಾಗಿ, ಈ ಪತ್ರಗಳು ಮಹಿಮೆಗೊಂಡ ಕರ್ತನ ದರ್ಶನದಿಂದ 4ರಿಂದ 22 ಅಧ್ಯಾಗಳಲ್ಲಿನ ದರ್ಶನಗಳಿಗೆ ಒಂದು ಸಂಕ್ರಮಣವನ್ನು (ಬದಲಾಗುವಿಕೆ) ಒದಗಿಸುತ್ತವೆ. ಯೇಸು ಸಭೆಗಳಿಗೆ ನೀಡಿರುವ ಸಂದೇಶಗಳು ಮೂರು-ವಿಧವಾದ ಗಮನವನ್ನು ಕೇಂದ್ರಿಕರಿಸುತ್ತವೆ:

1. ಅವುಗಳು *ಹಿಂದಕ್ಕೆ* 1ನೇ ಅಧ್ಯಾಯವನ್ನು ದೃಷ್ಟಿಸುತ್ತವೆ. ಪ್ರತಿ ಪತ್ರದ ಆರಂಭದಲ್ಲಿ, ಕ್ರಿಸ್ತನ ಕುರಿತಾದ ಒಂದು ಬಣ್ಣನೆಯನ್ನು ನೋಡುತ್ತೇವೆ, ಮತ್ತು ಸಾಮಾನ್ಯವಾಗಿ ಇದು ಆರಂಭಿಕ ದರ್ಶನದಿಂದ ತೆಗೆದುಕೊಂಡದ್ದಾಗಿರುತ್ತದೆ. ಈ ನಮೂನೆಗೆ ಒಂದು ವಿನಾಯಿತು ಇರುತ್ತದೆ: ಲವೊದಿಕೀಯದಲ್ಲಿನ ಸಭೆಗೆ ಬರೆದ ಪತ್ರವು 1ನೇ ಅಧ್ಯಾಯದಲ್ಲಿ ಒಂದು ಮಾತನ್ನು ಮಾತ್ರವೇ ಎರವಲು ಪಡೆಯುತ್ತದೆ (1:5; 3:14).

2. ಅವುಗಳು ಯೋಹಾನನ ದಿನದಲ್ಲಿನ ಸ್ಥಿತಿಗಳನ್ನು *ಸುತ್ತಲು* ನೋಡುತ್ತವೆ. ಪ್ರತಿಯೊಂದು ಪತ್ರದ ಹೃದಯಭಾಗದಲ್ಲಿ, ಆ ಕಾಲಕ್ಕಾಗಿನ ಒಂದು ಭಾವವನ್ನು ಹೊಂದುತ್ತೇವೆ, ಯಾಕೆಂದರೆ ಯೇಸು ಪ್ರತಿಯೊಂದು ಸಭೆಯ ವಿಶಿಷ್ಟವಾದ ಸವಾಲನ್ನುದ್ದೇಶಿಸಿ ಮಾತಾಡುತ್ತಾನೆ.

3. ಅವುಗಳು *ಮುಂದಕ್ಕೆ*4 ರಿಂದ 22 ಅಧ್ಯಾಯಗಳನ್ನು ನೋಡುತ್ತವೆ. ಪತ್ರಗಳ ಮುಕ್ತಾಯದ ಭಾಗಗಳು ಪುಸ್ತಕದ ಉಳಿದ ಭಾಗದಲ್ಲಿನ ಪ್ರಧಾನ ಚರ್ಚೆಯಾಂಶವನ್ನು ಎದುರುನೋಡುವಂಥ ವಾಗ್ದಾನಗಳನ್ನು ಒಳಗೊಂಡಿರುತ್ತವೆ. ವಾಗ್ದಾನಗಳಲ್ಲಿ ಕೆಲವೊಂದು ಪ್ರಕಟನೆ ಪುಸ್ತಕದ ಉಳಿದ ಭಾಗದೊಂದಿಗೆ ಸಂಬಂಧವನ್ನು ಹೊಂದಿರುವದು ಸ್ಪಷ್ಟವಾಗಿ ಕಾಣಿಸುತ್ತದೆ; ಇನ್ನಿತರ ಸಂಬಂಧಗಳು ಅಷ್ಟಾಗಿ ಸ್ಪಷ್ಟವಾಗಿರುವದಿಲ್ಲ. ಉದಾಹರಣೆಗೆ, ಎಫೆಸದಲ್ಲಿರುವ ಸಭೆಗೆ ಬರೆದ ಪತ್ರದಲ್ಲಿ ಜೀವವೃಕ್ಷದ ಫಲವನ್ನು ತಿನ್ನುವ ಕುರಿತ ವಾಗ್ದಾನವನ್ನು ಇರುತ್ತದೆ (2:7), ಮತ್ತು ಜೀವವೃಕ್ಷದ ಕುರಿತು ನಾವು ಕೊನೆಯ ಅಧ್ಯಾಯದಲ್ಲಿ ಓದುತ್ತೇವೆ (22:2). ಸಾರ್ದಿಸಿನಲ್ಲಿ "ಜಯಶಾಲಿಗಳಿಗೆ" "ಶುಭ್ರವಸ್ತ್ರಗಳನ್ನು ಹೊದಿಸುವರು" ಎಂದು ವಾಗ್ದಾನ ಮಾಡಲ್ಪಟ್ಟಿರುತ್ತದೆ (3:5); ಅನಂತರದಲ್ಲಿ "ಮಹ ಸಮೂಹವು ಸಿಂಹಾಸನದ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ ನಿಂತಿದ್ದರು," "ಅವರು ಬಿಳೀ ನಿಲುವಂಗಿಗಳನ್ನು ತೊಟ್ಟುಕೊಂಡಿದ್ದರು" ಎಂದು ಓದುತ್ತೇವೆ (7:9).

ಹೆಚ್ಚು ಪ್ರಾಮುಖ್ಯಕರವಾಗಿ, ಪುಸ್ತಕದಲ್ಲಿರುವ ಕ್ರಿಸ್ತನ ಒಟ್ಟಾರೆಯಾದ ಉದ್ದೇಶಕ್ಕೆ ಈ ಪತ್ರಗಳು ಸಾರಭೂತವಾಗಿರುತ್ತವೆ: ಆತನು ದಬ್ಬಾಳಿಕೆಗೊಳಗಾಗಿರುವ ಕ್ರೈಸ್ತರನ್ನು ಪ್ರೋತ್ಸಾಹಿಸಬೇಕೆಂದು ಮತ್ತು ಅವರನ್ನು ಇನ್ನು ಅಧಿಕವಾದ ಹಿಂಸೆಗೋಸ್ಕರ ಸಿದ್ಧಗೊಳಿಸಬೇಕೆಂದು ಬಯಸಿದ್ದನು. ಅಂತಿಮವಾಗಿ, ಒಳ್ಳೇದು ಜಯಿಸುವದೆಂಬ ಬಗ್ಗೆ ಅವರಿಗೆ ಭರವಸವನ್ನು ನೀಡಬೇಕೆಂದು ಬಯಸಿದನು. ಆತನು ಇದನ್ನು ಮಾಡುವದಕ್ಕೆ ಒಂದು ಪ್ರಶ್ನೆಗೆ ಉತ್ತರಿಸುವದು ಅಗತ್ಯವಾಗಿತ್ತು: ಸಮೀಪಿಸುತ್ತಿದ್ದ ಬಿರುಗಾಳಿಯನ್ನು ಎದುರುಗೊಳ್ಳಲು ಅವರು ಸಿದ್ಧರಾಗಿದ್ದರೋ? ಕರ್ತನು ಬಂಡಾಯಗಾರರು ಹಾಗೂ ಅವಿಧೇಯರಾದ ಜನರನ್ನು ಆಶೀರ್ವದಿಸುವದಕ್ಕೆ ಸಾಧ್ಯವಿಲ್ಲ (ನೋಡಿರಿ ಯೆಹೋಶುವ 7:1-26). ಕರ್ತನು ಸಭೆಗಳಿಗೆ ಪ್ರೋತ್ಸಾಹವನ್ನು ಕೊಡುವದಕ್ಕೆ ಮುಂಚೆ, ಆತನು ಅವರಿಗೆ ಒಂದು ಪರೀಕ್ಷೆಯನ್ನು ಕೊಡಬೇಕಾಗಿತ್ತು. ಆ ಬಳಿಕ ಆತನು ಅವರನ್ನು ಅವರ ಬಲಗಳಲ್ಲಿ ದೃಢಪಡಿಸಿ, ಅವರ ಬಲಹೀನತೆಗಳಲ್ಲಿ ತಿದ್ದುವದಕ್ಕೆ, ಮತ್ತು ಅವರ ಭಯಗಳಲ್ಲಿ ಅವರನ್ನು ಸಂತೈಸುವದಕ್ಕೆ ಶಕ್ತನಾಗುತ್ತಿದ್ದನು. ಆದದರಿಂದ, ಪತ್ರಗಳ ಪ್ರಾಥಮಿಕವಾದ ಉದ್ದೇಶವು ಸಭೆಗಳನ್ನು ಅವುಗಳ

ಎದುರಿಗಿದ್ದ ಹೋರಾಟಕ್ಕಾಗಿ *ಸಿದ್ಧಗೊಳಿಸುವದೇ* ಆಗಿತ್ತು.

ಪತ್ರಗಳಲ್ಲಿ ಒಂದು ಮಾದರಿಯು ಇರುವದನ್ನು ಕಂಡು ಹಿಡಿಯುವದು ಕಷ್ಟಕರವೇನಲ್ಲ: ಎಲ್ಲಾ ಪತ್ರಗಳು ಒಂದೇ ರೀತಿಯಲ್ಲಿ ಆರಂಭಗೊಳ್ಳುತ್ತವೆ, ಕಿವಿಗೊಡಬೇಕು ಎಂಬುದರ ಕುರಿತು ಅಂತ್ಯದಲ್ಲಿ ಪ್ರತಿ ಸಾರಿಯೂ ಒಂದೇ ವಿಧವಾದ ಮಾತುಗಳು ಬಳಸಲ್ಪಟ್ಟಿರುತ್ತವೆ, ಮತ್ತು "ಜಯಶಾಲಿ" ಆಗುವವನಿಗೆ ಎಲ್ಲಾ ಪತ್ರಗಳು ಸಹ ವಾಗ್ದಾನಗಳನ್ನು ಒಳಗೊಂಡಿರುತ್ತವೆ. ಹೇಗೂ, ಈ ಮಾದರಿಯ ಪೂರ್ಣ ವಿಸ್ತಾರವು ತಕ್ಷಣದಲ್ಲಿ ಸ್ಪಷ್ಟವಾಗಿ ಕಾಣಿಸದೆ ಇರಬಹುದಾಗಿದೆ. ಬಹುಪಾಲು ಪತ್ರಗಳು ಏಳು ಅಂಶಗಳನ್ನು ಹಂಚಿಕೊಂಡಿರುತ್ತವೆ: (1) ಒಂದು ಅಭಿವಂದನೆ ಅಥವಾ ನಮಸ್ಕಾರ ತಿಳಿಸುವಿಕೆ, (2) ಯೇಸುವಿನ ಕುರಿತಾದ ಒಂದು ಬಣ್ಣನೆ, (3) ಒಟ್ಟಾರೆಯಾಗಿ ಸಭೆಯನ್ನು ಶ್ಲಾಘಿಸುವದು, (4) ಒಟ್ಟಾರೆಯಾಗಿ ಇಡೀ ಸಭೆಯ ಖಂಡಿಸುವಿಕೆ, (5) ಒಂದು ಎಚ್ಚರಿಕೆ ಮತ್ತು ಒಂದು ಬೆದರಿಕೆ, (6) ಒಂದು ಬುದ್ಧಿವಾದ, ಮತ್ತು (7) ಒಂದು ವಾಗ್ದಾನ.

*ಅಭಿವಂದನೆಯು* ಪ್ರತಿಯೊಂದು ಪತ್ರದಲ್ಲಿಯೂ ಒಂದೇ ರೀತಿಯಾಗಿರುತ್ತದೆ. "[ಇಂಥಿಂಥ ಪಟ್ಟಣದಲ್ಲಿರುವ] ಸಭೆಯ ದೂತನಿಗೆ ಬರೆ." *ಬುದ್ಧಿವಾದವು* ಹೆಚ್ಚುಕಡಿಮೆ ಒಂದೇ ರೀತಿಯಲ್ಲಿರುತ್ತದೆ: "ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ." ನಾವು ನೋಡಿರುವ ಪ್ರಕಾರ, ಎರಡು ಅಂಶಗಳು ಪುಸ್ತಕದ ಉಳಿದ ಭಾಗದೊಂದಿಗೆ ಜೋಡಣೆಗೊಳ್ಳುತ್ತವೆ: ಬಹುಪಾಲು ಪತ್ರಗಳಲ್ಲಿ, *ಯೇಸುವಿನ ಕುರಿತಾದ ಬಣ್ಣನೆಯು* 1ನೇ ಅಧ್ಯಾಯದಲ್ಲಿನ ದರ್ಶನದಿಂದ ತೆಗೆದುಕೊಳ್ಳಲಾಗಿರುತ್ತದೆ, ಮತ್ತು *ವಾಗ್ದಾನಗಳು* ಪುಸ್ತಕದಲ್ಲಿ ನಂತರದ ವಿಭಾಗಗಳಿಗೆ ವಿಸ್ತರಿಸಲ್ಪಡುತ್ತವೆ. ಹೀಗೆ ಪತ್ರಗಳಲ್ಲಿ ದೊಡ್ಡ ವ್ಯತ್ಯಾಸಗಳು (3), (4), ಮತ್ತು (5) ವಿಭಾಗಗಳಲ್ಲಿ ಬರುತ್ತವೆ. ವಿಶೇಷವಾಗಿ ಅವುಗಳಲ್ಲಿ ಎರಡು ಸಭೆಗಳಿಗೆ *ಶ್ಲಾಘನೆಯು* ಮಾಡಲ್ಪಟ್ಟಿರುವದಿಲ್ಲ, ಅದೇ ವೇಳೆಯಲ್ಲಿ ಎರಡು ಸಭೆಗಳಿಗೆ ಖಂಡನೆಯು ಮಾಡಲ್ಪಟ್ಟಿರುವದಿಲ್ಲ ಎಂಬುದನ್ನು ಗಮನಿಸಿರಿ-ಮತ್ತು ಆದಕಾರಣ *ಎಚ್ಚರಿಕೆಯು* ಕಾಣಿಸುವದಿಲ್ಲ. ನಾವು ಮುಂದೆ ಕಲಿಯಲಿರುವ ಪ್ರಕಾರ, ಈ ವ್ಯತ್ಯಾಸಗಳಿಗೆ ಮಹತ್ವವಿರುವದಿಲ್ಲ.

ಪತ್ರಗಳ ವಿನ್ಯಾಸದ ಕುರಿತು ಇನ್ನೊಂದು ಗುಣಸ್ವಭಾವವನ್ನು ಗಮನಕ್ಕೆ ತರಬೇಕಾಗಿರುತ್ತದೆ: ಮೊದಲ ಮೂರು ಪತ್ರಗಳಲ್ಲಿ, ವಾಗ್ದಾನಕ್ಕೆ ಮುಂಚೆ ಬುದ್ಧಿವಾದವು ಇದ್ದರೆ, ಕೊನೆಯ ನಾಲ್ಕು ಪತ್ರಗಳಲ್ಲಿ ಬುದ್ಧಿವಾದಕ್ಕೆ ಮುಂಚೆ ವಾಗ್ದಾನವು ಇರುತ್ತದೆ. ನಾವು ಈ ಮುಂಚೆ ಹೇಳಿದ ಪ್ರಕಾರ, ಪ್ರಕಟನೆ ಪುಸ್ತಕದಲ್ಲಿ ಅನೇಕ ಸಾರಿ ಏಳರ ಪಟ್ಟಿಯನ್ನು ಮೂರು ಮತ್ತು ನಾಲ್ಕರ ಗುಂಪುಗಳಾಗಿ ವಿಂಗಡಿಸಲಾಗಿರುತ್ತದೆ (ಅಥವಾ ನಾಲ್ಕು ಮತ್ತು ಮೂರು). ಕೆಲವರು ನಂಬುವ ರೀತಿಯಲ್ಲಿ ಪ್ರಕಟನೆ ಪುಸ್ತಕವು ಒಂದಕ್ಕೊಂದು ಸಂಬಂಧವಿಲ್ಲದ ದೃಶ್ಯಗಳ ಒಂದು ಅವ್ಯವಸ್ಥೆಯಾಗಿರುವದಿಲ್ಲ; ಇದರ ವಿಷಯದಲ್ಲಿ ಕಾಕತಾಳೀಯ ಎನ್ನುವಂಥದ್ದು ಯಾವದೂ ಇರುವದಿಲ್ಲ.

ನಾವು ಈ ಏಳು ಪತ್ರಗಳನ್ನು ಅಧ್ಯಯನ ಮಾಡುತ್ತಿರುವ ವೇಳೇ, ಯೇಸು ಸಭೆಗಳ ಮಧ್ಯದಲ್ಲಿ ನಡೆದಾಡುತ್ತಿರುವ, ಅವುಗಳನ್ನು ಪರೀಕ್ಷಿಸುತ್ತಿರುವ, ಮತ್ತು ಮುಂದಿರುವ ಅಗ್ನಿಪರೀಕ್ಷೆಗಾಗಿ ಅವರನ್ನು ಸಿದ್ಧಗೊಳಿಸುವ ಕುರಿತಾದ ದರ್ಶನದ ಮೇಲಿನ ನಿಮ್ಮ ದೃಷ್ಟಿಯನ್ನು ಕಳೆದುಕೊಳ್ಳಬೇಡಿರಿ. Harold Hazelipನು ಈ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ:

ಪ್ರತಿಯೊಂದು ಪತ್ರವು ಒಂದು ವಿಶಿಷ್ಟವಾದ ಟಿಪ್ಪಣಿಯನ್ನು ಹೊಂದಿವೆ-ಅದರ

ಸಂದೇಶವನ್ನೆಲ್ಲಾ ಸಾರಾಂಶಗೊಳಿಸುವಂಥ ಒಂದೇ ಒಂದು ಹೃದಯವನ್ನು ಮುಟ್ಟುವಂಥ ಮಾತು ಅಥವಾ ಸವಾಲನ್ನು ನೀಡುವ ಪದಗುಚ್ಛ. ನಾವು ಬೇರೆ ಬೇರೆ ಟಿಪ್ಪಣಿಗಳನ್ನು ಒಂದುಗೂಡಿಸುವದಾದರೆ, ಇಂದು ಕ್ರಿಸ್ತನು ತನ್ನ ಸಭೆಯಲ್ಲಿ ಏನು ಇರಬೇಕೆಂದು ಬಯಸುತ್ತಾನೆಂಬ ಕುರಿತು ಒಂದು ಉತ್ತಮವಾದ ಏಳು-ಅಂಶಗಳ ಬಣ್ಣನೆಯು ನಮಗೆ ಸಿಕ್ಕುವದು.[2]

Hazelipನು ಬಳಿಕ ಪ್ರತಿಯೊಂದು ಸಭೆಗಳಿಗಾಗಿರುವ ಮುಖ್ಯ ಪದಗಳನ್ನು ಮುಂದಿಡುತ್ತಾನೆ: ಎಫೆಸದಲ್ಲಿರುವ ಸಭೆಯು ತನ್ನ ಮೊದಲ *ಪ್ರೀತಿ*ಗೆ ಹಿಂದಿರುಗುವ ಅಗತ್ಯವಿತ್ತು (2:4); ಸ್ಮುರ್ನದಲ್ಲಿರುವ ಸಭೆಯು *ಬಾಧೆಯನ್ನನುಭವಿಸುವದಕ್ಕೆ* ಸಿದ್ಧಗೊಳ್ಳಬೇಕಾಗಿತ್ತು (2:10); ಪೆರ್ಗಮದಲ್ಲಿರುವ ಸಭೆಯು *ಸತ್ಯ*ದ ಪರವಾಗಿ ನಿಲ್ಲಬೇಕಾಗಿತ್ತು (2:14, 15); ಥುವತ್ತೈರದಲ್ಲಿರುವ ಸಭೆಗೆ ಇನ್ನಷ್ಟು ಪರಿಶುದ್ಧತೆಯ ಅಗತ್ಯವಿತ್ತು (2:20); ಸಾರ್ದಿಸಿನಲ್ಲಿರುವ ಸಭೆಯಲ್ಲಿ *ಪ್ರಾಮಾಣಿಕತೆಯ* ಕೊರತೆಯಿತ್ತು (3:1); ಫಿಲದೆಲ್ಫಿಯದಲ್ಲಿರುವ ಸಭೆಗೆ *ಸುವಾರ್ತೆ ಸಾರುವದಕ್ಕಿರುವ* ಸದವಕಾಶಗಳನ್ನು ತೆಗೆದುಕೊಳ್ಳುವಂತೆ ಬೇಡಿಕೊಳ್ಳಲಾಯಿತು (3:8); ಮತ್ತು ಲವೊದಿಕೀಯದಲ್ಲಿರುವ ಸಭೆಯು *ಸಮರ್ಪಣೆ*ಯ ಕೊರತೆಗಾಗಿ ಖಂಡಿಸಲ್ಪಟ್ಟಿತು (3:15).[3] Hazelipನು ಅಂತಿಮವಾಗಿ ಹೇಳಿದ್ದೇನೆಂದರೆ, "ನಾವು ಈ ಏಳು ಗುಣಸ್ವಭಾವಗಳನ್ನು ಒಂದು ಸಭೆಯಲ್ಲಿ ಒಂದುಗೂಡಿಸುವದಾದರೆ-ಪ್ರೀತಿ, ಬಾಧೆಯನ್ನನುಭವಿಸುವಿಕೆ, ಸತ್ಯ, ಪರಿಶುದ್ಧತೆ, ಪ್ರಾಮಾಣಿಕತೆ, ಸುವಾರ್ತಾಸೇವೆ ಮತ್ತು ಸಮರ್ಪಣೆ-ನಮ್ಮ ಮುಂದೆ ಒಂದು ಆದರ್ಶವಾದ ದೇವರ ಜನರ ಸಮುದಾಯವು ಇರುವದಾಗಿರುತ್ತದೆ."[4] ಪತ್ರಗಳು ಇಂದಿನ ಸಭೆಗೆ ಅತ್ಯಂಥ ಕಾರ್ಯರೂಪದ ಉಪದೇಶವನ್ನು ಒಳಗೊಂಡಿರುತ್ತದೆ. ನಮಗೆ ಆಸ್ಯ ಸೀಮೆಯಲ್ಲಿರುವ ಏಳು ಸಭೆಗಳಿಗೆ ಬರೆದಿರುವ ಪತ್ರಗಳಲ್ಲಿ ಪಾಠಗಳ ಅಗತ್ಯವಿರುತ್ತದೆ.

## ಎಫೆಸ: ಹೃದಯ ಸಮಸ್ಯೆ ಹೊಂದಿದ್ದ ಸಭೆ (2:1-7)

**1ಎಫೆಸದಲ್ಲಿರುವ ಸಭೆಯ ದೂತನಿಗೆ ಬರೆ - ಏಳು ನಕ್ಷತ್ರಗಳನ್ನು ಬಲಗೈಯಲ್ಲಿ ಹಿಡಿದುಕೊಂಡು ಏಳು ಚಿನ್ನದ ದೀಪಸ್ತಂಭಗಳ ಮಧ್ಯದಲ್ಲಿ ತಿರುಗಾಡುವಾತನು ಹೇಳುವದೇನೆಂದರೆ - 2ನಿನ್ನ ಕೃತ್ಯಗಳನ್ನೂ ಪ್ರಯಾಸವನ್ನೂ ತಾಳ್ಮೆಯನ್ನೂ ಬಲ್ಲೆನು; ನೀನು ದುಷ್ಟರನ್ನು ಸಹಿಸಲಾರಿ; ಅಪೊಸ್ತಲರಲ್ಲದಿದ್ದರೂ ತಮ್ಮನ್ನು ಅಪೊಸ್ತಲರೆಂದು ಹೇಳಿಕೊಳ್ಳುವವರನ್ನು ನೀನು ಪರೀಕ್ಷಿಸಿ ಅವರನ್ನು ಸುಳ್ಳುಗಾರರೆಂದು ಕಂಡುಕೊಂಡಿ; 3ನೀನು ತಾಳ್ಮೆಯುಳ್ಳವನಾಗಿ ನನ್ನ ಹೆಸರಿನ ನಿಮಿತ್ತ ಬಾಧೆಯನ್ನು ಸೈರಿಸಿಕೊಂಡು ಬೇಸರಗೊಳ್ಳಲಿಲ್ಲ;
4ಇದನ್ನೆಲ್ಲಾ ಬಲ್ಲೆನು. ಆದರೆ ಮೊದಲು ನಿನಗಿದ್ದ ಪ್ರೀತಿಯನ್ನು ನೀನು ಬಿಟ್ಟು ಬಿಟ್ಟಿದ್ದೀಯೆಂದು ನಾನು ನಿನ್ನ ಮೇಲೆ ತಪ್ಪುಹೊರಿಸಬೇಕಾಗುತ್ತದೆ. 5ಆದದರಿಂದ ನೀನು ಎಲ್ಲಿಂದ ಬಿದ್ದಿದ್ದೀಯೋ ಅದನ್ನು ನಿನ್ನ ನೆನಪಿಗೆ ತಂದುಕೊಂಡು ದೇವರ ಕಡೆಗೆ ತಿರುಗಿಕೋ. ನೀನು ಮೊದಲು ಮಾಡುತ್ತಿದ್ದ ಕೃತ್ಯಗಳನ್ನು ಮಾಡು. ನೀನು ದೇವರ ಕಡೆಗೆ ತಿರುಗಿಕೊಳ್ಳದೆ ಹೋದರೆ ನಾನು ಬಂದು ನಿನ್ನ ದೀಪಸ್ತಂಭವನ್ನು ಅದರ ಸ್ಥಳದಿಂದ ತೆಗೆದು ಹಾಕುವೆನು. 6ಆದರೆ ನಿನ್ನಲ್ಲಿ ಒಳ್ಳೇದು ಒಂದುಂಟು, ಅದೇನಂದರೆ - ನಾನು ದ್ವೇಷಿಸುವ ನಿಕೊಲಾಯಿತರ ಕೃತ್ಯಗಳನ್ನು ನೀನು ಸಹ ದ್ವೇಷಿಸುತ್ತಿ. 7ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ. ಯಾವನು ಜಯಹೊಂದುತ್ತಾನೋ ಅವನಿಗೆ ದೇವರ ಪರದೈಸಿನಲ್ಲಿರುವ ಜೀವದಾಯಕ ವೃಕ್ಷದ ಹಣ್ಣನ್ನು ತಿನ್ನುವದಕ್ಕೆ ಕೊಡುವೆನು.**

ಬಹುಶಃ ಎಫೆಸ ಪಟ್ಟಣವು "ಏಳು ಪಟ್ಟಣಗಳಲ್ಲಿಯೇ ಅತ್ಯಂಥ ಪ್ರಾಮುಖ್ಯವಾದ ಪಟ್ಟಣವಾಗಿದ್ದ"[5] ಕಾರಣದಿಂದಾಗಿ ಈ ಸಭೆಗೆ ಮೊದಲು ಬರೆಯಲ್ಪಟ್ಟಿರಬಹುದಾಗಿದೆ. ಅಲ್ಲದೆ ಪೌಲನು ಈ ಮುಂಚೆ ಮಾಡಿಕೊಂಡಿದ್ದ ಪ್ರಕಾರವೇ, ಯೋಹಾನನು ಈ ಎಫೆಸವನ್ನು ತನ್ನ ಕಾರ್ಯಾಚರಣೆಯ ನೆಲೆಯನ್ನಾಗಿ ಮಾಡಿಕೊಂಡಿದ್ದರ ನಿಮಿತ್ತವಾಗಿ ಎಫೆಸ ಸಭೆಗೆ ಮೊದಲು ಬರೆಯಲ್ಪಟ್ಟಿರಬಹುದಾದ ಸಾಧ್ಯತೆಯಿರುತ್ತದೆ.

ಎಫೆಸ ಪಟ್ಟಣವು "ಆಸ್ಯ ಸೀಮೆಯ ರತ್ನ" ಎಂದು ಕರೆಯಲ್ಪಡುತ್ತಿತ್ತು. ಅದು ಆ ಭಾಗದ ಜಗತ್ತಿನಲ್ಲಿ ವ್ಯಾಪಾರದ ಕೇಂದ್ರವಾಗಿತ್ತು ಮತ್ತು ಪ್ರಪಂಚದ ಏಳು ಅದ್ಭುತಗಳಲ್ಲೊಂದಾದ ಅರ್ತೆಮಾ (ಡಯಾನಾ) ದೇವತೆಯ ದೇವಾಲಯದ ನೆಲೆ ಎಂಬ ಹೆಗ್ಗಳಿಕೆಯನ್ನು ಹೊಂದಿತ್ತು. ಅದು ವೈಭವವುಳ್ಳ, ಸಂಸ್ಕೃತಿಯುಳ್ಳ, ಮತ್ತು ಸಮೃದ್ಧವಾದ ನಗರವಾಗಿತ್ತು. ಇಂದು ಟರ್ಕಿ ದೇಶದ ಸೆಲ್ಚುಕ್ ಪಟ್ಟಣದ ಹತ್ತಿರವಿರುವದಾಗಿದ್ದು, ಎಫೆಸ ಪಟ್ಟಣದ ಭಗ್ನಾವಶೇಷಗಳು ವಿಸ್ತಾರವಾದವುಗಳು ಹಾಗೂ ಪ್ರಭಾವಕರವಾಗಿವೆ, ಅವುಗಳಲ್ಲಿ ನಾಟಕಶಾಲೆ (ಅಪೊಸ್ತಲರ ಕೃತ್ಯಗಳು 19:29, 31), ಸೆಲ್ಸಸ್ ಗ್ರಂಥಾಲಯ, ದೇವಾಲಯಗಳು, ಸ್ನಾನಗೃಹಗಳು, ವ್ಯಾಯಾಮಶಾಲೆಗಳು, ಹಾಗೂ ಬೀದಿಗಳು ಸೇರಿವೆ.

ಎಫೆಸವು ಸುವಾರ್ತೆಯ ಹರಡುವಿಕೆಯ ವಿಷಯದಲ್ಲಿ ಸಹ ಮಹತ್ವವನ್ನು ಹೊಂದಿತ್ತು. ಪೌಲನು ಹೆಚ್ಚುಕಡಿಮೆ ಮೂರು ವರ್ಷಗಳ ಕಾಲ ಅಲ್ಲಿದ್ದುಕೊಂಡು ಪ್ರಯಾಸ ಪಟ್ಟನು (ಅಪೊಸ್ತಲರ ಕೃತ್ಯಗಳು 19:1-22; 20:31). ಆ ವೇಳೆಯಲ್ಲಿ, "ಆಸ್ಯಸೀಮೆಯಲ್ಲಿ ವಾಸವಾಗಿದ್ದ ಯೆಹೂದ್ಯರೂ ಗ್ರೀಕರೂ ಎಲ್ಲರೂ ಕರ್ತನ ವಾಕ್ಯವನ್ನು ಕೇಳಿದರು" (ಅಪೊಸ್ತಲರ ಕೃತ್ಯಗಳು 19:10). ಬಹಳಷ್ಟು ಅಲ್ಲದಿದ್ದಾಗ್ಯೂ, ಏಳು ಸಭೆಗಳೊಳಗೆ ಅನೇಕ ಸಭೆಗಳು ಆ ಕಾಲದ ವೇಳೆ ಸ್ಥಾಪಿಸಲ್ಪಟ್ಟಿರುತ್ತವೆ. ಅನಂತರ, ಪೌಲನು ಯೆರೂಸಲೇಮಿಗೆ ಪ್ರಯಾಣಿಸುತ್ತಿರುವ ವೇಳೆ, ಆತನು ಎಫೆಸದ ಹಿರಿಯರನ್ನು ಭೇಟಿಯಾದನು ಮತ್ತು ಮುಂದೆ ಎದ್ದು "ವ್ಯತ್ಯಾಸ ಬೋಧನೆಗಳನ್ನು ಮಾಡಿ ಯೇಸುವಿನ ಶಿಷ್ಯರನ್ನು ತಮ್ಮ ಹಿಂದೆ ಎಳಕೊಳ್ಳುವದು" ಎಂಬುದಾಗಿ ಸುಳ್ಳು ಬೋಧಕರ ಕುರಿತು ಅವರನ್ನು ಎಚ್ಚರಿಸಿದನು (ಅಪೊಸ್ತಲರ ಕೃತ್ಯಗಳು 20:30). ಪೌಲನು ರೋಮಾಪುರದಲ್ಲಿರುವ ಸೆರೆಮನೆಯಲ್ಲಿರುವ ವೇಳೆ, ಆತನು ಎಫೆಸದಲ್ಲಿನ ಸಭೆಗೆ ಒಂದು ಪತ್ರಿಕೆಯನ್ನು ಬರೆದನು. ಪೌಲನು ಬಿಡುಗಡೆಗೊಂಡ ಬಳಿಕ, ಆತನು ಎಫೆಸದಲ್ಲಿದ್ದುಕೊಂಡು "ಅಲ್ಲಿರುವ ಕೆಲವರಿಗೆ - ನೀವು ಬೇರೆ ಉಪದೇಶವನ್ನು ಮಾಡಬಾರದೆಂದು" ಆಜ್ಞಾಪಿಸಬೇಕೆಂದು ತಿಮೊಥೆಯನನ್ನು ಎಫೆಸದಲ್ಲಿ ಬಿಟ್ಟು ಹೋದನು (1 ತಿಮೊಥೆ 1:3). ಕೆಲವು ವರ್ಷಗಳ ಬಳಿಕ, ಎಫೆಸವು ಅಪೊಸ್ತಲನಾದ ಯೋಹಾನನಿಗೆ ಸ್ವಂತ ಊರಾಯಿತು, ಆತನು ಅಲ್ಲಿ ತನ್ನ ಜೀವಿತದ ಇಪ್ಪತ್ತು ಅಥವಾ ಮೂವತ್ತು ವರ್ಷಗಳ ಕಾಲ ವಾಸಿಸುವವನಾದನು. ಎಫೆಸ ಪಟ್ಟಣದ ಮೇಲೆ ಬಹಳಷ್ಟು ದೈವಿಕ ಪ್ರೀತಿ ಮತ್ತು ಪ್ರಯಾಸವು ಅನುಗ್ರಹಿಸಲ್ಪಟ್ಟಿತ್ತು.

**ವಚನ 1.** ಪತ್ರದ ಮೊದಲ ಮಾತುಗಳು ಅಭಿವಂದನೆಯ ಮಾತುಗಳಾಗಿವೆ: **ಎಫೆಸದಲ್ಲಿರುವ ಸಭೆಯ ದೂತನಿಗೆ** (ಅಥವಾ ಸಂದೇಶಕನಿಗೆ) **ಬರೆ** (1:16ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪತ್ರವು ಯೇಸುವಿನ ಕುರಿತಾದ ಒಂದು ಬಣ್ಣನೆಯೊಂದಿಗೆ ಮುಂದುವರೆಸುತ್ತದೆ: **ಏಳು ನಕ್ಷತ್ರಗಳನ್ನು ಬಲಗೈಯಲ್ಲಿ ಹಿಡಿದುಕೊಂಡು ಏಳು ಚಿನ್ನದ ದೀಪಸ್ತಂಭಗಳ ಮಧ್ಯದಲ್ಲಿ ತಿರುಗಾಡುವಾತನು.** ಈ ಬಣ್ಣನೆಯು 1ನೇ ಅಧ್ಯಾಯದಲ್ಲಿರುವ ದರ್ಶನದ ಮೇಲೆ ಆಧಾರವಾಗಿದ್ದು, ಎಫೆಸದಲ್ಲಿನ ಸಭೆಯು ತಿಳಿದುಕೊಳ್ಳುವ ಅಗತ್ಯವಿದ್ದ ಎರಡು ವಾಸ್ತವಾಂಶಗಳನ್ನು ಪ್ರತಿಬಿಂಬಿಸುತ್ತದೆ: 1) ಆತನ ಶಕ್ತಿ ಮತ್ತು ಕಾಪಾಡುವಿಕೆ, ಮತ್ತು

2) ಆತನ ಪ್ರಸನ್ನತೆ ಮತ್ತು ಗ್ರಹಿಕೆ.

ಮೊದಲನೆಯದಾಗಿ, ಅವರು ತಮ್ಮ ಬಲಕ್ಕಾಗಿ ಯೇಸುವಿನ ಮೇಲೆ ಅವಲಂಭಿತರಾಗಿದ್ದಾರೆಂಬುದನ್ನು ಬಣ್ಣನೆಯು ಒತ್ತಿ ಹೇಳುತ್ತದೆ. Domitianನು ತನ್ನ ಮಗನು ನಕ್ಷತ್ರಪುಂಜವನ್ನು ಹಿಡಿದುಕೊಂಡಿರುವಂತೆ ಚಿತ್ರವಿರುವ ನಾಣ್ಯವೊಂದನ್ನು ಜರಿಗೆ ತಂದಿದ್ದನು, ವಿಶ್ವದ ಗಮ್ಯತೆಗೆ ಆತನೇ ಹೊಣೆಗಾರನು ಎಂಬ ಸೂಚ್ಯಾರ್ಥವನ್ನು ಅದು ಕೊಡುವದಾಗಿತ್ತು. ಆದರೆ *ತಾನೇ* **ನಕ್ಷತ್ರಗಳನ್ನು ಬಲಗೈಯಲ್ಲಿ** ಹಿಡಿದುಕೊಂಡವನಾಗಿದ್ದಾನೆಯೇ, ಹೊರತು Domitian ಆಗಲಿ ಅಥವಾ ಆತನ ಸಂತಾನವಾಗಲಿ ಅಲ್ಲ ಎಂಬುದನ್ನು ಎಫೆಸದವರು ತಿಳಿದುಕೊಳ್ಳಬೇಕೆಂಬುದು ಯೇಸುವಿನ ಬಯಕೆಯಾಗಿತ್ತು. ಕ್ರಿಸ್ತನು ಸಕಲ ಕಾರ್ಯಗಳನ್ನು ನಿಯಂತ್ರಿಸುವವನಾಗಿದ್ದಾನೆ.

**ಹಿಡಿದುಕೊಂಡು** ಎಂಬುದನ್ನು ಅನುವಾದಿಸುವ κρατέω (*krateō*) ಎಂಬ **ಗ್ರೀಕ್ ಪದವು, "ಒಂದು ದೃಢವಾದ ಹಿಡಿತವನ್ನು ಸೂಚಿಸುತ್ತದೆ."**[6] ಈ ಪದವು ἔχω (*echō*), ಎಂಬ ಗ್ರೀಕ್ ಪದಕ್ಕಿಂತಲೂ ಸಬಲವಾಗಿದ್ದು, 1:16ರಲ್ಲಿ "ಹೊಂದು" ಅಥವಾ "ಹಿಡಿದಿರು" ಎಂದು ಅನುವಾದಿಸಲ್ಪಟ್ಟಿರುತ್ತದೆ. ಯೇಸು ಸಭೆಗಳನ್ನು ಭದ್ರವಾಗಿ ತನ್ನ ಕೈಗಳಲ್ಲಿ ಹೊಂದಿದ್ದನು (1:16ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಹೀಗೆ ಯೇಸುವಿನ *ಶಕ್ತಿ* ಹಾಗೂ *ಕಾಪಾಡುವಿಕೆ*ಗಳು ಒತ್ತಿ ಹೇಳಲ್ಪಟ್ಟಿವೆ.

ಎರಡನೆಯದಾಗಿ, ತಮ್ಮ ಕೃತ್ಯಗಳ ವಿಷಯವಾಗಿ ಅವರು ಯೇಸುವಿಗೆ ಲೆಕ್ಕ ಕೊಡುವವರು ಎಂಬುದನ್ನು ಯೇಸುವಿನ ಕುರಿತಾದ ಬಣ್ಣನೆಯು ಜ್ಞಾಪಕಪಡಿಸುವದಾಗಿತ್ತು. 1ನೇ ಅಧ್ಯಾಯದಲ್ಲಿನ ದರ್ಶನದಲ್ಲಿ, ಯೇಸುವು "ದೀಪಸ್ತಂಭಗಳ ಮಧ್ಯದಲ್ಲಿ *ನಿಂತಿರುವದನ್ನು*" ಯೋಹಾನನು ಕಂಡಿದ್ದನು (1:13); ಈ ಸಾರಿ ಆತನು **ದೀಪಸ್ತಂಭಗಳ ಮಧ್ಯದಲ್ಲಿ** *ತಿರುಗಾಡುವಾತನು* ಎಂದು ವರ್ಣಿಸಲ್ಪಟ್ಟಿದ್ದಾನೆ. ಆತನು ತಿರುಗಾಡುವವನಾಗಿ ಸಭೆಗಳನ್ನು ಪರೀಕ್ಷಿಸಿದನು, ಅವರ ಬಲಗಳನ್ನು ಗಮನಿಸಿದನು, ಅವರ ದುರ್ಬಲತೆಗಳನ್ನು ಕಂಡು ಹಿಡಿದನು, ಮತ್ತು ಅವರ ಆತ್ಮೀಕ ಸ್ಥಿತಿಯ ಲಕ್ಷಣಗಳನ್ನು ಪರಿಶೀಲಿಸಿದನು. ಹೀಗೆ ಯೇಸುವಿನ *ಪ್ರಸನ್ನತೆ* ಹಾಗೂ *ಗ್ರಹಿಕೆ* ಇವುಗಳು ಒತ್ತಿ ಹೇಳಲ್ಪಟ್ಟವು.

**ವಚನ 2.** ಪತ್ರವು ಮುಂದುವರೆದ ಹಾಗೆ, ಎಫೆಸದ ಸಭೆಯು ಶ್ಲಾಘಿಸಲ್ಪಡುತ್ತದೆ. ಆ ಶ್ಲಾಘನೆಯು ಈ ಮಾತುಗಳಿಂದ ಆರಂಭಗೊಳ್ಳುತ್ತದೆ, **ನಿನ್ನ ಕೃತ್ಯಗಳನ್ನು ಬಲ್ಲೆನು. ಬಲ್ಲೆನು** ಎಂಬುದನ್ನು ಅನುವಾದಿಸಿರುವ οἶδα (*oida*) ಎಂಬ ಗ್ರೀಕ್ ಪದದ ಅರ್ಥವು "ಪೂರ್ಣ ತಿಳುವಳಿಕೆಯನ್ನು ಹೊಂದಿರುವದು, ಪರಿಪೂರ್ಣವಾಗಿ ತಿಳಿದುಕೊಳ್ಳುವದು" ಎಂದಾಗಿರುತ್ತದೆ.[7] ನಿನ್ನ ಎಂಬ ಪದವು ಏಕವಚನದಲ್ಲಿದ್ದು ಒಬ್ಬ "ದೂತ"ನನ್ನು ಸೂಚಿಸುತ್ತದೆ (ವ. 1), ಆತನು ಒಂದೇ ಸಭೆಯನ್ನು - ಎಫೆಸದಲ್ಲಿರುವ ಸಭೆ - ಪ್ರತಿನಿಧಿಸುತ್ತಾನೆ. ಗ್ರೀಕ್ ವಾಕ್ಯದಲ್ಲಿ, ಪತ್ರದ ಪೂರ್ತಿಯೂ ಏಕವಚನವು ಬಳಸಲ್ಪಟ್ಟಿದೆ. **ಕೃತ್ಯಗಳು** ಎಂಬ ಪದವು ಒಳ್ಳೇ ಕ್ರಿಯೆಗಳು ಅಥವಾ ಕೆಟ್ಟ ಕ್ರಿಯೆಗಳು ಎರಡನ್ನೂ ಸೂಚಿಸಬಹುದಾಗಿದೆ. CEVಯು ಈ ಪದಗುಚ್ಛವನ್ನು "ನೀನು ಮಾಡಿರುವ ಎಲ್ಲವನ್ನೂ ನಾನು ಬಲ್ಲೆನು" ಎಂದು ಅನುವಾದಿಸುತ್ತದೆ. ಎಫೆಸದ ಕ್ರೈಸ್ತರು "ಆತನ ದೃಷ್ಟಿಗೆ ಸಮಸ್ತವೂ ಮುಚ್ಚುಮರೆಯಿಲ್ಲದ್ದಾಗಿಯೂ ಬೈಲಾದದ್ದಾಗಿಯೂ ಅದೆ" ಎಂಬುದನ್ನು ಅರ್ಥಮಾಡಿಕೊಳ್ಳುವ ಅಗತ್ಯವಿತ್ತು (ಇಬ್ರಿಯ 4:13).

ಯೇಸು ಮೊದಲು ಆ ಸಭೆಯನ್ನು ಅದರ ಅಚಲತೆಗಾಗಿ ಶ್ಲಾಘನೆಯನ್ನು ಮಾಡಿದನು: **ನಿನ್ನ ಪ್ರಯಾಸವನ್ನೂ ದೃಢನಿಷ್ಠೆಯನ್ನೂ** [ತಾಳ್ಮೆಯನ್ನೂ] **ಬಲ್ಲೆನು. ಪ್ರಯಾಸ** ಎಂಬುದನ್ನು ಅನುವಾದಿಸಿರುವ κόπος (*kopos*) ಎಂಬ ಗ್ರೀಕ್ ಪದವು "ದಣಿವುಗೊಳಿಸುವಂಥ ಪ್ರಯಾಸ"

ಎಂಬ ಅರ್ಥವನ್ನು ಕೊಡುತ್ತದೆ.[8] KJVಯಲ್ಲಿ "ತಾಳ್ಮೆ" ಎಂದಿದ್ದು, ಅದು "ತಾಳ್ಮೆಯಿಂದ ಸಹಿಸಿಕೊಳ್ಳುವಿಕೆ" ಯನ್ನು ಸೂಚಿಸುತ್ತದೆ. ಮಾಡಿ ಮುಗಿಸಬೇಕಾದ ಒಂದು ಕೆಲಸವು ಇರುವದಾದಲ್ಲಿ, ಎಫೆಸದಲ್ಲಿರುವ ಕ್ರೈಸ್ತರು ಕೈಗಳನ್ನು ತಮ್ಮ ಜೇಬುಗಳಲ್ಲಿ ಇಟ್ಟುಕೊಂಡು ಸುಮ್ಮನೆ ಸುತ್ತಲೂ ನೋಡುತ್ತಾ ನಿಂತುಕೊಳ್ಳಲಿಲ್ಲ. ಬದಲಾಗಿ, ತಮ್ಮ ಸ್ನಾಯುಗಳೆಲ್ಲಾ ನೋವಾಗಿ ತಮ್ಮ ಬಟ್ಟೆಗಳೆಲ್ಲಾ ಬೆವರಿನಿಂದ ಒದ್ದೆಯಾಗುವಷ್ಟರ ಮಟ್ಟಿಗೆ ದುಡಿಯುವ ಜನರ ಹಾಗೆ ಪ್ರಯಾಸವನ್ನು ಪಟ್ಟರು. ಮಾನವ ದೇಹವನ್ನು ಒಂದು ದೃಷ್ಟಾಂತವಾಗಿ ಬಳಸಿಕೊಳ್ಳುತ್ತಾ, ಎಫೆಸದ ಸಭೆಯು *ಸೇವೆಗಾಗಿ ಒಂದು ಬಲಿಷ್ಠವಾದ ಬಲಗೈಯನ್ನು* ಹೊಂದಿತ್ತು ಎಂದು ನಾವು ಹೇಳಬಹುದು.

ಬಳಿಕ ಯೇಸು ಅವರ ಸ್ವಾಸ್ಥ್ಯ ಹಾಗೂ ಪ್ರತ್ಯೇಕತೆ ಇವುಗಳಿಗಾಗಿ ಅವರನ್ನು ಶ್ಲಾಘನೆ ಮಾಡಿದನು: **ನೀನು ದುಷ್ಟರನ್ನು ಸಹಿಸಲಾರಿ; ಅಪೊಸ್ತಲರಲ್ಲದಿದ್ದರೂ ತಮ್ಮನ್ನು ಅಪೊಸ್ತಲರೆಂದು ಹೇಳಿಕೊಳ್ಳುವವರನ್ನು ನೀನು ಪರೀಕ್ಷಿಸಿ ಅವರನ್ನು ಸುಳ್ಳುಗಾರರೆಂದು ಕಂಡುಕೊಂಡಿ.** ಸಹಿಸು ಎಂಬುದನ್ನು ಅನುವಾದಿಸಿರುವ βαστάζω (*bastazō*) ಎಂಬ ಗ್ರೀಕ್ ಪದವು, 2 ಮತ್ತು 3 ವಚನಗಳಲ್ಲಿ ಬಳಸಲ್ಪಟ್ಟಿದೆ: ಅವರು *ದೃಢನಿಷ್ಠೆಯಿಂದಿದ್ದರು* ಅಥವಾ ಆಯಾಸಗೊಳ್ಳುವ ತನಕವೂ ಪ್ರಯಾಸವನ್ನು ಪಟ್ಟರು (ವ. 3), ಆದರೆ ಸುಳ್ಳಾದ ಬೋಧನೆಗಳನ್ನು ಸಹಿಸಿಕೊಳ್ಳಲು ನಿರಾಕರಿಸಿದರು (ವ. 2).

ಪೌಲನು ಎಫೆಸದ ಹಿರಿಯರನ್ನು ಹೀಗೆ ಎಚ್ಚರಿಸಿದ್ದನು, "ಕ್ರೂರವಾದ ತೋಳಗಳು ನಿಮ್ಮೊಳಗೆ ಬರುವವೆಂದು ನಾನು ಬಲ್ಲೆನು; ಅವು ಹಿಂಡನ್ನು ಕನಿಕರಿಸುವದಿಲ್ಲ" (ಅಪೊಸ್ತಲರ ಕೃತ್ಯಗಳು 20:29). ಅವುಗಳಲ್ಲಿ "ಕುರಿವೇಷದಲ್ಲಿರುವ ತೋಳಗಳು" ತಮ್ಮನ್ನು "ಅಪೊಸ್ತಲರೆಂದು" ಹೇಳಿಕೊಂಡರು (ನೋಡಿರಿ 2 ಕೊರಿಂಥ 11:13). ಅವರು ಬಹುಶಃ ಮೊದಲ ನೋಟದಲ್ಲಿ ಪ್ರಭಾವವನ್ನು ಬೀರಿದರು, ಮೆಚ್ಚಿಕೆಯಾಗುವಂಥಹ ಅರ್ಹತೆಗಳನ್ನು ಹೊಂದಿದ್ದರು, ಮತ್ತು ಜನಸಮೂಹಗಳ ಯೋಚನೆಗಳ ಪ್ರಕಾರವೇ ಬದಲಾಗುತ್ತಿದ್ದರು ಎಂದು ತೋರುತ್ತದೆ. ಹೇಗೂ, ಎಫೆಸದಲ್ಲಿನ ಸಭೆಯು ಮೊದಲೇ ಎಚ್ಚರಿಸಲ್ಪಟ್ಟಿತ್ತು. ಪೌಲನ ಎಚ್ಚರಿಕೆ ನೀಡಿದ್ದು ಮಾತ್ರವಲ್ಲದೆ, ಯೋಹಾನನು ಸಹ ಹೀಗೆ ಬರೆದಿದ್ದನು, "ಪ್ರಿಯರೇ, ಅನೇಕ ಮಂದಿ ಸುಳ್ಳು ಪ್ರವಾದಿಗಳು ಲೋಕದೊಳಗೆ ಬಂದಿರುವದರಿಂದ ನೀವು ಆತ್ಮದ ಎಲ್ಲಾ ನುಡಿಗಳನ್ನು ನಂಬದೆ ಆಯಾ ನುಡಿಗಳು ದೇವರಿಂದ ಪ್ರೇರಿತವಾದವುಗಳೋ ಅಲ್ಲವೋ ಎಂದು ಅವುಗಳನ್ನು *ಪರೀಕ್ಷಿಸಬೇಕು"* (1 ಯೋಹಾನ 4:1; ಒತ್ತಿ ಹೇಳಿದ್ದು ನನ್ನದು).

ಎಫೆಸದವರು ನಿಶ್ಚಯವಾಗಿಯೂ ಹೊಸದಾಗಿ ಬಂದವನೊಬ್ಬನ ಬೋಧನೆಗಳನ್ನು ದೇವರ ವಾಕ್ಯದೊಂದಿಗೆ ಹೋಲಿಸಿ ನೋಡುತ್ತಿದ್ದರು (ಅಪೊಸ್ತಲರ ಕೃತ್ಯಗಳು 17:11). ಅವರು ಬಹುಶಃ ತಮ್ಮನ್ನು ತಾವೇ "ಅಪೊಸ್ತಲರು" ಎಂದು ಹೇಳಿಕೊಳ್ಳುವವರಿಗೆ "ಮಹತ್ಕಾರ್ಯಗಳನ್ನು ನಡಿಸಿದ್ದರಲ್ಲಿ ಅಪೊಸ್ತನಿಗೆ ಇರತಕ್ಕ ಲಕ್ಷಣಗಳು" (2 ಕೊರಿಂಥ 12:12) ತೋರಿ ಬರುತ್ತವಾದ್ದರಿಂದ ಮಹತ್ಕಾರ್ಯಗಳನ್ನು ಮಾಡಿ ತೋರಿಸುವಂತೆ ಅವರಿಗೆ ಸವಾಲು ಹಾಕಿರಬಹುದಾಗಿದೆ. ಅಲ್ಲದೆ ಈ "ಅಪೊಸ್ತಲರು" ಎಂದು ಹೇಳಿಕೊಳ್ಳುವವರು ಅಪೊಸ್ತಲರ ಕೃತ್ಯಗಳು 1:21, 22ರಲ್ಲಿ ಮುಂದಿಡಲಾಗಿರುವ ಅರ್ಹತೆಗಳನ್ನು ಹೊಂದಿದ್ದಾರೋ ಇಲ್ಲವೋ ಎಂಬುದಾಗಿ ಸಹ ಪರೀಕ್ಷಿಸಲ್ಪಟ್ಟಿದ್ದರು. ಇಂದು ಕೆಲವರು ಅಪೊಸ್ತಲರೆಂದು ಅಥವಾ ಅಪೊಸ್ತಲರ ಉತ್ತರಾಧಿಕಾರಿಗಳೆಂದು ಹೇಳಿಕೊಳ್ಳುತ್ತಾರೆ; ಅವರನ್ನು ಸಹ ಇದೇ ಅರ್ಹತೆಗಳಿಂದ ಪರೀಕ್ಷಿಸತಕ್ಕದ್ದು.

"ಸಹಿಸಲಾರಿ" ಎಂಬ ಪದಗುಚ್ಛವು ಬಹುಶಃ ಎಫೆಸದವರು ಸುಳ್ಳು ಬೋಧಕರನ್ನು ತಮ್ಮ

ಮಧ್ಯದಲ್ಲಿ ಉಳಿದುಕೊಳ್ಳುವಂತೆ ಬಿಡಲಿಲ್ಲ ಎಂಬುದನ್ನು ಸೂಚಿಸಬಹುದಾಗಿದೆ. ಅವರ ತಪ್ಪುಗಳನ್ನು ಬಯಲಿಗೆ ಎಳೆದು ಅವರೊಂದಿಗೆ ಅನ್ಯೋನ್ಯತೆಯನ್ನು ಇಟ್ಟುಕೊಳ್ಳದೆ ಹಿಂದಕ್ಕೆ ಸರಿದರು (ನೋಡಿರಿ ಮತ್ತಾಯ 18:17; 1 ಕೊರಿಂಥ 5:6-11; 2 ಥೆಸಲೋನಿಕ 3:6). ಅವರಿಗಿದ್ದ ಮನೋಭಾವಗಳನ್ನು Homer Haileyನು ಈ ಮಾತುಗಳಲ್ಲಿ ವ್ಯಕ್ತಪಡಿಸುತ್ತಾನೆ: "[ನಿಕೊಲಾಯಿತರು] ರೂಪಾಂತರಗೊಳ್ಳುವದಿಲ್ಲವಾದರೆ, ಅವರು ಸ್ಥಳಾಂತರಗೊಳ್ಳಲಿ."[9] ಮಾನವ ದೇಹವನ್ನು ದೃಷ್ಟಾಂತವಾಗಿ ಬಳಸಿಕೊಳ್ಳುವದನ್ನು ಮುಂದುವರೆಸುವವರಾಗಿ, ಎಫೆಸದ ಸಭೆಯು *ಒಂದು ಬಲಿಷ್ಠವಾದ ಶಿಸ್ತುಳ್ಳಂಥ ಎಡಗೈಯನ್ನು* ಹೊಂದಿತ್ತು ಎಂದು ಹೇಳಬಲ್ಲೆವು.

**ವಚನ 3.** ಅಷ್ಟುಮಾತ್ರವಲ್ಲದೆ, ಕೆಲಸವು ಕಠಿಣವಾದಾಗ ಅವರು ಕೆಲಸ ಮಾಡುವದನ್ನು ನಿಲ್ಲಿಸಿರಲಿಲ್ಲ. ಯೇಸು ಇನ್ನು ಹೇಳಿದ್ದೇನಂದರೆ, **ನನ್ನ ಹೆಸರಿನ ನಿಮಿತ್ತ ಬಾಧೆಯನ್ನು ಸೈರಿಸಿಕೊಂಡು ಬೇಸರಗೊಳ್ಳಲಿಲ್ಲ; ಇದನ್ನೆಲ್ಲಾ ಬಲ್ಲೆನು. ಬೇಸರಗೊಳ್ಳಲಿಲ್ಲ** ಎಂಬ ಪದಗುಚ್ಛವು 2ನೇ ವಚನದಲ್ಲಿರುವ "ಪ್ರಯಾಸ" ಎಂಬ ಅದೇ ಗ್ರೀಕ್ ಪದದಿಂದ ಬಂದದ್ದಾಗಿದೆ. ಒಬ್ಬರು ಹೀಗೆ ಹೇಳಿದ್ದಾರೆ, "ಅವರು ತಮ್ಮ ಪ್ರಯಾಸವನ್ನು ದಣಿಸಿಕೊಳ್ಳದೆಯೇ ದಣಿವುಗೊಳ್ಳುವ ತನಕ ಪ್ರಯಾಸ ಪಟ್ಟಿದ್ದರು." ಪ್ರತಿಯೊಬ್ಬ ಕ್ರೈಸ್ತನಿಗೆ ಈ ಗುಣದ ಅಗತ್ಯವಿರುತ್ತದೆ (ನೋಡಿರಿ ಗಲಾತ್ಯ 6:9; 2 ಥೆಸಲೋನಿಕ 3:13).

**ವಚನ 4.** ಆ ಹಂತದಲ್ಲಿ, ಬಹುಶಃ ಎಫೆಸದ ಕ್ರೈಸ್ತರು ಹಿತಾನುಭವದಲ್ಲಿದ್ದಿರಬಹುದು. ಹೇಗೂ, ಆಗ ಕ್ರಿಸ್ತನು ತನ್ನ ಖಂಡನೆಯನ್ನು ಆರಂಭಿಸುತ್ತಾನೆ: **ಆದರೆ . . . ನಾನು ನಿನ್ನ ಮೇಲೆ ತಪ್ಪುಹೊರಿಸಬೇಕಾಗುತ್ತದೆ.** ಕರ್ತನು ಅವರ ಮಧ್ಯದಲ್ಲಿ ತಿರುಗಾಡುವ ವೇಳೆ ಕಂಡುಕೊಂಡಿದ್ದ ಸಂಗತಿಯು ಇಲ್ಲಿದೆ: **ಮೊದಲು ನಿನಿಗಿದ್ದ ಪ್ರೀತಿಯನ್ನು ನೀನು ಬಿಟ್ಟು ಬಿಟ್ಟಿದ್ದೀ. ಪ್ರೀತಿ** ಎಂಬ ಪದವು ἀγάπη (*agapē*) ಎಂಬ ಗ್ರೀಕ್ ಪದದಿಂದ ಅನುವಾದಿಸಲ್ಪಟ್ಟಿದೆ, ಅದರರ್ಥವು ನಿಸ್ವಾರ್ಥವಾದ, ಸಮರ್ಪಣೆ ಪ್ರೀತಿ ಎಂದಾಗಿರುತ್ತದೆ. *Agapē ಪ್ರೀತಿಯು* ಕ್ರೈಸ್ತ ಗುಣಗಳಲ್ಲಿಯೇ ಅತ್ಯಂಥ ಶ್ರೇಷ್ಠವಾದದ್ದು (1 ಕೊರಿಂಥ 13:13; ಕೊಲೊಸ್ಸೆ 3:14).[10]

ಯೇಸುವು ದೇವರ ಮೇಲಿರಬೇಕಾದ ಪ್ರೀತಿಯ ವಿಷಯವಾಗಿ ಹೇಳಿದನೋ ಅಥವಾ ಮನುಷ್ಯರ ಮೇಲಿರಬೇಕಾದ ಪ್ರೀತಿಯ ಕುರಿತು ಹೇಳಿದನೋ ಎಂಬುದರ ವಿಷಯವಾಗಿ ವ್ಯಾಖ್ಯಾನಕಾರರು ಭಿನ್ನಾಭಿಪ್ರಾಯ ಪಡುತ್ತಾರೆ. ಅನೇಕ ತರ್ಜುಮೆಗಳು ಯೇಸು ತನ್ನ ಹಾಗೂ ದೇವರ ಮೇಲಿರಬೇಕಾದ ಪ್ರೀತಿಯ ಬಗ್ಗೆ ಮಾತಾಡಿದನೆಂದು ಅನುವಾದಕರು ಯೋಚಿಸುತ್ತಾರೋ ಅಥವಾ ಆತನು ಜೊತೆಯ ಕ್ರೈಸ್ತರು ಸೇರಿದಂತೆ ಮನುಷ್ಯರ ಮೇಲಿರಬೇಕಾದ ಪ್ರೀತಿಯ ಬಗ್ಗೆ ಮಾತಾಡಿದನೆಂದು ಯೋಚಿಸುತ್ತಾರೋ ಎಂಬುದನ್ನು ಸೂಚಿಸುವ ಪದಗಳನ್ನು ಸೇರ್ಪಡೆಗೊಳಿಸಿರುತ್ತವೆ. ಈ ಪ್ರಶ್ನೆಯು ಪ್ರಾಮುಖ್ಯವಾದದ್ದಲ್ಲ ಯಾಕೆಂದರೆ ನಿಜವಾದ ಪ್ರೀತಿಯು ಅವೆರಡನ್ನೂ ಒಳಗೊಂಡಿರುತ್ತದೆ (1 ಯೋಹಾನ 4:20). ಯೇಸುವಿನ ಮಾತುಗಳಲ್ಲಿರುವ ಗಮನಾರ್ಹವಾದ ಪದವೆಂದರೆ **ಮೊದಲು**: "*ಮೊದಲು* ನಿನಗಿದ್ದ ಪ್ರೀತಿಯನ್ನು ನೀನು ಬಿಟ್ಟು ಬಿಟ್ಟಿದ್ದೀ" (ಒತ್ತಿ ಹೇಳಿದ್ದು ನನ್ನದು). Phillips ತರ್ಜುಮೆಯು ಈ ಸಾಲನ್ನು "ನೀನು *ಮೊದಲಲ್ಲಿ* ಪ್ರೀತಿಸುತ್ತಿದ್ದಷ್ಟು ಈಗ ಪ್ರೀತಿಸುವದಿಲ್ಲ" ಎಂದು ಅನುವಾದಿಸಿರುತ್ತದೆ.[11] ಅಪೊಸ್ತಲರ ಕೃತ್ಯಗಳು 19ನೇ ಅಧ್ಯಾಯವು ದೇವರು ಹಾಗೂ ಮನುಷ್ಯರ ಕಡೆಗೆ ಎಫೆಸದವರಿಗಿದ್ದ ಆರಂಭಿಕ ಪ್ರೀತಿಯ ಕುರಿತು ಒಂದು ಕಾರ್ಯವನ್ನು ತಿಳಿಸುತ್ತದೆ. ಅವರು ತಮ್ಮ ಮಾಟಮಂತ್ರಗಳ ಪುಸ್ತಕಗಳನ್ನು ಸುಟ್ಟು ಬಿಟ್ಟಿದ್ದರು ಮತ್ತು ಆ ಪ್ರಾಂತ್ಯದಲ್ಲೆಲ್ಲಾ ಸುವಾರ್ತೆಯು ಹರಡುವಂತೆ ಸಹಾಯ ಮಾಡಿದ್ದರು (ಅಪೊಸ್ತಲರ ಕೃತ್ಯಗಳು

19:10, 18-20; ನೋಡಿರಿ ಎಫೆಸ 1:15; 6:24).

**ಬಿಟ್ಟು ಬಿಟ್ಟಿದ್ದೀ** ಎಂದು ಅನುವಾದಿಸಲ್ಪಟ್ಟಿರುವ ἀφίημι (*aphiēmi*) ಎಂಬ ಗ್ರೀಕ್ "ಪದವು" ಒಂದು ಸುಬಲ ಪದವಾಗಿದೆ; ಅವರು ತಮಗೆ ಆರಂಭದಲ್ಲಿದ್ದ ಚಿಗುರೊಡೆದ ಚೊಕ್ಕಟವಾದ ಉತ್ಸಾಹಭರಿತ ಪ್ರೀತಿಯನ್ನು ಬಿಟ್ಟು ಬಿಟ್ಟಿದ್ದರು."[12] ಈ ಕ್ರೈಸ್ತರು ಬಲವಾದ ಸೇವೆಯ ಬಲಗೈಯನ್ನು ಮತ್ತು ಶಿಸ್ತುಳ್ಳ ಬಲವಾದ ಎಡಗೈಯನ್ನು ಹೊಂದಿದ್ದಿರಬಹುದು, ಆದರೆ ಅವರ ಹೃದಯದಲ್ಲಿ ಸಮಸ್ಯೆಯಿತ್ತು. ಆತ್ಮೀಕವಾಗಿ, ಎಫೆಸದಲ್ಲಿರುವ ಸಭೆಯು ಆರೋಗ್ಯಕರವಾಗಿ ಕಂಡಿತು. ಅವು ಕರ್ತನಿಗೋಸ್ಕರ ಕೆಲಸ ಮಾಡುತ್ತಿತ್ತು, ಮತ್ತು ಸಿದ್ಧಾಂತಿಕವಾಗಿ ಸ್ವಸ್ಥವಾಗಿತ್ತು - ಆದರೆ ಅದೊಂದು ಮರಣಾಂತಿಕವಾದ ದೋಷವನ್ನು ಹೊಂದಿತ್ತು: ಒಂದು ವ್ಯಾಧಿಗ್ರಸ್ಥ ಹೃದಯ.

ಯೇಸು ಶ್ಲಾಘನೆ ಹಾಗೂ ಆತನ ಖಂಡನೆ ನಡುವೆ ಒಂದು ಸಂಬಂಧವಿರಬಹುದಾಗಿದೆ ಎಂದು ಅಭಿಪ್ರಾಯ ಪಡಲಾಗಿರುತ್ತದೆ - ಅವರ ವೈರಾಗ್ಯವು ಕ್ಷೀಣಿಸಿ ಕಪಟವೇಷತನ, ತೀರ್ಪು ಮಾಡುವ ಮನೋಭಾವಕ್ಕೆ ತಿರುಗಿತ್ತು. ಈ ದೃಶ್ಯವು ಇರುವದಕ್ಕೆ ಸಾಧ್ಯವಿಲ್ಲ ಯಾಕೆಂದರೆ ಯೇಸು ಅವರ ವೈರಾಗ್ಯವನ್ನು ಶ್ಲಾಘಿಸಿದನು. ಹೇಗೂ, ಕ್ರೈಸ್ತರು ತಮ್ಮ ಸತ್ಯಕ್ಕಾಗಿರುವ ಪ್ರೀತಿಯನ್ನು ಅತಿವಿಮರ್ಶೆಯಾತ್ಮಕ, ತಪ್ಪು ಕಂಡುಹಿಡಿಯುವ ಮನೋಭಾವದ ಪ್ರೀತಿಯಾಗಿ ಅಭಿವೃದ್ಧಿಗೊಳ್ಳುವದಕ್ಕೆ ಅವಕಾಶ ಕೊಡುವದರ ವಿರುದ್ಧ ಯಾವಾಗಲೂ ಎಚ್ಚರಿಕೆಯುಳ್ಳವರಾಗಿರಬೇಕು ಎಂಬುದು ನಿಜವಾಗಿರುತ್ತದೆ.

**ವಚನ 5.** ಪತ್ರವು ಈಗ ಯೇಸುವಿನ ಎಚ್ಚರಿಕೆಯನ್ನು ಕೊಡುತ್ತದೆ: **ಆದದರಿಂದ ನೀನು ಎಲ್ಲಿಂದ ಬಿದ್ದಿದ್ದೀಯೋ ಅದನ್ನು ನಿನ್ನ ನೆನಪಿಗೆ ತಂದುಕೊಂಡು ದೇವರ ಕಡೆಗೆ ತಿರುಗಿಕೋ. ನೀನು ಮೊದಲು ಮಾಡುತ್ತಿದ್ದ ಕೃತ್ಯಗಳನ್ನು ಮಾಡು. ನೀನು ದೇವರ ಕಡೆಗೆ ತಿರುಗಿಕೊಳ್ಳದೆ ಹೋದರೆ ನಾನು ಬಂದು ನಿನ್ನ ದೀಪಸ್ತಂಭವನ್ನು ಅದರ ಸ್ಥಳದಿಂದ ತೆಗೆದು ಹಾಕುವೆನು. ದೀಪಸ್ತಂಭ**ವು ಸ್ವತಃ ಸಭೆಯ ಸಂಕೇತವೇ ಆಗಿರುತ್ತದೆ (1:20). ಯೇಸುವು ದೀಪಸ್ತಂಭವನ್ನು ತೆಗೆದು ಹಾಕುವಿಕೆಯ ಸಂಕೇತವು ಸಭೆಯು ಇಲ್ಲದೆ ಹೋಗುವದು ಎಂದರ್ಥವನ್ನು ಕೊಡುತ್ತದೆ. "ಅವರು ಕ್ರಿಸ್ತನ ನಿಜವಾದ ಸಭೆ ಎಂದು ಆತನಿಂದ ಪರಿಗಣಿಸಲ್ಪಡದೆ ಹೋಗುವರು."[13] ಪ್ರೀತಿಯ ಜ್ವಾಲೆಯಿಲ್ಲದಿರುವ ಒಂದು ದೀಪಸ್ತಂಭಕ್ಕೆ ಏನಾಗುತ್ತದೆ? ಅದನ್ನು ಬಳಸದೆ ಬಿಟ್ಟು ಬಿಡಲಾಗುತ್ತದೆ. Richard Rogersನು ಎಫೆಸದವರ ಮುಂದಿರುವ ಆಯ್ಕೆಗಳನ್ನು ಈ ಮಾತುಗಳಿಂದ ಸಾರಾಂಶಗೊಳಿಸುತ್ತಾನೆ: "ಉಜ್ಜೀವನ ಅಥವಾ ತೆಗೆದು ಹಾಕಲ್ಪಡುವದು!"[14] "ದೀಪಸ್ತಂಭವನ್ನು ತೆಗೆದು ಹಾಕುವದು" ಎಂಬುದಕ್ಕೆ ಬೇರೆ ಬೇರೆ ವ್ಯಾಖ್ಯಾನಗಳನ್ನು ಕೊಡಲಾಗಿರುತ್ತದೆ, ಆದರೆ ಈ ವ್ಯಾಖ್ಯಾನವು ಸನ್ನಿವೇಶದೊಂದಿಗೆ ಅತ್ಯಂಥ ಸಮಂಜಸವಾದದ್ದೆಂದು ತೋರುತ್ತದೆ. ಇಂದು, ಪ್ರಾಚೀನ ಎಫೆಸದ ಸುತ್ತಮುತ್ತಲಿನ ಪ್ರಾಂತ್ಯದಲ್ಲಿ ಕರ್ತನ ಯಾವ ಸಭೆಯೂ ಅಸ್ತಿತ್ವದಲ್ಲಿರುವದಿಲ್ಲ.

ಇದನ್ನು ಎಂದಿಗೂ ಸಂಶಯಿಸಬೇಡಿರಿ: ಒಂದು ಗಂಭೀರವಾದ ಹೃದಯ ಸಮಸ್ಯೆಯನ್ನು ಚಿಕಿತ್ಸೆ ಮಾಡದೆ ಹಾಗೆಯೇ ಬಿಟ್ಟು ಬಿಡುವದಾದರೆ, ಅದು ಮುಂದೆ ಮರಣಕ್ಕೆ ನಡಿಸುತ್ತದೆ. ಈ ತತ್ವವು ಮಾನವ ದೇಹದ ವಿಷಯವಾಗಿ ಸತ್ಯವಾದದ್ದು ಮತ್ತು ಅದು ಕ್ರಿಸ್ತನ ಆತ್ಮೀಕ ದೇಹದ ವಿಷಯದಲ್ಲಿ ಸಹ ಅಷ್ಟೇ ಸತ್ಯವಾಗಿರುತ್ತದೆ. ಯೇಸು ಎಫೆಸದಲ್ಲಿರುವ ಸಭೆಗೆ ತನ್ನ ಮುನ್ನರಿವು ನೀಡಿದ್ದು ಮಾತ್ರವಲ್ಲದೆ, ಅದಕ್ಕೆ ತನ್ನ ಔಷಧಿಯನ್ನು ಸಹ ಸೂಚಿಸಿದನು. ಹೃದಯ ಸಮಸ್ಯೆಗೆ ಪರಿಹಾರೋಪಾಯವು ಮೂರು-ವಿಧವಾದದ್ದು ಆಗಿತ್ತು (ಮತ್ತು ಆಗಿರುತ್ತದೆ): ನೆನಪಿಸಿಕೋ, ಪಶ್ಚಾತ್ತಾಪ ಪಡು, ಮತ್ತು ಹಿಂದಿರುಗು.

ಮೊದಲನೆಯದಾಗಿ, *ಜ್ಞಾಪಕಶಕ್ತಿಯನ್ನು* ಬಳಸಿಕೊಳ್ಳತಕ್ಕದ್ದು: **ಆದದರಿಂದ ನೀನು ಎಲ್ಲಿಂದ ಬಿದ್ದಿದ್ದೀಯೋ ಅದನ್ನು ನಿನ್ನ ನೆನಪಿಗೆ ತಂದುಕೊಂಡು. ನೆನಪಿಗೆ ತಂದುಕೊಂಡು** ಎಂಬುದನ್ನು ಅನುವಾದಿಸಿರುವ μνημόνευε (*mnēmoneue*, **ಇದು** μνημονεύω, *mnēmoneuō* ಎಂಬದರಿಂದ ಬಂದದ್ದು) ಎಂಬ ಪದವು ವರ್ತಮಾನಕಾಲರೂಪದಲ್ಲಿ ಇರುತ್ತದೆ. ಆದ್ದರಿಂದ ಈ ಪದವನ್ನು "ನೆನಪಿಸಿಕೊಳ್ಳುತ್ತಾ ಇರು" ಅಥವಾ "ಇದನ್ನು ಜ್ಞಾಪಕದಲ್ಲಿಟ್ಟುಕೋ" ಎಂದು ಅನುವಾದಿಸಬಹುದು. ಒಬ್ಬನು ಆತ್ಮೀಕವಾಗಿ ತನ್ನ ಮೊದಲಿದ್ದ ಪ್ರೀತಿಯನ್ನು ಬಿಡುವಾಗ, ಆತನು ಒಬ್ಬ ಕ್ರೈಸ್ತನಾಗಿ ಇದ್ದ ಆರಂಭಿಕ ದಿನಗಳನ್ನು ನೆನಪಿಗೆ ತಂದುಕೊಳ್ಳಬೇಕಾಗಿರುತ್ತದೆ. ಆತನು ಆ ದಿನಗಳಲ್ಲಿರುತ್ತಿದ್ದ ಉತ್ಸಾಹ ಹಾಗೂ ರೋಮಾಂಚತೆಯನ್ನು ನೆನಪಿಸಿಕೊಳ್ಳುವ ಅಗತ್ಯವಿರುತ್ತದೆ. ಅಷ್ಟುಮಾತ್ರವಲ್ಲದೆ, ಕರ್ತನು ಆತನನ್ನು ಪಾಪದಿಂದ ರಕ್ಷಿಸಿದ ವೇಳೆಯಲ್ಲಿ ತನಗೆ ಏನು ಮಾಡಿದನೆಂಬುದನ್ನು ನೆನಪಿಸಿಕೊಳ್ಳುವ ಅಗತ್ಯವಿರುತ್ತದೆ.

ನಂತರ, *ಚಿತ್ತವು* ಭಾಗಿಯಾಗತಕ್ಕದ್ದು: **ಪಶ್ಚಾತ್ತಾಪ ಪಡು** (ದೇವರ ಕಡೆಗೆ ತಿರುಗಿಕೋ). μετανόησον (*metanoēson*, ಇದು μετανοέω, *metanoeō* ಎಂಬದರಿಂದ ಬಂದದ್ದು) ಎಂಬ ಪದವು ಇಲ್ಲಿ ಅನಿಶ್ಚಿತ ಭೂತಕಾಲ ರೂಪದಲ್ಲಿದ್ದು, ಒಂದೇ-ಸಾರಿ ಸಂಭವಿಸಿದ ಘಟನೆಯನ್ನು ಸೂಚಿಸುತ್ತದೆ. ಪಶ್ಚಾತ್ತಾಪವು ಪಾಪದ ಸಂಬಂಧವನ್ನು ತೀಕ್ಷ್ಣವಾಗಿ ಕಡಿದುಕೊಳ್ಳುವದರಲ್ಲಿ ಫಲಿತಗೊಳ್ಳತಕ್ಕದ್ದು. ನಾವು ಈ ಆಜ್ಞೆಯನ್ನು ಗಮನಿಸದೆ ತಪ್ಪಿಕೊಳ್ಳದಿರುವದನ್ನು ಖಚಿತ ಪಡಿಸಿಕೊಳ್ಳಲು, ಕರ್ತನು ಇದನ್ನು ವಚನದ ಕೊನೆಯಲ್ಲಿ ಮತ್ತೊಂದು ಸಾರಿ ಹೇಳುತ್ತಾನೆ: **ನೀನು ದೇವರ ಕಡೆಗೆ ತಿರುಗಿಕೊಳ್ಳದೆ ಹೋದರೆ ನಾನು ಬಂದು ದೀಪಸ್ತಂಭವನ್ನು ಅದರ ಸ್ಥಳದಿಂದ ತೆಗೆದು ಹಾಕುವೆನು.** ಪಶ್ಚಾತ್ತಾಪವೆಂದರೆ "ಪರ್ಯಾಲೋಚನೆಯ [ಆಧಾರದ] ಮೇಲೆ ಮನಸ್ಸನ್ನು ಬದಲಾಯಿಸಿಕೊಳ್ಳುವದು" ಆಗಿರುತ್ತದೆ.[15] ನಾವು ಏನನ್ನು ಕಳೆದುಕೊಂಡಿದ್ದೇವೋ ಅದರ ಮೇಲೆ ಪರ್ಯಾಲೋಚನೆ ಮಾಡುವ ವೇಳೆ, ನಮ್ಮ ಅಗತ್ಯತೆಯನ್ನು ಒಪ್ಪಿಕೊಂಡು ಬದಲಾಗುವದಕ್ಕೆ ತೀರ್ಮಾನವನ್ನು ಮಾಡಿಕೊಳ್ಳುವ ಅಗತ್ಯವಿರುತ್ತದೆ. ನಿಜವಾದ ಪಶ್ಚಾತ್ತಾಪವು ಪರ್ಯಾಲೋಚನೆಯ ಮೇಲೆ ಆಧಾರವಾಗಿರುತ್ತದೆ ಮತ್ತು ಒಂದು ದೃಢವಾದ ನಿರ್ಧಾರ ಮಾಡಿಕೊಳ್ಳುವಿಕೆಯಲ್ಲಿ ಫಲಿತಗೊಳ್ಳುತ್ತದೆ - ಈ ವಿಷಯದಲ್ಲಿ ನೋಡುವದಾದರೆ, ದೇವರ ಸಹಾಯದೊಂದಿಗೆ, ನಿಮ್ಮ ಮೊದಲಿದ್ದ ಪ್ರೀತಿಯನ್ನು ಮರುವಶಮಾಡಿಕೊಳ್ಳುವದಕ್ಕಾಗಿ ನಿಮಗೆ ಸಾಧ್ಯವಾದದ್ದನ್ನೆಲ್ಲಾ ಮಾಡುತ್ತೇವೆಂಬ ದೃಢವಾದ ನಿರ್ಧಾರ.

ಅಂತಿಮವಾಗಿ, *ಬಲ* ಮತ್ತು *ಸಾಮರ್ಥ್ಯಗಳು* ಭಾಗಿಯಾಗಬೇಕು: **ನೀನು ಮೊದಲು ಮಾಡುತ್ತಿದ್ದ ಕೃತ್ಯಗಳನ್ನು ಮಾಡು**. ಆರಂಭದಲ್ಲಿ, ಈ ಸಲಹೆಯು ವಿಚಿತ್ರವೆಂದು ಅನ್ನಿಸಬಹುದು. ಅಂತೂ, ಅವರು ತನಗಾಗಿ ಪ್ರಯಾಸಪಡುವದನ್ನು ನಿಲ್ಲಿಸದಿರುವದಕ್ಕಾಗಿ ಯೇಸು ಅವರನ್ನು ಶ್ಲಾಘಿಸಿದ್ದನು (ವಚನಗಳು 2, 3). ಹಾಗಾದರೆ, ಏಕೆ ಆತನು ಅವರಿಗೆ "ಮೊದಲು ಮಾಡುತ್ತಿದ್ದ ಕೃತ್ಯಗಳನ್ನು ಮಾಡು" ಎಂದು ಹೇಳಿದನು? ಮತ್ತೊಂದಾವರ್ತಿ ಮುಖ್ಯವಾದ ಪದವು **ಮೊದಲು** ಎಂದಾಗಿರುತ್ತದೆ: ". . . ನೀನು ಮೊದಲು [ಲ್ಲಿ] ಮಾಡುತ್ತಿದ್ದ ಕೃತ್ಯಗಳನ್ನು ಮಾಡು" (ಒತ್ತಿ ಹೇಳಿದ್ದು ನನ್ನದು). ಅವರು ಆಗಲೂ ಕೃತ್ಯಗಳನ್ನು ಮಾಡುವವರೇ ಆಗಿದ್ದರು, ಆದರೆ ಅವರು ತಾವು ಮೊದಲು ಪರಿವರ್ತನೆಗೊಂಡ ವೇಳೆಯಲ್ಲಿ ಮಾಡುತ್ತಿದ್ದ ಕೃತ್ಯಗಳನ್ನು ಮಾಡುವವರಾಗಿರಲಿಲ್ಲ.

ನಾವು ಕ್ರೈಸ್ತರಾದ ಹೊಸದರಲ್ಲಿ ಮತ್ತು ಉತ್ಸಾಹದಿಂದ ತುಂಬಿದವರಾದ ವೇಳೆ, ಬಹುಶಃ

ನಾವು ಆರಾಧನೆಗಾಗಿ ಸಮಯಕ್ಕೆ ಮುಂಚೆಯೇ ಬಂದು ಸೇರುತ್ತಿರಬಹುದು, ಸಾಧ್ಯವಾದಷ್ಟರ ಮಟ್ಟಿಗೆ ಬೇರೆ ಕ್ರೈಸ್ತರನ್ನು ಸಂಧಿಸುವವರಾಗಿ ಇದ್ದಿರಬಹುದು, ಸಹಾಯ ಮಾಡುವದಕ್ಕಾಗಿ ಸದವಕಾಶಗಳನ್ನು ಹುಡುಕುತ್ತಿದ್ದಿರಬಹುದು - ಮತ್ತು ಸೇವೆ ಮಾಡುವದಕ್ಕೆ ಯಾವದೇ ಸವಾಲನ್ನು ಅಂಗೀಕರಿಸಿಕೊಂಡವರಾಗಿ ಇರುತ್ತಿದ್ದಿರಬಹುದು. ಈಗ ಆ ಕಾಲವು ಹೊರಡು ಹೋಗಿದೆ, ಆ ಮೊದಲಿನ "ಕೃತ್ಯಗಳು" ಈಗ ಕೇವಲ ನೆನಪಾಗಿ ಮಾತ್ರವೇ ಉಳಿದಿರಬಹುದಾಗಿದೆ - ಮತ್ತು ನಮ್ಮ ಕ್ರೈಸ್ತತ್ವವು ಬಾಧೆಗೊಳಗಾಗಿರಬಹುದು.

ಅವರ ಮೊದಲಿನ ಪ್ರೀತಿಯನ್ನು ಪುನರ್ವಶಪಡಿಸಿಕೊಳ್ಳಬೇಕೆಂದರೆ, ಎಫೆಸದ ಕ್ರೈಸ್ತರು ತಾವು ಮಾಡುತ್ತಿದ್ದ ಮೊದಲಿನ ಕೃತ್ಯಗಳನ್ನು ಈಗ ಮಾಡುವ ಅಗತ್ಯವಿತ್ತು. ಇಂದು ಸಹ ಅದು ಅಷ್ಟೇ ಸತ್ಯವಾಗಿರುತ್ತದೆ; ಪ್ರೀತಿಯ ಕೃತ್ಯಗಳನ್ನು ಮಾಡುವದರಿಂದ ಪ್ರೀತಿಯ ಮನೋಭಾವಕ್ಕೆ ಮರುಜೀವವನ್ನು ಕೊಡುವದು. ಒಬ್ಬರು ಹೀಗೆ ಹೇಳಿದ್ದಾರೆ, "ನಿಮ್ಮನ್ನು ಹೊಸ ದಾರಿಯಲ್ಲಿ ಕ್ರಿಯೆ ಮಾಡುವವರಾಗುವಂತೆ ಭಾವಿಸಿಕೊಳ್ಳುವದಕ್ಕಿಂತ ಹೊಸ ಭಾವನೆಯ ದಾರಿಯಲ್ಲಿ ನಡೆದುಕೊಳ್ಳುವಂತೆ ಮಾಡುವದು ಸುಲಭವಾಗಿರುತ್ತದೆ." ಈ ತತ್ವವು ನಮ್ಮ ಆತ್ಮೀಕ ಜೀವಿತಗಳಲ್ಲಿ ಸಹ ಕ್ರಿಯೆ ಮಾಡುತ್ತದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕೆಂಬುದು ಯೇಸುವಿನ ಬಯಕೆಯಾಗಿದೆ.

**ವಚನ 6.** ಎಫೆಸದವರು ಸುಳ್ಳು ಬೋಧಕರ ಉಪದೇಶಗಳ ಬಗ್ಗೆ ಕೇವಲ ಕಳವಳವನ್ನಷ್ಟೆ ಹೊಂದಿರಲಿಲ್ಲ; ಅವರು ಆ ಬೋಧಕರ ಬೀರುವ ಪ್ರಭಾವದ ಬಗ್ಗೆ ಸಹ ಕಳವಳ ಹೊಂದಿದ್ದರು. ಯೇಸು ಮುಂದುವರೆದು ಹೇಳಿದ್ದೇನೆಂದರೆ, **ನಾನು ದ್ವೇಷಿಸುವ ನಿಕೊಲಾಯಿರ *ಕೃತ್ಯಗಳನ್ನು* ನೀನು ಸಹ ದ್ವೇಷಿಸುತ್ತಿ** (ಒತ್ತಿ ಹೇಳಿದ್ದು ನನ್ನದು). ನಿಕೊಲಾಯಿತರು ಭಕ್ತಿಹೀನ ಜೀವಿತಗಳನ್ನು ಬದುಕುತ್ತಿದ್ದ ಮತ್ತು ಬೇರೆಯವರಿಗೂ ಅದನ್ನೇ ಮಾಡುವಂತೆ ಕೇಳಿಕೊಳ್ಳುತ್ತಿದ್ದ ಸುಳ್ಳು ಬೋಧಕರಾಗಿದ್ದರು. ಪೆರ್ಗಮಕ್ಕೆ ಬರೆದ ಪತ್ರದಲ್ಲಿ, ಯೇಸು ನಿಕೊಲಾಯಿತರ ಬೋಧನೆಗಳನ್ನು, "ವಿಗ್ರಹಕ್ಕೆ ನೈವೇದ್ಯಮಾಡಿದ ಪದಾರ್ಥಗಳನ್ನು ತಿನ್ನುವದರಲ್ಲಿಯೂ ಜಾರತ್ವ ಮಾಡುವದರಲ್ಲಿಯೂ" ಇಸ್ರಾಯೇಲ್ಯರು ಮುಗ್ಗರಿಸಿ ಬೀಳುವಂತೆ ಪ್ರೋತ್ಸಾಹಿಸಿದ "ಬಿಳಾಮನ ದುರ್ಬೋಧನೆ" ಯೊಂದಿಗೆ ಹೋಲಿಕೆ ಮಾಡಿದನು (14, 15 ವಚನಗಳ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ರೋಮಾಪುರದಲ್ಲಿ ಒಬ್ಬ ಹಿರಿಯನಾಗಿದ್ದ Hippolytusನು (ಕ್ರಿ.ಶ. 170–236), ನಿಕೊಲಾಯಿತರನ್ನು ಜಾರತ್ವವನ್ನು ಮಾಡುತ್ತಿದ್ದ ಆದಿ ಗ್ನಾಸ್ಟಿಕ್ (ಅಧ್ಯಾತ್ಮ ರಹಸ್ಯಜ್ಞಾನತತ್ವ) ಗುಂಪು ಎಂದು ಗುರುತಿಸಿದನು.[16] ಗ್ನಾಸ್ಟಿಕ್ ತತ್ವದ ಪಾಷಂಡಮತವು ಎರಡನೆಯ ಹಾಗೂ ಮೂರನೆಯ ಶತಮಾನಗಳಲ್ಲಿ ಸಂಪೂರ್ಣವಾಗಿ ಬೆಳೆದು ಬಿಟ್ಟಿತ್ತು, ಆದರೆ ಈ ತತ್ವಜ್ಞಾನದ ಪ್ರಾಚೀನ ವ್ಯಕ್ತಪಡಿಸುವಿಕೆಗಳು ಮೊದಲನೆಯ ಶತಮಾನದ ಕಡೇ ಭಾಗದಲ್ಲಿ ಅಸ್ತಿತ್ವದಲ್ಲಿದ್ದವು ಮತ್ತು ಪೌಲ, ಯೋಹಾನ, ಹಾಗೂ ಇತರ ಕ್ರೈಸ್ತ ನಾಯಕರಿಂದ ಖಂಡಿಸಲ್ಪಟ್ಟಿದ್ದವು. ಗ್ನಾಸ್ಟಿಕ್‌ವಾದಿಗಳು ಬೇರೆಯವರಿಗೆ ಲಭ್ಯವಿಲ್ಲದಿರುವಂತಹ ಜ್ಞಾನವು ತಮ್ಮ ಬಳಿಯಲ್ಲಿದೆ ಎಂದು ಹೇಳಿಕೊಳ್ಳುತ್ತಿದ್ದರು. ತಮ್ಮ ಭಕ್ತಿಹೀನ ಸಿದ್ಧಾಂತವನ್ನು ಹೆಚ್ಚು ತಾರ್ಕಿಕವೆಂಬಂತೆ ಕಾಣಿಸುವ ಹಾಗೆ ಮಾಡುವದಕ್ಕೆ, ಯೆರೂಸಲೇಮಿನಲ್ಲಿ ಊಟದ ಉಪಚಾರ ಮಾಡುತ್ತಿದ್ದ ನಿಕೊಲಾಯನು (ಅಪೊಸ್ತಲರ ಕೃತ್ಯಗಳು 6:5). ತಮಗೆ ಉಪದೇಶಿಸಿರುತ್ತಾನೆಂದು ನಿಕೊಲಾಯಿತರು ಹೇಳಿಕೊಳ್ಳುತ್ತಿದ್ದರು. ವಾಸ್ತವದಲ್ಲಿ ದೋಷಪೂರಿತ ಉಪದೇಶವು ನಿಕೊಲಾಯಿತರಿಂದ ಬಂದಿತೋ ಅಥವಾ ಇಲ್ಲವೋ ಎಂಬುದು ನಮಗೆ ತಿಳಿಯದು. ನಿಕೊಲಾಯನು ಸತ್ಯವನ್ನು ಬಿಟ್ಟು ಭ್ರಷ್ಟಗೊಂಡನು ಎಂದು ಆದಿ ಸಭೆಯ ಕೆಲವು ಲೇಖಕರು ಹೇಳಿರುತ್ತಾರೆ, ಆದರೆ ಬಹುಪಾಲು ಮಂದಿ ಇದನ್ನು ನಿರಾಕರಿಸುತ್ತಾರೆ.

**ದ್ವೇಷಿಸುತ್ತಿ** ಎಂಬ ಪದವನ್ನು ಗಮನಿಸಿರಿ: ಯೇಸು ಹೀಗೆ ಹೇಳಿದನು, "ನಾನು *ದ್ವೇಷಿಸುವ* ನಿಕೊಲಾಯಿತರ ಕೃತ್ಯಗಳನ್ನು ನೀನು ಸಹ *ದ್ವೇಷಸುತ್ತಿ*" (ಒತ್ತಿ ಹೇಳಿದ್ದು ನನ್ನದು). ದೇವರು ಕೆಟ್ಟದ್ದನ್ನು ದ್ವೇಷಿಸುತ್ತಾನೆ (ಜ್ಞಾನೋಕ್ತಿ 6:16-19) ಮತ್ತು ನಾವು ಸಹ ಕೆಟ್ಟದ್ದನ್ನು ದ್ವೇಷಿಸಬೇಕೆಂದು ಎದುರುನೋಡುತ್ತಾನೆ (ರೋಮಾ 12:9). ಹೇಗೂ, ಎಫೆಸದವರು ನಿಕೊಲಾಯಿತರನ್ನು ದ್ವೇಷಿಸಲಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳೋಣ; ಅವರು ನಿಕೊಲಾಯಿತರ *ಕೃತ್ಯಗಳನ್ನು* ದ್ವೇಷಿಸಿದರು. ಅವರು ಆಚಾರವನ್ನು ದ್ವೇಷಿಸಿದರು ಆದರೆ ಜನರನ್ನು ಪ್ರೀತಿಸಿದರು. ನಮ್ಮಲ್ಲಿ ಪ್ರತಿಯೊಬ್ಬರೂ ಪಾಪವನ್ನು ದ್ವೇಷಿಸತಕ್ಕದ್ದು, ಆದರೆ ನಾವು ಪಾಪಿಗಳನ್ನು ಪ್ರೀತಿಸಬೇಕಾಗಿರುತ್ತದೆ. ಒಬ್ಬ ವೈದ್ಯನು ರೋಗಿಯನ್ನು ನಾಶಗೊಳಿಸುವ ಕ್ಯಾನ್ಸರ್‌ನ್ನು ದ್ವೇಷಿಸುತ್ತಾನೆ, ಆದರೆ ರೋಗಿಯ ಮೇಲೆ ಆತನು ಕನಿಕರವನ್ನು ಹೊಂದಿರುತ್ತಾನೆ.

**ವಚನ 7.** ಯೇಸು ಈ ಬುದ್ಧಿವಾದವನ್ನು ಕೊಟ್ಟನು: **ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ.** ಬೇರೆ ಮಾತುಗಳಲ್ಲಿ ಹೇಳುವದಾದರೆ, ಕ್ರಿಸ್ತನ ತಾತ್ಪರ್ಯವು ಹೀಗಿತ್ತು, "ನಾನು ಈ ಪತ್ರವನ್ನು ಸಭೆಯನ್ನುದ್ದೇಶಿಸಿ ಬರೆದೆನು, ಆದರೆ ವಾಸ್ತವದಲ್ಲಿ ನಾನು ನಿಮ್ಮ ಸಂಗಡ ವ್ಯಕ್ತಿಗತವಾಗಿ ಮಾತಾಡುತ್ತಿದ್ದೇನೆ. ನಿಮ್ಮಲ್ಲಿ ಪ್ರತಿಯೊಬ್ಬನೂ ವೈಯಕ್ತಿವಾಗಿ ಅನ್ವಯವನ್ನು ಮಾಡಿಕೊಳ್ಳಬೇಕು." "ಕಿವಿಯುಳ್ಳವನು ಕೇಳಲಿ" ಎಂಬ ಬುದ್ಧಿವಾದವು ಯೇಸುವಿಗೆ ಅಚ್ಚುಮೆಚ್ಚಿನದ್ದಾಗಿತ್ತು (ನೋಡಿರಿ ಮತ್ತಾಯ 11:15; 13:43; ಮಾರ್ಕ 4:23; ಲೂಕ 14:35).

ಪತ್ರವು ಒಂದು ರೋಮಾಂಚನಕಾರಿ ವಾಗ್ದಾನದೊಂದಿಗೆ ಮುಕ್ತಾಯಗೊಳ್ಳುತ್ತದೆ: **ಯಾವನು ಜಯಹೊಂದುತ್ತಾನೋ ಅವನಿಗೆ ದೇವರ ಪರದೈಸಿನಲ್ಲಿರುವ ಜೀವದಾಯಕ ವೃಕ್ಷದ ಹಣ್ಣನ್ನು ತಿನ್ನುವದಕ್ಕೆ ಕೊಡುವೆನು.** ಏನಾದರೂ ಬದಲಾವಣೆಯಾಗದಿದ್ದರೆ ಆತ್ಮೀಕ *ಮರಣ*ವು ಕಾದಿರುತ್ತದೆ ಎಂಬುದಾಗಿ ಯೇಸು ಎಫೆಸದಲ್ಲಿನ ಕ್ರೈಸ್ತರನ್ನು ಎಚ್ಚರಿಸಿದನು. ಇಲ್ಲಿ ಆತನು ಒಂದು ವೇಳೆ ಅವರು ತನ್ನ ಕರೆಗೆ ಪ್ರತಿಯಾಗಿ ಸ್ಪಂದನೆ ಮಾಡುವದಾದರೆ, ಆತ್ಮೀಕ *ಜೀವ*ವು ಅವರದ್ದಾಗುವದು ಎಂದು ವಾಗ್ದಾನ ಮಾಡುತ್ತಾನೆ. ಸಾವಿರಾರು ವರ್ಷಗಳಿಗೆ ಮುಂಚೆ, ಪಾಪದ ನಿಮಿತ್ತವಾಗಿ ಜನರು ಜೀವದಾಯಕ ವೃಕ್ಷದ ಹಣ್ಣನ್ನು ತಿನ್ನುವ ಹಕ್ಕು ಕಳೆದುಕೊಂಡರು (ಆದಿಕಾಂಡ 3:24). ಅದು ಪುನಃ ಮಾನವ ಜನಾಂಗಕ್ಕೆ ಹಿಂದಿರುಗಿ ಕೊಡಲ್ಪಟ್ಟಿದೆ ಎಂಬುದನ್ನು ಯೇಸು ಇಲ್ಲಿ ಸೂಚಿಸುತ್ತಾನೆ. ಪ್ರಕಟನೆ ಪುಸ್ತಕದ ಕೊನೆಯ ಅಧ್ಯಾಯವು **ದೇವರ ಪರದೈಸಿನಲ್ಲಿ** - ಪರಲೋಕದಲ್ಲಿ - **ಜೀವದಾಯಕ ವೃಕ್ಷ**ವು ಸಮೃದ್ಧವಾಗಿ ಫಲವನ್ನು ಕೊಡುತ್ತಿರುವದಾಗಿ ಮತ್ತು ರಕ್ಷಣೆ ಹೊಂದಿದವರು ಅದರ ಜೀವ-ಪೋಷಣೆ ಹಣ್ಣನ್ನು ತಿಂದು ಆನಂದಿಸುತ್ತಿರುವದಾಗಿ ಚಿತ್ರಿಸಲ್ಪಟ್ಟಿರುತ್ತದೆ (22:1, 2). "ಪರದೈಸ" ಎಂಬ ಪದವು ಪರ್ಶಿಯನ್ ಮೂಲದಿಂದ ಬಂದದ್ದೆಂದು ಹೇಳಲಾಗಿದ್ದು, ಅದು ಪರ್ಶಿಯನ್ ರಾಜರ ಮತ್ತು ಗಣ್ಯ ವ್ಯಕ್ತಿಗಳಿಗಾಗಿದ್ದ ಸುಖದ ಉದ್ಯಾನ ಅಥವಾ ತೋಟಗಳನ್ನು ಸೂಚಿಸುತ್ತದೆ. ಈ ಪದವು ಸೆಪ್ಟುಜಿಯಂಟ್‌ನಲ್ಲಿ ಏದೆನ್ ತೋಟವನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿರುತ್ತದೆ. ಇಲ್ಲಿ ಅದು ಪರಲೋಕದ ಏದೆನ್ ತೋಟವನ್ನು ಸೂಚಿಸುತ್ತದೆ, ದೇವರ ಸಮ್ಮುಖದಲ್ಲಿ ಮನುಷ್ಯನಿಗೆ ಪುನಃ ಹಿಂದಕ್ಕೆ ಕೊಡಲಾದ ಸ್ಥಿತಿಯ ಮಂಡಲವು ಅದಾಗಿದೆ.

ಒಂದು ದಿನ ಎಫೆಸದ ಕ್ರೈಸ್ತರು ಜೀವದಾಯಕ ವೃಕ್ಷದ ಹಣ್ಣನ್ನು ತಿನ್ನಬೇಕಾದರೆ, ಅವರು ಪ್ರೀತಿಯ ಜ್ವಾಲೆಗಳನ್ನು ಪುನಃ ಹೊತ್ತಿಸಿಕೊಳ್ಳಬೇಕಿತ್ತು. ಈ ವಚನದಲ್ಲಿನ **ಜಯಹೊಂದುತ್ತಾನೋ** ಎಂಬುದು νικάω (*nikaō*) ಎಂಬ ಪದದಿಂದ ಬಂದದ್ದಾಗಿದೆ, ಇದು

"ವಿಜಯ" (νίκη, *nikē*) ಎಂಬುದಕ್ಕಿರುವ ಗ್ರೀಕ್ ಪದದ ಕ್ರಿಯಾಪದರೂಪವಾಗಿದೆ. "ಒಬ್ಬನು ತಾನಿರುವ ಪರಿಸ್ಥಿತಿಗಳ ಮೇಲೆ ಜಯಶಾಲಿಯಾಗುವದು ಎಂಬುದನ್ನು ಇದು ಸೂಚಿಸುತ್ತದೆ."[17] ಈ ಪತ್ರದಲ್ಲಿ, ಇದು ಎಫೆಸದವರು ತಮ್ಮ ಮೊದಲ ಪ್ರೀತಿಯ ಪೌರುಷ ಹಾಗೂ ಹುರುಪನ್ನು ಪುನಃ ಪಡೆದುಕೊಳ್ಳುವಿಕೆಯನ್ನು ಸೂಚಿಸುತ್ತದೆ. ಐತಿಹಾಸಿಕ ದಾಖಲೆಗಳ ಪ್ರಕಾರವಾಗಿ, ಎಫೆಸದಲ್ಲಿರುವ ಸಭೆಯು, ಆಸ್ಯಸೀಮೆಯ ರೋಮನ್ ಪ್ರಾಂತ್ಯದಲ್ಲಿ ಒಳ್ಳೇದಕ್ಕಾಗಿರುವ ಒಂದು ಶಕ್ತಿಯಾಗಿ ಅನೇಕ ವರ್ಷಗಳ ಕಾಲ ಮುಂದುವರೆಯಿತು. ಸಭೆಯು ಯೇಸುವಿನ ಎಚ್ಚರಿಕೆಯನ್ನು ಗಂಭೀರವಾಗಿ ತೆಗೆದುಕೊಂಡಿತೆಂದು ತೋರುತ್ತದೆ - ಕನಿಷ್ಠ ಸ್ವಲ್ಪ ಕಾಲ ಮಟ್ಟಿಗೆ.

## ಸ್ಮುರ್ನ: ಐಶ್ವರ್ಯವಂತವಾಗಿದ್ದ ಬಡ ಸಭೆ (2:8-11)

**8ಸ್ಮುರ್ನದಲ್ಲಿರುವ ಸಭೆಯ ದೂತನಿಗೆ ಬರೆ – 9ಸತ್ತವನಾಗಿದ್ದು ಜೀವಿತನಾಗಿ ಬಂದ ಆದ್ಯಂತನು ಹೇಳುವದೇನಂದರೆ – ನಾನು ನಿನ್ನ ಸಂಕಟವನ್ನೂ ನಿನ್ನ ಬಡತನವನ್ನೂ ಬಲ್ಲೆನು; ಆದರೂ ನೀನು ಐಶ್ವರ್ಯವಂತನೇ. ಇದಲ್ಲದೆ ತಮ್ಮನ್ನು ಯೆಹೂದ್ಯರೆಂದು ಹೇಳಿಕೊಳ್ಳುವವರು ನಿನ್ನ ವಿಷಯವಾಗಿ ದೂಷಿಸುವದನ್ನು ಬಲ್ಲೆನು; ಅವರು ಯೆಹೂದ್ಯರಲ್ಲ, 10ಸೈತಾನನ ಸಮಾಜದವರಾಗಿದ್ದಾರೆ. ನಿನಗೆ ಸಂಭವಿಸುವದಕ್ಕಿರುವ ಬಾಧೆಗಳಿಗೆ ಹೆದರಬೇಡ. ಇಗೋ ನೀವು ದುಷ್ಪ್ರೇರಣೆಗೆ ಒಳಗಾಗುವಂತೆ ಸೈತಾನನು ನಿಮ್ಮಲ್ಲಿ ಕೆಲವರನ್ನು ಸೆರೆಮನೆಯೊಳಗೆ ಹಾಕುವದಕ್ಕಿದ್ದಾನೆ; ಮತ್ತು ಹತ್ತು ದಿವಸಗಳ ತನಕ ನಿಮಗೆ ಸಂಕಟವಿರುವದು. ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು. "ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ. ಜಯಹೊಂದುವವನಿಗೆ ಎರಡನೆಯ ಮರಣದಿಂದ ಕೇಡಾಗುವದೇ ಇಲ್ಲ.**

ನಾವು ಏಳು ಸಭೆಗಳಿಗೆ ಬರೆದ ಪತ್ರಗಳ ಬಗ್ಗೆ ಪೂರ್ವಾವಲೋಕನ ಮಾಡಿದಾಗ, ನಿಯಮದ ಪ್ರಕಾರ, ಅವುಗಳು ಏಳು ವಿಭಾಗಗಳನ್ನು ಹೊಂದಿವೆ ಎಂಬುದನ್ನು ನೋಡಿದೆವು: (1) ಒಂದು ಅಭಿವಂದನೆ, (2) ಯೇಸುವಿನ ಕುರಿತಾದ ಒಂದು ಬಣ್ಣನೆ, (3) ಇಡೀ ಸಭೆಯನ್ನುದ್ದೇಶಿಸಿ ಒಂದು ಶ್ಲಾಘನೆ, (4) ಇಡೀ ಸಭೆಯನ್ನುದ್ದೇಶಿಸಿ ಒಂದು ಖಂಡನೆ, (5) ಒಂದು ಎಚ್ಚರಿಕೆ ಮತ್ತು ಒಂದು ಬೆದರಿಕೆ, (6) ಒಂದು ಬುದ್ಧಿವಾದ, ಮತ್ತು (7) ಒಂದು ವಾಗ್ದಾನ. ನಾವು ಈಗ ಕೇವಲ ಆ ಪತ್ರಗಳೊಳಗೆ ಎರಡನೆಯದ್ದಕ್ಕಷ್ಟೆ ಬಂದಿದ್ದೇವೆ, ಆದರೆ ಇಷ್ಟು ಬೇಗ ನಾವು ಇಲ್ಲೊಂದು ವಿನಾಯಿತಿಯನ್ನು ಕಾಣುತ್ತೇವೆ: ಸ್ಮುರ್ನದ ಸಭೆಗೆ ಬರೆದಿರುವ ಪತ್ರದಲ್ಲಿ ಯಾವದೇ ಖಂಡನೆ ಇರುವದಿಲ್ಲ ಮತ್ತು ಆ ಕಾರಣದಿಂದಾಗಿ ಯಾವದೇ ಎಚ್ಚರಿಕೆ ಅಥವಾ ಬೆದರಿಕೆಯನ್ನು ಒಳಗೊಂಡಿರುವದಿಲ್ಲ. ಯಾವದೇ ಖಂಡನೆಯನ್ನು ಪಡೆದುಕೊಳ್ಳದ ಇನ್ನು ಒಂದೇ ಒಂದು ಸಭೆಯಿರುತ್ತದೆ: ಅದು ಫಿಲದೆಲ್ಫಿಯದಲ್ಲಿರುವ ಸಭೆ (3:7-13).

ಖಂಡಿಸುವಿಕೆಯು ಇಲ್ಲವೆಂದ ಮಾತ್ರಕ್ಕೆ ಈ ಎರಡು ಸಭೆಗಳು ಪರಿಪೂರ್ಣವಾಗಿದ್ದವು ಎಂದರ್ಥವಾಗಿರುವದಿಲ್ಲ. ಒಂದು ಸಭೆಯು ಮಾನವ ಜೀವಿಗಳನ್ನೊಳಗೊಂಡು ರೂಪಗೊಂಡಿರುತ್ತದೆ ಮತ್ತು ಯಾವ ಮನುಷ್ಯನೂ ಪರಿಪೂರ್ಣನಲ್ಲ (ರೋಮಾ 3:23; ಯಾಕೋಬ 3:2; 1 ಯೋಹಾನ 1:8). ಹೇಗೂ, ಇಲ್ಲಿ ಯಾವದೇ ಖಂಡನೆ ಇಲ್ಲದಿರುವಿಕೆಯ ಅರ್ಥವೇನೆಂದರೆ, ಎಲ್ಲರೂ ಅಲ್ಲದಿದ್ದಾಗ್ಯೂ ಬಹಳಷ್ಟು ಸದಸ್ಯರು ತಮ್ಮ ಕ್ರೈಸ್ತತ್ವದ ಕುರಿತು ಗಂಭೀರವಾಗಿದ್ದರು ಮತ್ತು ಒಟ್ಟಾರೆಯಾಗಿ ಅವರು ದೇವರನ್ನು ಮೆಚ್ಚಿಸುವದಕ್ಕೆ ಪರಿಶ್ರಮ

ಪಡುತ್ತಿದ್ದರು ಎಂದಾಗಿರುತ್ತದೆ. 1 ಯೋಹಾನ 1:7ರ ಪರಿಭಾಷೆಯನ್ನು ಬಳಸುವದಾದರೆ, ಈ ಎರಡು ಸಭೆಗಳು "ಬೆಳಕಿನಲ್ಲಿ ನಡೆಯುವ" ಕ್ರೈಸ್ತರಿಂದ ತುಂಬಿದ್ದವು.

ಸ್ಮುರ್ನದಲ್ಲಿರುವ ಸಭೆಗೆ ಬರೆದ ಪತ್ರವು ಏಳು ಪತ್ರಗಳಲ್ಲಿಯೇ ಅತ್ಯಂಥ ಚಿಕ್ಕದಾಗಿರುತ್ತದೆ. ಅದೇ ವೇಳೆಯಲ್ಲಿ, ಇದು ಅತ್ಯಂಥ ಸಮರ್ಥವಾದ ಸಂದೇಶಗಳಲ್ಲಿ ಕೆಲವನ್ನು ಒಳಗೊಂಡಿರುತ್ತದೆ.

ಸ್ಮುರ್ನವು ಎಫೆಸದಿಂದ ಉತ್ತರ ದಿಕ್ಕಿನೆಡೆಗೆ ಸುಮಾರು ನಾಲ್ವತ್ತು ಮೈಲುಗಳಷ್ಟು ದೂರದಲ್ಲಿತ್ತು. ಇದು ವ್ಯಾಪರದಲ್ಲಿ ಎಫೆಸ ಸಭೆಯೊಂದಿಗೆ ಪೈಪೋಟಿಯಲ್ಲಿದ್ದ ಒಂದು ಸಮುದ್ರ ಬಂದರನ್ನು ಹೊಂದಿತ್ತು. ಪಟ್ಟಣದಲ್ಲಿ ಚಿಕ್ಕದಾದ ಆದರೆ ಬಲವಾದ ಕ್ರೈಸ್ತ-ವಿರೋಧಿ ಯೆಹೂದಿ ಜನಸಂಖ್ಯೆಯನ್ನು ಒಳಗೊಂಡಿತ್ತು. ಸ್ಮುರ್ನವು ಅದರ ಸೌಂದರ್ಯಕ್ಕಾಗಿ ಹೆಸರುವಾಸಿಯಾಗಿತ್ತು ಮತ್ತು ನಾಣ್ಯಗಳ ಮೇಲೆ "ಸೌಂದರ್ಯ ಮತ್ತು ಗಾತ್ರದಲ್ಲಿ ಆಸ್ಯದಲ್ಲಿಯೇ ಪ್ರಥಮ" ಎಂದು ಬಣ್ಣಿಸಲ್ಪಟ್ಟಿತ್ತು. ಅದು ಹೊಂದಿದ್ದ ಮನಮೋಹಕವಾದ ಆಕಾಶರೇಖೆಯ ಕಾರಣದಿಂದಾಗಿ ಅದು ಕೆಲವು ಸಾರಿ "ಕಿರೀಟ ನಗರ" ಎಂದು ಕರೆಯಲ್ಪಡುತ್ತಿತ್ತು: ಪಟ್ಟಣದ ಸುತ್ತಲೂ ಇರುತ್ತಿದ್ದ ಬೆಟ್ಟವು ಮೇಲ್ಗಡೆಯಲ್ಲಿ ಸರ್ಕಾರದ ಸಾರ್ವಜನಿಕ ಕಟ್ಟಡಗಳನ್ನು ಹೊಂದಿತ್ತು.

ಸ್ಮುರ್ನದಲ್ಲಿ ಅನೇಕ ದೇವಾಲಯಗಳಿದ್ದವು, ಅವುಗಳಲ್ಲಿ ಅನ್ಯಧರ್ಮೀಯ ಫಲವತ್ತತೆ ಮತ್ತು ದ್ರಾಕ್ಷಾರಸದ ಪ್ರಕೃತಿ ದೇವತೆಯಾದ Dionysus (ಡಿಯಾನೀಸುಸ್) ದೇವಾಲಯವು ಸೇರಿತ್ತು. ಡಿಯಾನೀಸುಸ್ ಹಬ್ಬದ ವೇಳೆಯಲ್ಲಿ ಅನೇಕ ಕಾಮಪ್ರಚೋದಕ ಚಟುವಟಿಕೆಗಳು ನಡೆಯುತ್ತಿದ್ದವು. ವಸಂತಕಾಲವು ಜೀವದ ಪುನರುಜ್ಜೀವನವನ್ನು ತರುತ್ತದಾದ್ದರಿಂದ, ಅನ್ಯಧರ್ಮಿಯ ಯಾಜಕರು Dionysusನಿಗೆ ಸಂಬಂಧಿಸಿದ ಸಂಸ್ಕಾರದಲ್ಲಿ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳ ವಿಕೃತ ಪ್ರದರ್ಶನವನ್ನು ನಡಿಸುತ್ತಿದ್ದರು. ಇದನ್ನು ನಡಿಸುವ ಯಾಜಕರಿಗೆ ಕಿರೀಟಗಳು ಕೊಡಲ್ಪಡುತ್ತಿದ್ದವು.

ಸ್ಮುರ್ನವು ಹುಮ್ಮಸ್ಸಿನಿಂದ ರೋಮನ್ ಆಗಿತ್ತು. ಕ್ರಿ.ಪೂ. 195ರಷ್ಟು ಆರಂಭದಲ್ಲಿಯೇ ರೋಮಾ ದೇವತೆಗಾಗಿ ಒಂದು ದೇವಾಲಯವು ಕಟ್ಟಲ್ಪಟ್ಟಿತ್ತು. ನೂರು ವರ್ಷಗಳ ಬಳಿಕ, ರೋಮನ್ ಸೈನ್ಯಕ್ಕೆ ಒಂದು ಶೀತದಿಂದ ಕೂಡಿದ ಚಳಿಗಾಲದಲ್ಲಿ ಬೆಚ್ಚನೆಯ ಉಡುಪುಗಳ ಕೊರತೆ ಉಂಟಾದಾಗ, ಸ್ಮುರ್ನದ ನಾಗರೀಕರ ಬಟ್ಟೆಗಳನ್ನು ಬಿಚ್ಚಿಸಿ ಬಿಟ್ಟು ಸೈನ್ಯಕ್ಕೆ ಕಳುಹಿಸಿ ಕೊಡಲಾಗಿತ್ತು. ಕ್ರಿ.ಶ. 26ರಲ್ಲಿ, ಚಕ್ರವರ್ತಿಯಾದ Tiberiusನ ಆರಾಧನೆಗಾಗಿ ಒಂದು ಹೊಸ ದೇವಾಲಯವನ್ನು ಕಟ್ಟುವದಕ್ಕೋಸ್ಕರ ಎಫೆಸ ಮತ್ತು ಪೆರ್ಗಮ ಪಟ್ಟಣಗಳನ್ನು ಬದಿಗೊತ್ತಿ ಸ್ಮುರ್ನ ಪಟ್ಟಣವನ್ನು ರೋಮನ್ ರಾಷ್ಟ್ರೀಯ ಸಮಿತಿಯು ಆಯ್ಕೆ ಮಾಡಿಕೊಂಡಿತ್ತು.

ಇಂದು, ಸ್ಮುರ್ನವು Izmir ಎಂದು ಪರಿಚಿತವಾಗಿರುತ್ತದೆ ಮತ್ತು ಒಂದು ಪ್ರಾಮುಖ್ಯ ಪಟ್ಟಣವಾಗಿ ಉಳಿದಿರುತ್ತದೆ. ಪ್ರಕಟನೆ 2 ಮತ್ತು 3 ಅಧ್ಯಾಯಗಳಲ್ಲಿ ಪ್ರಸ್ತಾಪಿಸಲಾಗಿರುವ ಇತರ ಏಳು ಪಟ್ಟಣಗಳಲ್ಲಿ ಇಂದಿಗೂ ನಗರಗಳು ಅಸ್ತಿತ್ವದಲ್ಲಿರುತ್ತವೆ, ಆದರೆ ಸ್ಮುರ್ನ/ Izmir ಮಾತ್ರವೇ ಮಹತ್ವಪೂರ್ಣವಾದ ಪಟ್ಟಣವಾಗಿ ಉಳಿದಿರುತ್ತದೆ. Izmir ಟರ್ಕಿಯ ಮೂಡಣ ದಿಕ್ಕಿನಲ್ಲಿ ಒಂದು ಪ್ರಧಾನ ಬಂದರು ಆಗಿದ್ದು, ಹೆಚ್ಚುಕಡಿಮೆ ಸುಮಾರು 20 ಲಕ್ಷ ಜನಸಂಖ್ಯೆಯನ್ನು ಹೊಂದಿದೆ. ಈ ಪ್ರಾಚೀನ ಪಟ್ಟಣದ ಅವಶೇಷಗಳ ಮೇಲೆಯೇ ಆಧುನಿಕ ಪಟ್ಟಣವು ಕಟ್ಟಲ್ಪಟ್ಟಿರುವದರಿಂದಾಗಿ ಈ ಪ್ರಾಂತ್ಯದಲ್ಲಿ ಪುರಾತತ್ವ ಭೂಶೋಧನೆಯ ಕಾರ್ಯವು ಮಿತಿಯುಳ್ಳದ್ದಾಗಿದೆ. ಹೇಗೂ, ಹಳೇ ರೋಮನ್ ನಾಲೆಗಳು ಈಗಲೂ ಸಾಕ್ಷಿಯಾಗಿರುತ್ತವೆ, ಮತ್ತು ಪ್ರಾಚೀನ ಪೇಟೆ (ಮಾರುಕಟ್ಟೆ) ಯು ಹೊರಗೆ

ತೆಗೆಯಲಾಗಿರುತ್ತದೆ. ಪೇಟೆಯಲ್ಲಿನ ಪ್ರತಿಮೆಗಳನ್ನು Izmirನಲ್ಲಿರುವ ವಸ್ತುಸಂಗ್ರಾಲಯದಲ್ಲಿಡಲಾಗಿರುತ್ತದೆ. ಆ ಪೇಟೆಯಲ್ಲಿ ಸ್ಮುರ್ನದಲ್ಲಿರುವ ಸಭೆಗೆ ಬರೆಯಲಾಗಿರುವ ಒಂದು ಬೃಹತ್ ತಾಮ್ರದ ಫಲಕವು ಇದ್ದು, ಅದು ಮುಸ್ಲಿಮ್-ಪ್ರಾಬಲ್ಯವಿರುವ ಟರ್ಕಿ ದೇಶದಲ್ಲಿ ಒಂದು ಅಸಹಕವಾದ ಸ್ಮಾರಕವಾಗಿರುತ್ತದೆ.

**ವಚನ 8.** ಪತ್ರವು ಹೀಗೆ ಆರಂಭಗೊಳ್ಳುತ್ತದೆ, **ಸ್ಮುರ್ನದಲ್ಲಿರುವ ಸಭೆಯ ದೂತನಿಗೆ ಬರೆ** (1:16ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ನಮಗೆ ಸ್ಮುರ್ನ ಪಟ್ಟಣದ ಕುರಿತು ಬಹಳಷ್ಟು ತಿಳಿದಿರುತ್ತದೆ, ಆದರೆ ಅಲ್ಲಿರುವ ಸಭೆಯ ಕುರಿತಾಗಿ ನಮಗೆ ಅಷ್ಟಾಗಿ ಮಾಹಿತಿಯು ಇರುವದಿಲ್ಲ. ಬಹುಶಃ ಅಲ್ಲಿನ ಸಭೆಯು ಪೌಲನು ಎಫೆಸದಲ್ಲಿರುವ ವೇಳೆಯಲ್ಲಿ ಸ್ಥಾಪಿಸಲ್ಪಟ್ಟಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 19:10). ಯೋಹಾನನ ಶಿಷ್ಯರಲ್ಲೊಬ್ಬನಾಗಿದ್ದ ಪೊಲಿಕಾರ್ಪನು (Polycarp) ಸ್ಮುರ್ನದಲ್ಲಿನ ಕ್ರೈಸ್ತರೊಳಗೆ ಒಬ್ಬ ನಾಯಕನಾಗಿದ್ದನೆಂಬುದಾಗಿ ಆದಿಯ ಪ್ರೇರಿತರಲ್ಲದ ಲೇಖಕರು ತಿಳಿಯಪಡಿಸುತ್ತಾರೆ. Polycarpನು ಅನೇಕ ಸಾರಿ "ಸ್ಮುರ್ನದ ಸಭಾಧ್ಯಕ್ಷನು" ಎಂದು ಕರೆಯಲ್ಪಟ್ಟಿರುತ್ತಾನೆ. ಸಭೆಯ ಪ್ರಥಮ ಶತಮಾನದಲ್ಲಿ, ಸಭೆಗಳು *ಬಹುತ್ವದ* (ಬಹುಸಂಖ್ಯೆಯ) ಹಿರಿಯರಿಂದ ಮೇಲ್ವಿಚಾರಣೆ ಮಾಡಲ್ಪಡುತ್ತಿದ್ದವು, ಅವರನ್ನು ಸಭಾಧ್ಯಕ್ಷರು ಅಥವಾ ಸಭಾಪಾಲಕರು ಎಂದು ಕರೆಯಲಾಗುತ್ತಿತ್ತು (ಅಪೊಸ್ತಲರ ಕೃತ್ಯಗಳು 20:17, 28).

ಅಭಿವಂದನೆಯ ಬಳಿಕ, ಪತ್ರದಲ್ಲಿ ಯೇಸುವಿನ ಕುರಿತಾದ ಒಂದು ಬಣ್ಣನೆ ಇರುತ್ತದೆ: **ಸತ್ತವನಾಗಿದ್ದು ಜೀವಿತನಾಗಿ ಬಂದ ಆದ್ಯಂತನು**. ಈ ಬಣ್ಣನೆಯು 1ನೇ ಅಧ್ಯಾಯದಲ್ಲಿನ ದರ್ಶನಕ್ಕೆ ಸಂಬಂಧಿಸಿದ್ದಾಗಿದೆ. ಆ ಅಧ್ಯಾಯದಲ್ಲಿ, ಯೋಹಾನನು ದೀಪಸ್ತಂಭಗಳ ಮಧ್ಯದಲ್ಲಿ "ಮನುಷ್ಯಕುಮಾರನಂತೆ ಇರುವವನನ್ನು" ಕಂಡಾಗ (1:13) ಆತನ ಮುಂದೆ ಸತ್ತವನ ಹಾಗೆ ಬಿದ್ದನು (1:17). ಬಳಿಕ ಯೇಸು ತನ್ನ ಬಲಗೈಯನ್ನು ಆತನ ಮೇಲಿಟ್ಟು ಹೀಗೆ ಹೇಳಿದನು, "ಹೆದರಬೇಡ, ನಾನು ಮೊದಲನೆಯವನೂ ಕಡೆಯವನೂ ಸದಾ ಜೀವಿಸುವವನೂ ಆಗಿದ್ದೇನೆ. ಸತ್ತವನಾದೆನು, ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ" (1:17, 18).

ಈ ನಿರ್ದಿಷ್ಟವಾದ ಸಭೆಗೆ ಅಗತ್ಯವಾಗುವಂತಹ ಆ ಅಧ್ಯಾಯದಲ್ಲಿನ ದರ್ಶನದಲ್ಲಿರುವ ಭಾಗವು ಈ ಸಭೆಗೆ ಬರೆದಿರುವ ಪತ್ರದಲ್ಲಿ ಸೇರ್ಪಡೆಗೊಳಿಸಲ್ಪಟ್ಟಿರುತ್ತದೆ. ಕರ್ತನು "ಮೊದಲನೆಯವನೂ ಕಡೆಯವನೂ ಜೀವಿಸುವವನೂ" ಆಗಿದ್ದಾನೆಂಬ ಬಗ್ಗೆ ಸ್ಮುರ್ನದಲ್ಲಿರುವ ಸಭೆಯು ಕೇಳಿಸಿಕೊಳ್ಳುವ ಅಗತ್ಯತೆಯು ಏಕಿತ್ತು? 9ನೇ ವಚನದಲ್ಲಿ ಯೇಸುವು "ನಾನು ನಿನ್ನ *ಸಂಕಟವನ್ನು* ಬಲ್ಲೆನು" ಎಂದು ಹೇಳಿದನು (ಒತ್ತಿ ಹೇಳಿದ್ದು ನನ್ನದು). 10ನೇ ವಚನದಲ್ಲಿ ಆತನು ಹೀಗೆ ಹೇಳಿದನು, "ನಿನಗೆ ಸಂಭವಿಸುವದಕ್ಕಿರುವ *ಬಾಧೆಗಳಿಗೆ* ಹೆದರಬೇಡ" (ಒತ್ತಿ ಹೇಳಿದ್ದು ನನ್ನದು). ಯೇಸುವು "ಮೊದಲನೆಯವನೂ ಕಡೆಯವನೂ ಜೀವಿಸುವವನೂ ಆಗಿದ್ದಾನೆ, ಮತ್ತು ಜೀವಿತನಾಗಿದ್ದಾನೆ" ಎಂಬುದನ್ನು ತಿಳಿದುಕೊಳ್ಳುವ ಅಗತ್ಯವಿದ್ದಂಥ *ಬಾಧೆಯನ್ನನುಭವಿಸುವ* ಸಭೆಗೆ ಬರೆಯುತ್ತಿದ್ದಾನೆ.

ಈ ಬಾಧೆಗೊಳಗಾಗಿದ್ದ ಕ್ರೈಸ್ತರಿಗೆ ಈ ಬಣ್ಣನೆಯು ಹೇಗೆ ಸಹಾಯವನ್ನು ಮಾಡುವದಾಗಿತ್ತು? **ಮೊದಲನೆಯವನೂ ಕಡೆಯವನೂ** ಎಂಬ ಬಣ್ಣನೆಯು ಯೇಸುವಿನ ದೇವತ್ವವನ್ನು ವ್ಯಕ್ತಪಡಿಸುವದಾಗಿತ್ತು ಮತ್ತು ರೋಮನ್ನರು ಗತಿಸಿ ಹೋಗಿ ಬಹು ಕಾಲವಾದ ಬಳಿಕವೂ ಆತನು ಇರುವವನಾಗಿದ್ದಾನೆಂಬ ಸತ್ಯವನ್ನು ಮನದಟ್ಟು ಮಾಡುವದಾಗಿತ್ತು. ರೋಮನ್ ಸಾಮ್ರಾಜ್ಯವಲ್ಲ, ಆದರೆ ಕ್ರಿಸ್ತನೇ ಅಧಿಕಾರದಲ್ಲಿದ್ದನು.

ಸ್ಮುರ್ನದಲ್ಲಿರುವ ಕ್ರೈಸ್ತರಿಗೆ ವಿಶೇಷ ಮಹತ್ವವನ್ನು ಹೊಂದಿದ ಮಾತುಗಳೆಂದರೆ **ಸತ್ತವನಾಗಿದ್ದು ಜೀವಿತನಾಗಿ ಬಂದ** ಎಂಬುವುಗಳೇ. ಅನ್ಯಧರ್ಮಿಯ ಯಾಜಕರು ತಮ್ಮ ಪ್ರಕೃತಿ ದೇವತೆಗಾಗಿ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳ ಅಣಕ ಪ್ರದರ್ಶನವನ್ನು ನಡಿಸುತ್ತಿದ್ದಿರಬಹುದು, ಆದರೆ ಸತ್ತವರೊಳಗಿಂದ ಎಬ್ಬಿಸಲ್ಪಟ್ಟಿದ್ದ ಏಕೈಕ ವ್ಯಕ್ತಿಯೆಂದರೆ ಅದು ಯೇಸುವೇ ಆಗಿದ್ದನು.

ಸ್ಮುರ್ನದಲ್ಲಿನ ತನ್ನ ಹಿಂಬಾಲಕರು ತಮ್ಮ ನಂಬಿಕೆಯ ನಿಮಿತ್ತವಾಗಿ ಕೊಲ್ಲಲ್ಪಟ್ಟಾಗ್ಯೂ, ಆತನ ಬಳಿಯಲ್ಲಿ ಮರಣ ಹಾಗೂ ಪಾತಾಳದ ಬೀಗದ ಕೈಗಳು ಅವೆ ಎಂಬುದನ್ನು ಅವರು ತಿಳಿದುಕೊಳ್ಳಬೇಕೆಂಬುದು ಯೇಸುವಿನ ಬಯಕೆಯಾಗಿತ್ತು (ನೋಡಿ 1:18). ಮನುಷ್ಯರು ಅವರಿಗೆ ಏನೇ ಮಾಡುವದಕ್ಕೆ ಸಾಧ್ಯವಿದ್ದರೂ, ಅದನ್ನು ರದ್ದುಗೊಳಿಸುವ ಶಕ್ತಿಯು ಅವನಿಗಿತ್ತು.

**ವಚನ 9.** ಇದಾದ ಬಳಿಕ ಶ್ಲಾಘನೆಯು ಇರುತ್ತದೆ, ಅದು ಈ ಕ್ಲುಪ್ತ ಪತ್ರದ ಹೃದಯಭಾಗವಾಗಿದೆ. ಯೇಸುವಿನ ಮೆಚ್ಚಿಕೆಯಾದ ಮಾತುಗಳು ಹೀಗೆ ಆರಂಭಗೊಳ್ಳುತ್ತವೆ, **ನಾನು ನಿನ್ನ ಸಂಕಟವನ್ನೂ ಬಲ್ಲೆನು**. KJVಯಲ್ಲಿ ಪತ್ರದ ಮುಖ್ಯ ಭಾಗವು "ನಾನು ನಿನ್ನ ಕೃತ್ಯಗಳನ್ನು ಬಲ್ಲೆನು" ಎಂಬ ಮಾತುಗಳೊಂದಿಗೆ ಆರಂಭಗೊಳ್ಳುತ್ತದೆ. ಗ್ರೀಕ್ ವಾಕ್ಯದಲ್ಲಿ, ಈ ಮಾತುಗಳು ಕೆಲವು ಪತ್ರಗಳಲ್ಲಿ ಅವುಗಳ ಮುಖ್ಯ ಭಾಗದ ಆರಂಭದಲ್ಲಿ ಕಂಡು ಬರುತ್ತವೆ, ಆದರೆ ಎಲ್ಲಾ ಪತ್ರಗಳಲ್ಲಿಯೂ ಹಾಗಿರುವದಿಲ್ಲ. ಸ್ಮುರ್ನ ಸಭೆಗೆ ಬರೆದ ಪತ್ರವು ಅಂತಹ ಪತ್ರಗಳಲ್ಲೊಂದಾಗಿದೆ.

**ಸಂಕಟ** ಎಂಬ ಪದವು θλῖψις (*thlipsis*) ಪದದಿಂದ ಅನುವಾದಿಸಲ್ಪಟ್ಟಿರುತ್ತದೆ, ಅದರರ್ಥವು "ಒಟ್ಟಿಗೆ ಒತ್ತಲ್ಪಡುವದು, ಅಥವಾ ಕೆಳಕ್ಕೆ ಒತ್ತಲ್ಪಡುವದು" ಎಂದಾಗಿರುತ್ತದೆ, ಅದೊಂದು ರೀತಿಯಲ್ಲಿ ಬೃಹತ್ ಬಂಡೆಯು ತನ್ನ ಕೆಳಗಿರುವ ಏನನ್ನೇ ಆಗಲಿ ಪುಡಿ ಪುಡಿ ಮಾಡುವ ಹಾಗಿರುತ್ತದೆ. ಈ ಪದವು ಗೋಧಿಯನ್ನು ಒನೆಯುವದಕ್ಕಾಗಿ ರೋಮನ್ನರು ಬಳಸುತ್ತಿದ್ದ ಬೃಹತ್ ಬೀಸುಕಲ್ಲನ್ನು (ಮತ್ತಾಯ 18:6) ಅಥವಾ ಒಲೀವ್ ಕಾಯಿಗಳಿಂದ ಎಣ್ಣೆ ಒತ್ತಿ ಬರಮಾಡುವದಕ್ಕಾಗಿ ಬಳಸುತ್ತಿದ್ದ ಉರುಳು ಗುಡಂನ್ನು ನೆನಪಿಸುತ್ತದೆ. ಸ್ಮುರ್ನದಲ್ಲಿನ ಕ್ರೈಸ್ತರು ತೀಕ್ಷ್ಣವಾದ ಹಾಗೂ ನಿರಂತರವಾದ ಒತ್ತಡದಲ್ಲಿರುತ್ತಿದ್ದರು. ಅವರಿಂದ ಜೀವವನ್ನು ಹಿಂಡಲಾಗುತ್ತಿತ್ತು. ತತ್ಪರಿಣಾಮವಾಗಿ ಯೇಸುವು ಹೇಳುತ್ತೀರುವದೇನೆಂದರೆ "ನಾನು ನಿಮಗಿರುವ ವೇದನೆಯನ್ನು ಅರ್ಥಮಾಡಿಕೊಳ್ಳುತ್ತೇನೆ. ನೀವು ಹಿಂಸಿಸಲ್ಪಡುತ್ತಿರುವಿರಿ, ಮತ್ತು ನಿಮ್ಮ ಹೆಸರುಗಳು ದೂಷಣೆಗೆ ಗುರಿಯಾಗುತ್ತಿವೆ. ನಿಮ್ಮಲ್ಲಿ ಕೆಲವರು ನಿಮ್ಮ ಕುಟುಂಬಗಳಿಂದ ಬೇರ್ಪಡಿಸಲ್ಪಟ್ಟಿರುವಿರಿ. ನಿಮ್ಮಲ್ಲಿ ಕೆಲವರು ನಿಮ್ಮ ಉದ್ಯೋಗಗಳನ್ನು ಕಳೆದುಕೊಂಡಿರುವಿರಿ, ಮತ್ತು ನಿಮ್ಮ ಮಕ್ಕಳು ಹಸಿವೆಯಿಂದ ಬಳಲುತ್ತಿದ್ದಾರೆ. ನಿಮ್ಮಲ್ಲಿ ಅನೇಕರು ಸೆರೆಮನೆಗೆ ಹಾಕಲ್ಪಡುವಿರಿ, ಮತ್ತು ಕೆಲವರು ಕೊಲ್ಲಲ್ಪಡುವಿರಿ. ಅದು ಕಷ್ಟಕರವಾದದ್ದೆಂದು ನಾನು ಬಲ್ಲೆನು."

ಎಲ್ಲ ಪತ್ರಗಳಲ್ಲಿರುವ ಪ್ರಕಾರವೇ, **ಬಲ್ಲೆನು** ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು ಹಾಗೆ ಸುಮ್ಮನೆ ತಿಳಿದಿರುವದು ಎಂಬುದನ್ನು ಸೂಚಿಸುವದಿಲ್ಲ, ಆದರೆ ಗ್ರಹಿಸಿಕೊಂಡಿರುವದನ್ನು ಸೂಚಿಸುತ್ತದೆ (ವ. 2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಒತ್ತಡವು ಹೇಗಿರುತ್ತದೆಂಬುದನ್ನು ಯೇಸುವು ಅರ್ಥಮಾಡಿಕೊಂಡನು. ಗೆತ್ಸೇಮನೆ ತೋಟದಲ್ಲಿ ಆತನು ತನ್ನ ಮನಸ್ಸು ಮತ್ತು ಆತ್ಮದ ಮೇಲೆ ತಗ್ಗುವಂತೆ ಕಾಣಿಸದ ತೀವ್ರವಾದ ಒತ್ತಡವು ಉಂಟಾಗಿದ್ದ ಕಾರಣದಿಂದಾಗಿ ಆತನು "ತಂದೆಯೇ, ನಿನಗೆ ಚಿತ್ತವಾದರೆ ಈ ಪಾತ್ರೆಯನ್ನು ನನ್ನಿಂದ ತೊಲಗಿಸು" ಎಂದು ಮೊರೆಯಿಟ್ಟಿದ್ದನು ಲೂಕ 22:42). ಕಾಕತಾಳೀಯ ಎಂಬಂತೆ, "ಗೆತ್ಸೇಮನೆ" ಎಂದು "ಎಣ್ಣೆಯ

ಗಾಣ" ಎಂದರ್ಥವಾಗಿರುತ್ತದೆ.

ಸಂಕಟದ "ಒತ್ತಲ್ಪಡುವಿಕೆಯು" ಅನೇಕ ರೂಪಗಳನ್ನು ಧರಿಸಿಕೊಳ್ಳಬಹುದು. ಸ್ಮುರ್ನದಲ್ಲಿ, ಅದು ಎರಡು ವಿಧಗಳಲ್ಲಿ ವ್ಯಕ್ತವಾಗಿತ್ತು: ಬಡತನ ಮತ್ತು ಹಿಂಸೆ. ಮೊದಲನೆಯದಾಗಿ, ಈ ಕ್ರೈಸ್ತರು ಬಡವರಾಗಿದ್ದರು. ಯೇಸು ಹೇಳುತ್ತಾನೆ, **ನಾನು . . . ನಿನ್ನ ಬಡತನವನ್ನೂ ಬಲ್ಲೆನು. ಬಡತನ** ಎಂಬುದನ್ನು ಅನುವಾದಿಸಿರುವ πτωχεία (*ptōcheia*) ಎಂಬ ಗ್ರೀಕ್ ಪದವು "ಎಷ್ಟು ಬೇಕೋ ಅಷ್ಟನ್ನಷ್ಟೇ ಹೊಂದಿರುವದು" ಎಂಬುದನ್ನು ಸುಚಿಸುತ್ತದೆ, ಆದರೆ ಜೀವನದ ಅಗತ್ಯತೆಗಳಿಗೆ ಸಹ "ನಿರಾಶ್ರಿತವಾಗಿರುವದು" ಎಂಬ ಅರ್ಥವನ್ನು ಕೊಡುತ್ತದೆ. ಬಹುಶಃ ಕೆಲವರು ಕ್ರೈಸ್ತರಾದ ವೇಳೆಯಲ್ಲಿ ಬಡತನದಲ್ಲಿದ್ದಿರಬಹುದು (1 ಕೊರಿಂಥ 1:26-29). ತಾವು ಸುವಾರ್ತೆಗೆ ವಿಧೇಯರಾದಾಗ ಸ್ವತ್ತುಗಳನ್ನು ಹೊಂದಿದ್ದ ಮಿಕ್ಕವರು ಆರ್ಥಿಕವಾಗಿ ಎಷ್ಟೊಂದು ಒತ್ತಡವನ್ನು ಅನುಭವಿಸುತ್ತಿದ್ದರೆಂದರೆ ಶೀಘ್ರದಲ್ಲಿಯೇ ಅವರ ಸ್ವತ್ತುಗಳೆಲ್ಲಾ ಇಲ್ಲದಂತಾಗಲಿದ್ದವು. ಅನೇಕ ಸಾರಿ ಕ್ರೈಸ್ತರ ಸ್ವತ್ತುಗಳನ್ನು ಮುಟ್ಟುಗೋಲುನ ಹಾಕಿಕೊಳ್ಳಲಾಗುತ್ತಿತ್ತು (ಇಬ್ರಿಯ 10:34). ಅವರಿಗೆ ತಮ್ಮ ಸ್ವತ್ತುಗಳನ್ನು ಇಟ್ಟುಕೊಳ್ಳುವ ಅನುಮತಿ ಕೊಡಲ್ಪಟ್ಟಾಗ್ಯೂ, ಮಾರುಕಟ್ಟೆಯಲ್ಲಿ ಖರೀದಿಸುವದಕ್ಕೆ ಮತ್ತು ಮಾರಾಟ ಮಾಡುವದಕ್ಕೆ ಅವರಿಗೆ ಸಾಮಾನ್ಯವಾಗಿ ಅನುಮತಿಯಿರುತ್ತಿರಲಿಲ್ಲ. ಯೇಸುವಿಗೆ ಬಡತನದ ಬಗ್ಗೆ ಗೊತ್ತಿತ್ತು: "ನೀವು ಐಶ್ವರ್ಯವಂತರಾಗಬೇಕೆಂದು ನಿಮಗೋಸ್ಕರ ಬಡವನಾದನು" (2 ಕೊರಿಂಥ 8:9).

ಬಳಿಕ ಯೇಸು ಒಂದು ಆಶ್ಚರ್ಯಕರವಾದ ಒಂದು ಪ್ರಕ್ಷೇಪ ಹೇಳಿಕೆಯನ್ನು ಕೊಡುತ್ತಾನೆ: **ಆದರೂ ನೀನು ಐಶ್ವರ್ಯವಂತನೇ).** ಅವರು ತಮಗೋಸ್ಕರ ವಿಷಾದ ಪಟ್ಟುಕೊಳ್ಳುವ ಅಗತ್ಯವಿರಲಿಲ್ಲ, ಯಾಕೆಂದರೆ ಯಾವದು ನಿಜವಾಗಿಯೂ ಪ್ರಾಮುಖ್ಯವಾಗಿತ್ತೋ, ಅದರಲ್ಲಿ ಅವರು ಐಶ್ವರ್ಯವಂತರಾಗಿದ್ದರು (ನೋಡಿರಿ 2 ಕೊರಿಂಥ 6:10). ಅವರು ಆತ್ಮೀಕ ಐಶ್ವರ್ಯಗಳನ್ನು ಹೊಂದಿದ್ದರು (ನೋಡಿರಿ ಯಾಕೋಬ 2:5). ಅವರು ಹಿಂದಿನ ಕಾಲದ ಪಾಪಗಳಿಂದ ರಕ್ಷಿಸಲ್ಪಟ್ಟಿದ್ದರು (ರೋಮಾ 3:25) ಮತ್ತು ದೇವರಾತ್ಮನನ್ನು ವರದಾನವಾಗಿ ಹೊಂದಿದ್ದರು (ಅಪೊಸ್ತಲರ ಕೃತ್ಯಗಳು 2:38). ಯೇಸು ಅವರ ಮಧ್ಯಸ್ಥನಾಗಿದ್ದನು (1 ತಿಮೊಥೆ 2:5), ಮತ್ತು ದೇವರು ಅವರ ತಂದೆಯಾಗಿರುವನು (ರೋಮಾ 1:7). ಅವರು ದೇವರ ಕುಟುಂಬದೊಳಗೆ ಇದ್ದರು (ಎಫೆಸ 2:19) ಮತ್ತು ಆತನ ಬಳಿಗೆ ಯಾವ ಸಮಯದಲ್ಲಿ ಬೇಕಾದರೂ ಬರಬಹುದಿತ್ತು (ಯಾಕೋಬ 5:13). ಮನಶ್ಯಾಂತಿಯು ಅವರಿಗೆ ದೊರಕಬಹುದಾಗಿತ್ತು (ಫಿಲಿಪ್ಪಿ 4:7), ಸದಾಕಾಲವೂ ಇರುವ ಸಂತೋಷವು ಅವರದ್ದಾಗಬಹುದಿತ್ತು (1 ಪೇತ್ರ 3:14; 4:14). ಪರಲೋಕದ ನಿರೀಕ್ಷೆಯು ಅವರ ಹೃದಯಗಳಲ್ಲಿತ್ತು (ಕೊಲೊಸ್ಸೆ 1:5). ಸ್ಮುರ್ನದಲ್ಲಿದ್ದ ಕ್ರೈಸ್ತರು ಅವರಿಂದ ಕಸಿದುಕೊಳ್ಳಲಾಗದಂತಹ ಒಂದು ಐಶ್ವರ್ಯವನ್ನು ಹೊಂದಿದ್ದರು.

ಯೇಸು ಅವರಿಗೆ ಹೀಗೆ ಹೇಳುತ್ತಿರುವದನ್ನು ಕಲ್ಪನೆ ಮಾಡಿಕೊಳ್ಳಿರಿ, "ನಿಮ್ಮ ಕುಟುಂಬಗಳು ನಿಮಗೆ ವಿರುದ್ಧವಾಗಿ ತಿರುಗಿರಬಹುದು, ಆದರೆ ಈಗ ನೀವು ದೇವರ ಕುಟುಂಬದಲ್ಲಿರುವಿರಿ. ನೀವು ನಿಮ್ಮ ಉದ್ಯೋಗಗಳನ್ನು ಕಳಕೊಂಡಿರಬಹುದು, ಆದರೆ ಈಗ ನಿಮಗೊಂದು ಅತ್ಯುನ್ನತವಾದ ಕರೆ ಇರುತ್ತದೆ. ನೀವು ನಿಮ್ಮ ಬೆನ್ನುಗಳ ಮೇಲೆ ಚಿಂದಿ ಬಟ್ಟೆಗಳನ್ನು ಉಟ್ಟುಕೊಂಡಿರಬಹುದು, ಆದರೆ ನೀವು ನೀತಿಯ ನಿಲುವಂಗಿಗಳಿಂದ ತೊಡಿಸಲ್ಪಟ್ಟಿರುವಿರಿ. ನಿಮ್ಮ ಜೇಬುಗಳು ಖಾಲಿಯಾಗಿರಬಹುದು, ಆದರೆ ನಿಮ್ಮ ಹೃದಯಗಳು ತುಂಬಬಲ್ಲವು. ನೀವು ಹಿಂಸಿಸಲ್ಪಡುತ್ತಿರುವಿರಿ, ಆದರೆ ನೀವು ಯೋಗ್ಯರೆಂದು

ಎಣಿಸಲ್ಪಟ್ಟಿರುವದಕ್ಕಾಗಿ ಸಂತೋಷ ಪಡಬಲ್ಲಿರಿ [ನೋಡಿರಿ ಮತ್ತಾಯ 5:10-12]. ನಿಮ್ಮ ದೇಹಗಳು ಅಪಾಯಕ್ಕೆ ಸಿಲುಕಿರಬಹುದು, ಆದರೆ ನಿಮ್ಮ ಆತ್ಮಗಳು ಸುರಕ್ಷಿತವಾಗಿವೆ. ಭೂಮಿಯ ಮೇಲೆ ನಿಮ್ಮ ಹೆಸರುಗಳು ದೂಷಣೆಗೆ ಗುರಿಯಾಗಬಹುದು, ಆದರೆ ಮಹಾ ಶುಭ್ರ ಸಿಂಹಾಸನದ ಸುತ್ತಲೆಲ್ಲಾ ನಿಮ್ಮ ಹೆಸರುಗಳು ಬಹಳ ಗೌರವದಿಂದ ಮಾತಾಡಲ್ಪಡುತ್ತವೆ. ಮನುಷ್ಯರು ನಿಮಗೆ ವಿರುದ್ಧವಾಗಿರಬಹುದು, ಆದರೆ ದೇವರು ನಿಮಗಾಗಿ ಇದ್ದಾನೆ!" ಪೌಲನು ಅದನ್ನೆ ಬರೆದನು, "ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು?" (ರೋಮಾ 8:31).

ಅವರ ಸಂಕಟವು ತೆಗೆದುಕೊಂಡ ಎರಡನೆಯ ರೂಪವು ಹಿಂಸೆಯಾಗಿತ್ತು. ಲಭ್ಯವಿರುವ ಪುರಾವೆಯು ಸೂಚಿಸುವದೇನೆಂದರೆ ರೋಮನ್ ಸಾಮ್ರಾಜ್ಯದ ಬೇರೆ ಯಾವದೇ ಸ್ಥಳದಲ್ಲಿರುವದಕ್ಕಿಂತಲೂ ಸ್ಮುರ್ನದಲ್ಲಿ ಕ್ರೈಸ್ತರ ಜೀವಿತವು ಅತ್ಯಧಿಕ ಕಠಿಣವಾಗಿತ್ತು. ಸ್ಮುರ್ನ ಎಂದು ಕರೆಯಲ್ಪಡುವ ಹಿಂಸೆಯ ಹದವಾದ ಸ್ಥಳದಲ್ಲಿ, ಯೇಸು ಮತ್ತು ಪೌಲನನ್ನು ಉಪದ್ರವ ಪಡಿಸಿದ ಶಕ್ತಿಶಾಲಿ ಸಂಯೋಜನೆಯನ್ನು ಕಾಣುತ್ತೇವೆ: *ರೋಮನ್ ನಾಯಕರ*ನ್ನು ಜಾಣ್ಮೆಯಿಂದ ಬಳಸಿಕೊಳ್ಳುವ *ಪ್ರಭಾವಶಾಲಿ ಯೆಹೂದಿಗಳು*. ಅರವತ್ತು ವರ್ಷಗಳ ಮುಂಚೆ, ದೃಢಸಂಕಲ್ಪ ಮಾಡಿಕೊಂಡಿದ್ದ ಯೆಹೂದಿಗಳು ಯೇಸುವನ್ನು ಶಿಲುಬೆಗೆ ಹಾಕಿಸುವಂತೆ ರೋಮನ್ ದೇಶಾಧಿಪತಿಯ ಮನವೊಲಿಸಿದ್ದರು. ಸರ್ಕಾರಿ ಅಧಿಕಾರಿಗಳು ತಾವು ಹೇಳುವ ಮಾತಿನಂತೆ ನಡೆದುಕೊಳ್ಳುವ ಹಾಗೆ ಒತ್ತಾಯಗೊಳಿಸುವಷ್ಟು ರಾಜಕೀಯ ಪ್ರಭಾವವನ್ನು ಹೊಂದಿದ್ದ ಯೆಹೂದ್ಯರಿಂದಲೇ ಪೌಲನು ಅತ್ಯಂಥ ಹೆಚ್ಚಿನ ವಿರೋಧವನ್ನು ಎದುರಿಸಿದನು.

ಯೇಸು ಹಿಂಸೆಯ ವಿಷಯವನ್ನು ಈ ಮಾತುಗಳ ಮೂಲಕ ಪರಿಚಯಗೊಳಿಸುತ್ತಾನೆ: **ಇದಲ್ಲದೆ ತಮ್ಮನ್ನು ಯೆಹೂದ್ಯರೆಂದು ಹೇಳಿಕೊಳ್ಳುವವರು ನಿನ್ನ ವಿಷಯವಾಗಿ ದೂಷಿಸುವದನ್ನು ಬಲ್ಲೆನು; ಅವರು ಯೆಹೂದ್ಯರಲ್ಲ.** ಸೈತಾನನ ಸಭಾಮಂದಿರದವರಾಗಿದ್ದಾರೆ (ಸಮಾಜದವರಾಗಿದ್ದಾರೆ). "ಸೈತಾನ" (Σατανᾶς, *Satanas*) ಎಂಬ ಪದದ ಅರ್ಥವು "ವಿರೋಧಿ." ಇದು ಸೈತಾನನ ಹೆಸರುಗಳಲ್ಲೊಂದಾಗಿತ್ತು, ಆತನ ಕೆಲಸವು ತನ್ನ ವಿರೋಧಿಗಳನ್ನು ದೂಷಿಸುವದು ಮತ್ತು ತಪ್ಪು ಹೊರಿಸುವದು ಇವುಗಳನ್ನೊಳಗೊಂಡಿರುತ್ತದೆ. ಯೋಹಾನನ ದಿನದಲ್ಲಿ ಕ್ರೈಸ್ತರನ್ನು ದೂಷಿಸಿದವರು ಮೂಲ ದೂಷಣೆಗಾರನಿಂದ ಜಾಣ್ಮೆಯಿಂದ ಬಳಸಿಕೊಳ್ಳಲ್ಪಡುತ್ತಿದ್ದರು.

ಯೇಸು **ತಮ್ಮನ್ನು ಯೆಹೂದ್ಯರೆಂದು ಹೇಳಿಕೊಳ್ಳುವವರು . . . ಅವರು ಯೆಹೂದ್ಯರಲ್ಲ** ಎಂದು ಹೇಳಿದಾಗ ಯಾರನ್ನು ಸೂಚಿಸಿದನು? ಇವರು ಯೇಸುವನ್ನು ತಮ್ಮ ಮೆಸ್ಸೀಯನೆಂದು ಅಂಗೀಕರಿಸಿಕೊಂಡಿರದ ಶರೀರ ಸಂಬಂಧದ, ಶರೀರಾಧೀನಸ್ವಭಾವದ ಯೆಹೂದ್ಯರಾಗಿದ್ದರು, ಹೀಗೆ ಅವರು ತಮ್ಮನ್ನು ದೇವರ ಯೋಜನೆಗಳು ಹಾಗೂ ಉದ್ದೇಶಗಳಿಂದ ಹೊರಗೆ ಇಟ್ಟುಕೊಂಡಿದ್ದರು. ಬಹುಪಾಲು ಸಹಸ್ರವರ್ಷಪೂರ್ವಾಡಳಿತ ವಾದಿಗಳು ಶರೀರಸಂಬಂಧದ, ಶರೀರಾಧೀನಸ್ವಭಾವದ ಯೆಹೂದ್ಯರು, ಒಂದು ಅರ್ಥದಲ್ಲಿ ಈಗಲೂ ದೇವರ ವಿಶೇಷ ಪ್ರಜೆಗಳು, ಮತ್ತು ದೇವರು ಈಗಲೂ ಅವರಿಗೆ ಆದ್ಯತೆಯ ಪರಿಗಣನೆಯನ್ನು ಕೊಡುತ್ತಾನೆ ಎಂದು ಉಪದೇಶಿಸುತ್ತಾರೆ. ಹೊಸ ಒಡಂಬಡಿಕೆಯಲ್ಲಿ, ಅಬ್ರಹಾಮನ ಶಾರೀರಿಕ ಸಂತತಿಯಾಗಿರುವವನಿಗೆ ಯಾವದೇ ಒತ್ತು ಕೊಡಲ್ಪಟ್ಟಿರುವದಿಲ್ಲ. ಬದಲಾಗಿ, ದೇವರ ವಿಶೇಷ ಕಾಳಜಿಯು *ಆತ್ಮೀಕ* ಇಸ್ರಾಯೇಲ್ಯರಿಗಾಗಿ ಆಗಿರುತ್ತದೆ: ಸುವಾರ್ತೆಗೆ ವಿಧೇಯರಾಗುವ ಮೂಲಕ ತಮ್ಮನ್ನು ದೇವರ ಯೋಜನೆಗಳು ಹಾಗೂ ಉದ್ದೇಶಗಳೊಳಗೆ ತಂದುಕೊಂಡಿರುವವರು (ನೋಡಿರಿ ಗಲಾತ್ಯ 3:26-29). ದೇವರು ಎಲ್ಲಾ ಮನುಷ್ಯರನ್ನು

ಪ್ರೀತಿಸುವ ರೀತಿಯಲ್ಲಿಯೇ ಯೆಹೂದ್ಯರನ್ನು ಪ್ರೀತಿಸುತ್ತಾನೆ, ಆದರೆ ಆತನು ಇಂದು ಬೇರೆಯವರನ್ನು ರಕ್ಷಿಸುವ ರೀತಿಗಿಂತಲೂ ಯಾವದೇ ವ್ಯತ್ಯಾಸವಾದ ರೀತಿಯಲ್ಲಂತೂ ಅವರನ್ನು ರಕ್ಷಿಸುವದಿಲ್ಲ (ಅಪೊಸ್ತಲರ ಕೃತ್ಯಗಳು 10:34, 35): ಅವರು ಯೇಸುವಿನಲ್ಲಿ ನಂಬಿಕೆಯಿಡಬೇಕು ಮತ್ತು ಆತನಿಗೆ ವಿಧೇಯರಾಗಬೇಕು (ಯೋಹಾನ 8:31; ಮತ್ತಾಯ 7:13, 14; 14:1-5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಇದಕ್ಕೆ ಮುಂಚೆ ಪೌಲನು ಹೀಗೆ ಬರೆದಿದ್ದನು:

> ಹೊರಗೆ ಮಾತ್ರ ಯೆಹೂದ್ಯನಾಗಿರುವವನು ಯೆಹೂದ್ಯನಲ್ಲ; ಮತ್ತು ಹೊರಗೆ ಶರೀರದಲ್ಲಿ ಮಾತ್ರ ಮಾಡಿರುವ ಸುನ್ನತಿಯು ಸುನ್ನತಿಯಲ್ಲ. ಆದರೆ ಒಳಗೆ ಯೆಹೂದ್ಯನಾಗಿರುವವನೇ ಯೆಹೂದ್ಯನು; ಮತ್ತು ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ. ಇದು ಬಾಹ್ಯಾಚಾರಕ್ಕೆ ಸಂಬಂಧಪಟ್ಟದ್ದಲ್ಲ, ಆತ್ಮ ಸಂಬಂಧಪಟ್ಟದ್ದೇ; ಇಂಥಾ ಸುನ್ನತಿಯಿದ್ದವನಿಗೆ ಬರುವ ಹೊಗಳಿಕೆಯು ದೇವರಿಂದಲೇ ಹೊರತು ಮನುಷ್ಯರಿಂದ ಬರುವದಿಲ್ಲ (ರೋಮಾ 2:28, 29; RSV).

ಈ ನಂಬಿಕೆಯಿಲ್ಲದ ಯೆಹೂದ್ಯರು ಕೂಡಿ ಬರುವ ಸ್ಥಳವು **ಸೈತಾನನ ಸಭಾಮಂದಿರ** ಎಂದು ಕರೆಯಲ್ಪಟ್ಟಿದೆ ಯಾಕೆಂದರೆ ಕ್ರೈಸ್ತರನ್ನು ಹಿಂಸಿಸುವಂತೆ ಸೈತಾನನಿಂದ ಉಪಯೋಗಿಸಿಕೊಳ್ಳಲ್ಪಡುವದಕ್ಕೆ ಅವಕಾಶ ಕೊಟ್ಟವರಾಗಿದ್ದರು. ತಮ್ಮನ್ನು ಅಬ್ರಹಾಮನ ಸಂತತಿಯವರೆಂದು ಹೇಳಿಕೊಂಡಿದ್ದ ಆದರೆ ನಿಜವಾಗಿಯೂ ಸೈತಾನನ ಆತ್ಮೀಕ ಸಂತತಿಯವರಾಗಿದ್ದ ಯೆಹೂದ್ಯರ ಸಂಗಡ ಯೇಸುವು ಮಾತಾಡಿದ್ದನು (ಯೋಹಾನ 8:39-47). ಸೈತಾನನು ಒಬ್ಬ "ಪ್ರಕಾಶರೂಪವುಳ್ಳ ದೇವದೂತನ" ವೇಷವನ್ನು ಧರಿಸಿಕೊಳ್ಳಬಲ್ಲವನಾಗಿದ್ದನು (2 ಕೊರಿಂಥ 11:14). ಆತನು ಸಭಾಮಂದಿರಗಳನ್ನು ಮತ್ತು ಸಭೆಗಳನ್ನು ಹೊಂದಿದ್ದಾನೆ, ತನ್ನ ಪ್ರವಾದಿಗಳನ್ನು ಮತ್ತು ಬೋಧಕರನ್ನು ಹೊಂದಿದ್ದಾನೆ. ಆತನು ತನ್ನ ಉದ್ದೇಶಕ್ಕೆ ಪೂರಕವಾಗಿರುವದಾದರೆ ಶಾಸ್ತ್ರಗಳನ್ನು ಉಲ್ಲೇಖ ಮಾಡಬಲ್ಲನು (ಮತ್ತಾಯ 4:6). ಆದುದರಿಂದ, ನಾವು "ಆತ್ಮದ ಎಲ್ಲಾ ನುಡಿಗಳನ್ನು ನಂಬದೆ ಆಯಾ ನುಡಿಗಳು ದೇವರಿಂದ ಪ್ರೇರಿತವಾದವುಗಳೋ ಅಲ್ಲವೋ ಎಂದು ಅವುಗಳನ್ನು ಪರೀಕ್ಷಿಸಬೇಕು" (1 ಯೋಹಾನ 4:1).

ಸ್ಮುರ್ನದಲ್ಲಿ, ಯೆಹೂದ್ಯರಿಂದಾದ ಹಿಂಸೆಯ ಒಂದು ಮುಖವೆಂದರೆ **ದೂಷಿಸುವದು** ಅಥವಾ "ಚಾಡಿ ಹೇಳುವದು" (NIV). "ದೂಷಿಸುವದು" ಎಂಬುದು "ಮತ್ತೊಬ್ಬನಿಗೆ ಗಾಯವನ್ನುಂಟು ಮಾಡುವದಕ್ಕೆ ಪ್ರಯತ್ನಿಸುತ್ತಾ ಆತನಿಗೆ ವಿರುದ್ಧವಾಗಿ ಮಾತಾಡುವದು" ಎಂಬುದನ್ನು ಸೂಚಿಸುತ್ತದೆ. ಈ ಘಟನೆಯು ಯೇಸುವಿನ ಹೆಸರನ್ನು ಯೆಹೂದ್ಯರು ದೂಷಿಸುವದನ್ನು ಸೂಚಿಸಿರಬಹುದಾಗಿದೆ, ಅಥವಾ ಯೆಹೂದ್ಯರು ಕ್ರೈಸ್ತರ ಹೆಸರುಗಳನ್ನು ದೂಷಿಸುತ್ತಿದ್ದಾರೆ ಎಂದರ್ಥವಾಗಿರಬಹುದಾಗಿದೆ. AB ತರ್ಜುಮೆಯಲ್ಲಿ, "*ನಿಮ್ಮ* ಬಗ್ಗೆ ಯಾವ ರೀತಿಯಲ್ಲಿ ಬೈಗುಳ ಮತ್ತು ಕೆಟ್ಟಮಾತುಗಳನ್ನು ಹಾಗೂ ನಿಂದನೆಗಳನ್ನು ಮಾಡಲಾಗುತ್ತಿದೆ ಎಂದು ಬಲ್ಲೆನು" ಎಂದಿರುತ್ತದೆ (ಒತ್ತಿ ಹೇಳಿದ್ದು ನನ್ನದು). ಬಹುಶಃ, ಯೆಹೂದ್ಯರಿಂದಾದ ದೂಷಣೆಯಲ್ಲಿ ಯೇಸು ಹಾಗೂ ಆತನ ಹಿಂಬಾಲಕರಿಬ್ಬರೂ ಸೇರಿದ್ದರು. ಅವರು ಯೇಸುವನ್ನು "ಮರಕ್ಕೆ ತೂಗು ಹಾಕಲ್ಪಟ್ಟವನು" (ನೋಡಿರಿ ಗಲಾತ್ಯ 3:13) ಎನ್ನುತ್ತಿದ್ದರು, ಮತ್ತು ಕ್ರೈಸ್ತರನ್ನು ಅಪಹಾಸ್ಯ ಮಾಡಿದರು.

**ವಚನ 10.** ಯೆಹೂದ್ಯರು ತಮ್ಮ ದೂಷಿಸುವಿಕೆಯನ್ನು ಇನ್ನಷ್ಟು ಅಧಿಕಗೊಳಿಸುವದಕ್ಕೆ ತುದಿಗಾಲಲ್ಲಿ ನಿಂತಿದ್ದರು, ಆದ್ದರಿಂದ ಕ್ರಿಸ್ತನು ಮುಂದುವರೆಸಿ ಹೀಗೆ ಹೇಳುತ್ತಾನೆ: **ನಿನಗೆ**

**ಸಂಭವಿಸುವದಕ್ಕಿರುವ ಬಾಧೆಗಳಿಗೆ ಹೆದರಬೇಡ. ಇಗೋ ನೀವು ಸೈತಾನನು ನಿಮ್ಮಲ್ಲಿ ಕೆಲವರನ್ನು ಸೆರೆಮನೆಗೆ ಹಾಕುವದಕ್ಕಿದ್ದಾನೆ.** ಬಹುಶಃ ಯೆಹೂದ್ಯರೇ ಕ್ರೈಸ್ತರನ್ನು ಸೆರೆಮನೆಗೆ ಹಾಕುವಂತೆ ರೋಮನ್ ಅಧಿಕಾರಿಗಳನ್ನು ಬೇಡಿಕೊಳ್ಳಲಿದ್ದರು, ಆದರೆ ಆ ಕ್ರಿಯೆಯು ಸೈತಾನನಿಂದಲೇ ಆಗುವಂಥದ್ದೆಂದು ಯೇಸು ಹೇಳುತ್ತಾನೆ. ಯೆಹೂದ್ಯರು ಸೈತಾನನ ಕೆಲಸವನ್ನು ಮಾಡುವವರಾಗಿದ್ದರು.

ಯೇಸುವು ಸೆರೆವಾಸದ ಬಗ್ಗೆ ಮಾತಾಡುವ ವೇಳೆ, ಬಾಧೆಯನ್ನನುಭವಿಸುವ ಉದ್ದೇಶವನ್ನು ಒತ್ತಿ ಹೇಳಿದನು: **ಇಗೋ ನೀವು ಶೋಧಿಸಲ್ಪಡುವಂತೆ** (ದುಷ್ಪ್ರೇರಣೆಗೆ ಒಳಗಾಗುವಂತೆ) ಮಾಡಲ್ಪಡುವಿರಿ. ಬಾಧೆಯನ್ನನುಭವಿಸುವದರಲ್ಲಿ ಪ್ರಯೋಜನವನ್ನು ಕಾಣಬಹುದು (ನೋಡಿರಿ ಯಾಕೋಬ 1:2-4; 1 ಪೇತ್ರ 1:6-9). ಯಾರಾರ ನಂಬಿಕೆಯು ದೃಢವಾಗಿದೆ ಮತ್ತು ಯಾರಾರ ನಂಬಿಕೆಯು ದೃಢವಾಗಿಲ್ಲ ಎಂಬುದು ಶೀಘ್ರದಲ್ಲಿಯೇ ಸ್ಪಷ್ಟತೆಗೆ ಬರಲಿತ್ತು.

ಅವರ ಬಾಧೆಯು ಎಷ್ಟು ಕಾಲ ಮುಂದುವರೆಯುವದು ಎಂಬುದರ ಮಾಹಿತಿಯನ್ನು ಸಹ ಕೊಟ್ಟನು: **ಹತ್ತು ದಿವಸಗಳ ಕಾಲ ನಿಮಗೆ ಸಂಕಟವಿರುವದು.** ಪ್ರಕಟನೆ ಪುಸ್ತಕದಲ್ಲಿ, **ಹತ್ತು** ಅಂಕೆಯು ಸಂಪೂರ್ಣತೆ, ಪೂರ್ಣತೆ, ಅಥವಾ ಶಕ್ತಿಯನ್ನು ಸೂಚಿಸುತ್ತದೆ. "ಹತ್ತು" ಹತ್ತರಿಂದ ಗುಣಕಾರ ಮಾಡಲ್ಪಟ್ಟ ಸಂಖ್ಯೆಯು (100 ಅಥವಾ 1,000) ಇನ್ನಷ್ಟು ಅಧಿಕ ಮಹತ್ವವನ್ನು ಪಡೆದುಕೊಳ್ಳುವದಾಗಿತ್ತು. ಹೇಗೂ, 10ನೇ ವಚನದಲ್ಲಿ, "ಹತ್ತು" ಅಂಕೆಯು ಹತ್ತರಿಂದ ಗುಣಕಾರ ಮಾಡಲ್ಪಟ್ಟಿರುವದಿಲ್ಲ; ಅದು ಏಕಾಂಗಿಯಾಗಿ ನಿಲ್ಲುತ್ತದೆ. ಹೀಗೆ ಅದು ಸಂಪೂರ್ಣವಾದ ಸಮಗ್ರ ಹಿಂಸೆಯನ್ನು ಸೂಚಿಸುತ್ತದೆ, ಆದರೆ ಅದೊಂದು ಮಿತಿಗಳುಳ್ಳ ಹಿಂಸೆಯಾಗಿರುತ್ತದೆ. Eugene Petersonನ ಭಾವಾನುವಾದವು ಹೀಗೆ ಹೇಳುತ್ತದೆ, "ಅದೇನೂ ಹೆಚ್ಚು ಕಾಲ ಇರುವದಿಲ್ಲ."[18] ದೇವರ ಒಬ್ಬ ಮಗುವಿಗಾದರೋ, ಕೆಟ್ಟದ್ದೆಲ್ಲವೂ ತಾತ್ಕಾಲಿಕವಾಗಿರುತ್ತದೆ (ಯೋಬನು 3:17) ಮತ್ತು ನಿತ್ಯತ್ವಕ್ಕೆ ಹೋಲಿಕೆ ಮಾಡಿದರೆ ಸಮಸ್ಯೆಗಳೆಲ್ಲವೂ ಕೇವಲ ಕ್ಷಣ ಮಾತ್ರವೇ ಇರುವಂಥವುಗಳಾಗಿವೆ (2 ಕೊರಿಂಥ 4:17; ಯಾಕೋಬ 4:14).

ಇಲ್ಲಿ "ಹತ್ತು ದಿವಸಗಳು" ಎಂಬುದರ ಸಾಂಕೇತಿಕ ಅರ್ಥನಿರೂಪಣೆಯು ಸಲಹೆ ಮಾಡಲ್ಪಟ್ಟಿರುತ್ತದೆ ಯಾಕೆಂದರೆ (1) ಯಾವದೇ ಹಿಂಸೆಯು *ಕೇವಲ* ಹತ್ತು ದಿನಗಳ ಕಾಲ ಮಾತ್ರವೇ ಇರುವದು ಅಸಂಭವವಾದದ್ದು, ಮತ್ತು (2) ಸಂಖ್ಯೆಗಳನ್ನು ಅಕ್ಷರಶಃ ಅರ್ಥೈಸಿಕೊಳ್ಳುವದಕ್ಕೆ ನಿರ್ದಿಷ್ಟವಾದ ಕಾರಣಗಳು ನಮಗೆ ಅಲ್ಲಿ ಕೊಡಲ್ಪಟ್ಟಿರುವ ಹೊರತು ನಾವು ಪ್ರಕಟನೆ ಪುಸ್ತಕದಲ್ಲಿನ ಸಂಖ್ಯೆಗಳನ್ನು ಸಾಂಕೇತಿಕವಾಗಿ ಅರ್ಥನಿರೂಪಣೆ ಮಾಡಬೇಕು. ಹೇಗೂ, "ಹತ್ತು ದಿವಸಗಳು" ಎಂಬುದು ಒಂದು ನಿರ್ದಿಷ್ಟವಾದ ಕಾಲಾವಧಿಯನ್ನು ಸೂಚಿಸುತ್ತದೋ ಅಥವಾ ಕಾಲದ ಸಾಮಾನ್ಯ ಅವಧಿಯನ್ನು ಸೂಚಿಸುತ್ತದೋ ಎಂಬ ಪ್ರಶ್ನೆಯು 2:10ರ ಸಂದೇಶದ ಮೇಲೆ ಪರಿಣಾಮ ಬೀರುವದಿಲ್ಲ. "ಹತ್ತು ದಿವಸಗಳು" ಕುರಿತಾದ ಇನ್ನೊಂದು ಅಭಿಪ್ರಾಯವನ್ನು ಪ್ರಸ್ತಾಪಿಸಬಹುದು: ಈ ಉಲ್ಲೇಖವು ಹಿಂಸೆಯ ಹತ್ತು ಕಾಲಾವಧಿಗಳನ್ನು ಸೂಚಿಸುತ್ತದೆ ಎಂದು ಕೆಲವರು ನಂಬುತ್ತಾರೆ, ಆದರೆ ಸನ್ನಿವೇಶದಲ್ಲಿರುವ ಯಾವದೇ ಆಗಲಿ ಈ ಅರ್ಥನಿರೂಪಣೆಯನ್ನು ಸಮರ್ಥಿಸುವದಿಲ್ಲ.

10ನೇ ವಚನದ ಕಡೇ ಭಾಗದಲ್ಲಿ, ಯೇಸು ಅವರ ಸಂಕಟದ ಕುರಿತಾದ ತನ್ನ ಹೇಳಿಕೆಗಳನ್ನು ಪ್ರಕಟನೆ ಪುಸ್ತಕದಲ್ಲಿ ಅತ್ಯಂಥ ಪರಿಚಿತವಾಗಿರುವ ಮಾತುಗಳಿಂದ ಮುಕ್ತಾಯಗೊಳಿಸುತ್ತಾನೆ: **ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು.** ಸನ್ನಿವೇಶದಲ್ಲಿ, **ಸಾಯಬೇಕಾದರೂ** ಎಂಬ

ಪದಗುಚ್ಛದ ಅರ್ಥವು "ನೀವು ಅದಕ್ಕಾಗಿ ಮರಣ *ಹೊಂದಬೇಕಾದರೂ*" ಎಂದಾಗಿರುತ್ತದೆ. AB ತರ್ಜುಮೆಯಲ್ಲಿ "ಸಾಯಬೇಕಾದರೂ ನಿಷ್ಠೆಯಿಂದ ನಂಬಿಗಸ್ತನಾಗಿರು - [ಅಂದರೆ,] ನೀನು ಸಾಯಲೇ ಬೇಕಾಗಿ ಬಂದಾಗ್ಯೂ" ಎಂದಿರುತ್ತದೆ. ಯೇಸು ಈ ಕ್ರೈಸ್ತರಿಗೆ ಅವರನ್ನು ಸಮಸ್ಯೆ*ಯಿಂದ* ಬಿಡುಗಡೆ ಮಾಡುತ್ತೇನೆಂಬ ವಾಗ್ದಾನವನ್ನು ಮಾಡಲಿಲ್ಲ; ಬದಲಾಗಿ, ಆತನು ಅವರನ್ನು ಸಮಸ್ಯೆಯ *ಮೂಲಕ* ದಾಟಿಸಿಕೊಂಡು ಸುರಕ್ಷಿತವಾಗಿ ಕರೆ ತರುವನು ಎಂಬ ವಾಗ್ದಾನ ಮಾಡಿದನು. ಪ್ರಕಟನೆ ಪುಸ್ತಕವು ದೇವರ ನಂಬಿಗಸ್ತ ಮಗುವಿಗೆ ಜಯ ಸಿಕ್ಕುವದೆಂದು ಕಲಿಸುತ್ತದೆ, ಆದರೆ ಅದು ಬಾಧೆಯನ್ನನುಭವಿಸದೆ ಜಯವು ಸಿಕ್ಕುವದೆಂಬ ವಾಗ್ದಾನವನ್ನು ಮಾಡುವದಿಲ್ಲ. ಕ್ರೈಸ್ತರು ಜಯಿಸುವರೆಂಬ ಭರವಸವನ್ನು ಯೇಸುವು ಅವರಿಗೆ ನೀಡುತ್ತಾನೆ, ಆದರೆ ಅವರು ಮೊದಲು ಸಾಯಬೇಕಾಗುತ್ತದೆಂಬುದನ್ನು ಅರ್ಥಮಾಡಿಕೊಳ್ಳಬೇಕು ಎಂಬುದು ಆತನ ಬಯಕೆಯಾಗಿತ್ತು.

ಅವರು "ಸಾಯಬೇಕಾದರೂ ನಂಬಿಗಸ್ತರಾಗಿ" ಇರುವದಾದರೆ, ಅವರಿಗೆ ತಾನು **ಜೀವವೆಂಬ ಜಯಮಾಲೆ**ಯನ್ನು ಕೊಡುವೆನೆಂದು ವಾಗ್ದಾನ ಮಾಡಿದನು (ನೋಡಿರಿ 1 ಕೊರಿಂಥ 9:25; 2 ತಿಮೊಥೆ 4:8; ಯಾಕೋಬ 1:12; 1 ಪೇತ್ರ 5:4). "ಜಯಮಾಲೆ" (ಕಿರೀಟ) ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು στέφανος (*stephanos*) *ಎಂದಾಗಿರುತ್ತದೆ.* "ಕಿರೀಟ" (ಜಯಮಾಲೆ) ಎಂಬುದಕ್ಕಿರುವ ಇನ್ನೊಂದು ಪದದಿಂದ *diadem* ಎಂಬ ಪದವು ಬಂದಿದ್ದು, ಅದು ಒಂದು ರಾಜವಂಶದ ಕಿರೀಟವನ್ನು, ಆಳ್ವಿಕೆ ಮಾಡುವ ಕಿರೀಟವನ್ನು ಸೂಚಿಸುತ್ತದೆ. ಅದಕ್ಕೆ ತದ್ವಿರುದ್ಧವಾಗಿ *stephanos* ಎಂಬುದು *ಜಯದ* ಕಿರೀಟವನ್ನು ಸೂಚಿಸುವದಾಗಿತ್ತು. ಆ ಪದವು ಬಲಪ್ರದರ್ಶನದ ಕ್ರೀಡೆಯಲ್ಲಿ ಜಯಿಸಿದವರ ತಲೆಯ ಮೇಲಿಡುತ್ತಿದ್ದ ಹಾರ ಅಥವಾ ಮಾಲೆಯನ್ನು ಬಣ್ಣಿಸುವದಕ್ಕೆ ಬಳಸಲ್ಪಡುವದಾಗಿತ್ತು. *Stephanos* ಕಿರೀಟವು ಅದನ್ನು ಪಡೆದುಕೊಂಡವರನ್ನು ಸನ್ಮಾನಿಸುವದಕ್ಕಾಗಿ ಬೇರೆ ಪರಿಸ್ಥಿತಿಗಳಲ್ಲಿ ಸಹ ಬಳಸಲ್ಪಡುತ್ತಿತ್ತು. ಯೇಸುವಿನ ವಾಗ್ದಾನದಲ್ಲಿ, ಕಿರೀಟವು *(ಮಾಲೆ)* ಜೀವವನ್ನು - ನಿತ್ಯಜೀವವನ್ನು - ಒಳಗೊಂಡಿದೆ. ಅನ್ಯಧರ್ಮಿಯ ಯಾಜಕರಿಗೆ ಶೀಘ್ರವೇ ನಶಿಸಿ ಹೋಗುವ ಮಾಲೆಗಳು ಕೊಡಲ್ಪಟ್ಟಿರಬಹುದು, ಆದರೆ ನಂಬಿಗಸ್ತರಾದ ಕ್ರೈಸ್ತರಿಗೆ ಎಂದಿಗೂ ಬಾಡಿ ಹೋಗದಂತಹ ನಿತ್ಯವಾದ ಮಾಲೆಗಳು ಕೊಡಲ್ಪಡುವವು.

ಸ್ಮುರ್ನದಲ್ಲಿರುವ ಸಭೆಯಾಗಲಿ ಇಲ್ಲವೇ ಫಿಲದಲ್ಫಿಯದಲ್ಲಿನ ಸಭೆಯಾಗಲಿ ಕರ್ತನಿಂದ ಖಂಡನೆಯನ್ನು ಹೊಂದಲಿಲ್ಲ ಎಂಬುದನ್ನು ಈ ಮುಂಚೆ ಕಲಿತುಕೊಂಡಿದ್ದೇವೆ. ಅವರೆಡರಲ್ಲಿಯೂ ಇದ್ದ ಸಾಮಾನ್ಯವಾದ ಸಂಗತಿ ಯಾವದಾಗಿತ್ತು? ನಾವು ಮುಂದೆ ಫಿಲದಲ್ಫಿಯದ ಸಭೆಗೆ ಬರೆದಿರುವ ಪತ್ರದ ಮೇಲೆ ಕಣ್ಣಾಡಿಸುವ ವೇಳೆ ಸ್ಮುರ್ನದಲ್ಲಿದ್ದ ಪರಿಸ್ಥಿತಿಯ ಕುರಿತು ನಾವು ಕಲಿತಿರುವದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ:

> ನಾನು ನಿನಗೆ ಅನುಗ್ರಹಿಸುವದೇನಂದರೆ ತಾವು ಯೆಹೂದ್ಯರೆಂದು ಸುಳ್ಳಾಗಿ ಕೊಚ್ಚಿಕೊಳ್ಳುವ ಸೈತಾನನ ಸಮಾಜದವರಲ್ಲಿ ಕೆಲವರು ಬಂದು ನಿನ್ನ ಪಾದಗಳ ಮುಂದೆ ಬೀಳುವಂತೆಯೂ ನಿನ್ನನ್ನು ನಾನು ಪ್ರೀತಿಸಿದ್ದನ್ನು ತಿಳುಕೊಳ್ಳುವಂತೆಯೂ ಮಾಡುವೆನು. ನೀನು ನನ್ನ ಸಹನವಾಕ್ಯವನ್ನು ಕಾಪಾಡಿದ್ದರಿಂದ ಭೂನಿವಾಸಿಗಳನ್ನು ಪರೀಕ್ಷಿಸುವದಕ್ಕಾಗಿ ಲೋಕದ ಮೇಲೆಲ್ಲಾ ಬರುವದಕ್ಕಿರುವ ಶೋಧನೆಯ ಸಮಯದಲ್ಲಿ ನಿನ್ನನ್ನು ತಪ್ಪಿಸಿ ಕಾಪಾಡುವೆನು (3:9, 10).

ಇವೆರಡೂ ಸಭೆಗಳಲ್ಲಿ ಸಾಮಾನ್ಯವಾಗಿದ್ದ ಕಾರ್ಯವೆಂದರೆ ಅವುಗಳು *ಹಿಂಸೆಗೊಳಗಾಗಿದ್ದವು* - ಕೇವಲ ಹಿಂಸೆಗೊಳಗಾಗಿದ್ದು ಮಾತ್ರವೇ ಅಲ್ಲ, ಆದರೆ ಅವರ ಜೀವಿತಗಳನ್ನು

ದುಸ್ಥಿತಿಗೊಳಗಾಗುವಂತೆ ಲಭ್ಯವಿರುವ ಸಕಲ ದಾರಿಗಳನ್ನು ಬಳಸಿಕೊಂಡ ಹೊಲಸು ಯೆಹೂದ್ಯರಿಂದ ಹಿಂಸಿಸಲ್ಪಟ್ಟಿದ್ದರು.

ಈ ಎರಡು ಸಭೆಗಳ ಹಿಂಸೆಯ ನಡುವೆ ಮತ್ತು ಆ ಸಭೆಗಳ ಬಹುಪಾಲು ಸದಸ್ಯರು ಕರ್ತನಿಗೆ ಮೆಚ್ಚಿಕೆಯಾದವರಾಗಿದ್ದರೆಂಬ ವಾಸ್ತವಾಂಶದ ನಡುವೆ ಯಾವ ಸಂಬಂಧವು ಇರುವದಕ್ಕೆ ಸಾಧ್ಯವಿತ್ತು? ಆ ಸಂಬಂಧವು ಇಲ್ಲಿದೆ: ಬಿರುಗಾಳಿಯು ಮೃತ ಮರದಲ್ಲಿನ ಕೊಂಬೆಗಳನ್ನು ಮುರಿದು ಹಾಕುವ ರೀತಿಯಲ್ಲಿಯೇ, ಕುಲುಮೆಯು ಕಶ್ಮಲವನ್ನು (ಮಡ್ಡಿಯನ್ನು) ಸುಟ್ಟು ಹಾಕುವ ರೀತಿಯಲ್ಲಿಯೇ, ಹಿಂಸೆಯು ಸಭೆಯನ್ನು ಶುದ್ಧ ಮಾಡುತ್ತದೆ. ಪರಿಶೋಧನೆಯ ಸಮಯದ ವೇಳೆ, ನಿಜವಾಗಿಯೂ ನೀತಿವಂತರಾಗಿರುವವರು ಸ್ವ-ನೀತಿವಂತರಿಂದ ಪ್ರತ್ಯೇಕಿಸಲ್ಪಡುವರು; ಸಮರ್ಪಣೆಯುಳ್ಳವರು ಅರೆಹೃದಯವುಳ್ಳವರಿಂದ ಪ್ರತ್ಯೇಕಿಸಲ್ಪಡುವರು; ನಂಬಿಗಸ್ತರು ಭಯಗ್ರಸ್ಥರಿಂದ ಪ್ರತ್ಯೇಕಿಸಲ್ಪಡುವರು. G. Campbell Morgan ಒಮ್ಮೆ ಈ ರೀತಿಯಾಗಿ ಬರೆದನು, "ಹಿಂಸಿಸಲ್ಪಟ್ಟ ಕ್ರಿಸ್ತನ ಸಭೆಯ ನಿರ್ಮಲಗೊಂಡ ಕ್ರಿಸ್ತನ ಸಭೆಯಾಗಿದೆ. [ಇನ್ನೊಂದೆಡೆಯಲ್ಲಿ,] ಪೋಷಿಸಲ್ಪಟ್ಟ ಕ್ರಿಸ್ತನ ಸಭೆಯು ಯಾವಾಗಲೂ ಅಶುದ್ಧ ಸಭೆಯಾಗಿರುತ್ತದೆ."[19]

ಹಿಂಸೆಯನ್ನು ಯಾವನೂ ಬಯಸುವದಿಲ್ಲ. ಪೌಲನು ಹೇಳಿದ್ದೇನೆಂದರೆ "ನಮಗೆ ಸುಖಸಮಾಧಾನ ಉಂಟಾಗಿ ನಾವು ಪೂರ್ಣಭಕ್ತಿಯಿಂದಲೂ ಗೌರವದಿಂದಲೂ ಕಾಲಕ್ಷೇಪ ಮಾಡುವಂತೆ ಅರಸುಗಳಿಗಾಗಿಯೂ ಎಲ್ಲಾ ಅಧಿಕಾರಿಗಳಿಗಾಗಿಯೂ ವಿಜ್ಞಾನೆಗಳನ್ನು ಮಾಡಬೇಕು" ಎಂಬದೆ (1 ತಿಮೊಥೆ 2:1, 2). ಬಳಿಕ ಆತನು ಮುಂದುವರೆದು ಹೇಳಿದ್ದೇನೆಂದರೆ, "ಹೀಗೆ ಮಾಡುವದು ನಮ್ಮ ರಕ್ಷಕನಾದ ದೇವರ ಸನ್ನಿಧಿಯಲ್ಲಿ ಮೆಚ್ಚಿಕೆಯಾಗಿಯೂ ಯೋಗ್ಯವಾಗಿಯೂ ಅದೆ" (1 ತಿಮೊಥೆ 2:3). ಅದೇ ಸಮಯದಲ್ಲಿ, ಹಿಂಸೆಯು ಸಭೆಗೆ ಸಂಭವಿಸಬಲ್ಲ ಅತ್ಯಂಥ ಘೋರವಾದ ಕಾರ್ಯವಂತೂ ಆಗಿರುವದಿಲ್ಲ. ದೇಹವನ್ನು ಶುದ್ಧಮಾಡುವದಕ್ಕಾಗಿ ದೇವರು ಅದನ್ನು ಬಳಸಿಕೊಳ್ಳಬಲ್ಲನು.

**ವಚನ 11.** ತಾನು ಹೇಳಿದ ಕಾರ್ಯದ ಕಡೆಗೆ ಸೂಕ್ಷ್ಮವಾದ ಗಮನವನ್ನು ಕೊಡಬೇಕೆಂದು ಪ್ರತಿಯೊಬ್ಬ ಸದಸ್ಯರನ್ನು ಪ್ರೋತ್ಸಾಹಿಸುತ್ತಾನೆ: **ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ. ಜಯಹೊಂದುವವನಿಗೆ ಎರಡನೆಯ ಮರಣದಿಂದ ಕೇಡಾಗುವದೇ ಇಲ್ಲ** (ವ. 7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಬಳಿಕ ಆತನು ಒಂದು ಆದರಣೆಯ ಸಂದೇಶದೊಂದಿಗೆ ಸ್ಮುರ್ನ ಸಭೆಗೆ ಬರೆದ ಪತ್ರವನ್ನು ಮುಕ್ತಾಯಗೊಳಿಸುತ್ತಾನೆ. ಆತನು ಅವರ ಕಡೆಗೆ ಸಮಸ್ಯೆಯು ಬರುತ್ತಿದೆ ಎಂಬುದನ್ನು ಆ ಪಟ್ಟಣದಲ್ಲಿರುವ ಕ್ರೈಸ್ತರಿಗೆ ಕೇವಲ ತಿಳಿಸುವದಕ್ಕಾಗಷ್ಟೆ ಬರೆಯಲಿಲ್ಲ. ಬದಲಾಗಿ, ಮುಂದೆ ಬರಲಿಕ್ಕಿದ್ದ ಕಾರ್ಯದ ಮೇಲೆ ಅವರು ಜಯಶಾಲಿಗಳಾಗುವ ಹಾಗೆ ಅವರನ್ನು ಆದರಣೆ ಮಾಡಲು ಮತ್ತು ಬಲಗೊಳಿಸಲು ಬಯಸಿದ್ದನು.

ಯೇಸು ಈಗಾಗಲೇ ಅವರಿಗೆ ಬಹಳಷ್ಟು ಆದರಣೆಯನ್ನು ನೀಡಿದ್ದನು. ಮರಣದ ಮೇಲೆ ಅಧಿಕಾರ ಹೊಂದಿರುವವನೇ ತಾನೇ ಎಂಬುದನ್ನು ಆತನು ಒತ್ತಿ ಹೇಳಿದ್ದನು (ವ. 8). ತತ್ಪರಿಣಾಮವಾಗಿ ಆತನು ಹೇಳಿದ್ದೇನೆಂದರೆ, "ನಿಮಗಿರುವ ಸಮಸ್ಯೆಗಳನ್ನು ಬಲ್ಲೆನು ಮತ್ತು ಅರ್ಥಮಾಡಿಕೊಳ್ಳುತ್ತೇನೆ" (ವ. 9). ಅವರ ಬಾಧೆಗಳಿಗೆ ಮಿತಿಯಿರುತ್ತದೆಂಬುದನ್ನು ಆತನು ಒತ್ತಿ ಹೇಳಿದ್ದನು (ವ. 10). ಯೇಸು ಈಗ ತನ್ನ ಆದರಣೆಯ ಮಾತುಗಳನ್ನು ಈ ವಾಗ್ದಾನದೊಂದಿಗೆ ಪರಾಕಾಷ್ಠೆಯ ಕಡೆಗೆ ಒಯ್ಯುತ್ತಾನೆ: **ಜಯಹೊಂದುವವನಿಗೆ ಎರಡನೆಯ ಮರಣದಿಂದ ಕೇಡಾಗುವದೇ ಇಲ್ಲ** (ನೋಡಿರಿ 20:6). ಮೂಲ ವಾಕ್ಯದಲ್ಲಿ, ಒಂದು ಇಮ್ಮಡಿ

ನಕಾರಾತ್ಮಕವು (οὐ μή, *ou mē*) ಬಳಸಲ್ಪಟ್ಟಿದ್ದು "ಇಲ್ಲ" ಎಂಬುದರ ಬಲವನ್ನು ಇಮ್ಮಡಿಗೊಳಿಸುತ್ತದೆ, ಅದೊಂದು ರೀತಿಯಲ್ಲಿ "ಇಲ್ಲ" ಎಂಬ ಪದವು ಅಡಿರೇಖೆ ಹಾಕಲ್ಪಟ್ಟದ್ದಾಗಿದೆಯೋ ಎಂಬಂತೆ ಅಥವಾ ದೊಡ್ಡಾಗಿ ಬರೆಯಲ್ಪಟ್ಟಿದೆ ಎಂಬಂತೆ ಆಗಿರುತ್ತದೆ. ತತ್ಪರಿಣಾಮವಾಗಿ ಯೇಸು ಇಲ್ಲಿ ಹೇಳುತ್ತಿರುವದೇನಂದರೆ, "ಜಯಹೊಂದುವವನು ಬಹು ಖಚಿತವಾಗಿಯೂ ಗಾಯಗೊಳ್ಳುವದಿಲ್ಲ. . . ."

**ಎರಡನೆಯ ಮರಣ** ಎಂಬ ಪದಗುಚ್ಛವು ಪ್ರಕಟನೆ ಪುಸ್ತಕದ ಅಂತ್ಯವನ್ನು ಮುಂದಾಗಿ ತೋರಿಸುತ್ತದೆ. ಯೋಹಾನನು ನ್ಯಾಯತೀರ್ಪಿನ ಬಣ್ಣನೆಯನ್ನು ಮಾಡಿದ ಬಳಿಕ, ಆತನು ಇದನ್ನು ಗಮನಕ್ಕೆ ತರುತ್ತಾನೆ, "ಆ ಮೇಲೆ ಮೃತ್ಯುವೂ ಪಾತಾಳವೂ ಬೆಂಕಿಯ ಕೆರೆಗೆ ಹಾಕಲ್ಪಟ್ಟವು; ಆ ಬೆಂಕಿಯ ಕೆರೆಯೇ ಎರಡನೆಯ ಮರಣವು. ಯಾವನ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆದದ್ದಾಗಿ ಕಾಣಿಸಲಿಲ್ಲವೋ ಅವನು ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟನು" (ಪ್ರಕಟನೆ 20:14, 15; ನೋಡಿರಿ 21:8). "ಎರಡನೆಯ ಮರಣ" ಎಂದರೆ ದೇವರಿಂದ ನಿತ್ಯವಾಗಿ ಅಗಲಿಸಲ್ಪಟ್ಟು ನರಕದಲ್ಲಿರುವದೇ ಆಗಿರುತ್ತದೆ. ಮರಣವನ್ನು "ಅಗಲಿಕೆ" ಎಂದು ಅರ್ಥನಿರೂಪಿಸಬಹುದು: ಆತ್ಮವು ದೇಹವನ್ನು ಅಗಲಿ ಹೋಗುವದು ದೈಹಿಕ ಮರಣವಾಗಿರುತ್ತದೆ (ಯಾಕೋಬ 2:26). ಮನುಷ್ಯನು ಪಾಪದ ನಿಮಿತ್ತವಾಗಿ ದೇವರಿಂದ ಅಗಲುವಿಕೆಯು ಆತ್ಮೀಕ ಮರಣವಾಗಿರುತ್ತದೆ (ಯೆಶಾಯ 59:1, 2). ಎರಡನೆಯ ಮರಣವೆಂದರೆ ದೇವರಿಂದ ಶಾಶ್ವತವಾಗಿ ಅಗಲಿಸಲ್ಪಡುವಿಕೆಯಾಗಿದೆ (2 ಥೆಸಲೋನಿಕ 1:9).

ಸ್ಮುರ್ನದಲ್ಲಿರುವ ಕ್ರೈಸ್ತರು ತಮ್ಮ ನಂಬಿಕೆಯ ನಿಮಿತ್ತವಾಗಿ ಸಾಯಬೇಕಾದರೂ ಕಳವಳಗೊಳ್ಳಬೇಕಾಗಿರಲಿಲ್ಲ, ಯಾಕೆಂದರೆ ಯೇಸುವು ಅವರನ್ನು ಜೀವಿತರನ್ನಾಗಿ ಎಬ್ಬಿಸಬಲ್ಲನು ಮತ್ತು ಎಬ್ಬಿಸುವನು. ಅವರು ಚಿಂತೆ ಮಾಡಬೇಕಾಗಿದ್ದ ಮರಣವೆಂದರೆ ಅದು ಎರಡನೆಯ ಮರಣವೇ ಆಗಿತ್ತು (ನೋಡಿರಿ ಲೂಕ 12:4, 5). ಅವರು ನಂಬಿಗಸ್ತರಾಗಿ ಉಳಿಯುವದಾಗಿದ್ದಲ್ಲಿ, ಅವರಿಗೆ "ಎರಡನೆಯ ಮರಣದಿಂದ ಕೇಡಾಗುವದೇ ಇಲ್ಲ."

ನಮ್ಮಲ್ಲಿ ಯಾರು ನಮ್ಮ ನಂಬಿಕೆಯ ನಿಮಿತ್ತವಾಗಿ ನಮ್ಮ ಪ್ರಾಣಗಳಿಗೋಸ್ಕರ ಎಂದಿಗೂ ಭಯಪಡುವ ಸನ್ನಿವೇಶವನ್ನೇ ಎದುರಿಸಲಿಲ್ಲವೋ ಅಂಥವರು ಯೇಸುವಿನ ಮಾತುಗಳು ಸ್ಮುರ್ನದಲ್ಲಿ ಯಾವ ಅರ್ಥವನ್ನು ಹೊಂದಿದ್ದವೆಂಬುದನ್ನು ಪೂರ್ಣವಾಗಿ ಶ್ಲಾಘಿಸುವದಕ್ಕೆ ಸಾಧ್ಯವಿಲ್ಲ. ಪ್ರಕಟನೆ ಪುಸ್ತಕವು ಬರೆಯಲ್ಪಟ್ಟ ನಂತರದ ಗಲಭೆಭರಿತ ದಿನಗಳಲ್ಲಿ, ಈ ಮಾತುಗಳು ಬಲದ ಮೂಲವಾಗಿದ್ದವು. ಈ ಪತ್ರಗಳು ಎಷ್ಟೊಂದು ಕಾರ್ಯರೂಪದವುಗಳಾಗಿದ್ದವು (ಮತ್ತು ಆಗಿರುತ್ತವೆ) ಎಂಬುದನ್ನು ಒತ್ತಿ ಹೇಳಬೇಕೆಂದರೆ, ಈ ಕ್ರೈಸ್ತರು ಒಟ್ಟಾರೆಯಾಗಿ ಏನನ್ನು ಅನುಭವಿಸಬೇಕಾಯಿತು ಮತ್ತು ನಿರ್ದಿಷ್ಟವಾಗಿ ಹೇಳುವದಾದರೆ ಅವರ ನಾಯಕರಲ್ಲೊಬ್ಬನಾದ ಪೊಲಿಕಾರ್ಪನು ಏನನ್ನು ಎದುರಿಸಬೇಕಾಯಿತು ಎಂಬುದರ ವಿವರ ಇಲ್ಲಿದೆ:

ಆದಿ ಸಭೆಯ ಇತಿಹಾಸಕಾರನಾದ Eusebiusನು ಸ್ಮುರ್ನದಲ್ಲಿನ ಕ್ರೈಸ್ತರ ವಿಷಯದಲ್ಲಿ ಹೇಗೆ ನಡೆದುಕೊಳ್ಳಲಾಗುತ್ತಿತ್ತು ಎಂಬುದನ್ನು ಬಣ್ಣಿಸುತ್ತಾನೆ:

> . . . ಅವರು ಮಾಂಸಖಂಡಗಳು ಸೀಳಿಕೊಂಡು ಹೋಗುವಂತಹ, ಅವರ ರಕ್ತ ಮತ್ತು ರಕ್ತನಾಡಿಗಳಷ್ಟು ಆಳಕ್ಕೆ ಸಾಗುವ ಕೊರಡೆ ಏಟುಗಳು ಅವರ ಅತ್ಯಂಥ ಒಳಗಿನ ದೇಹ ಭಾಗಗಳು ಈಗ ಗೋಚರವಾಗಿಸುವದನ್ನು ಕಂಡಾಗ ಸುತ್ತಲು ನಿಂತಿರುವವರು ಅತ್ಯಾಶ್ಚರ್ಯಗೊಂಡರು. ಬಳಿಕ ಅವರನ್ನು ಸಮುದ್ರದ ಶಂಕಗಳ ಚಿಪ್ಪಿನ ಮೇಲೆ ಮತ್ತು ನೆಲದಲ್ಲಿ ಈಟಿಗಳನ್ನು ನೆಟ್ಟು ಅವುಗಳ ಮೇಲೆ ಮಲಗಿಸಲಾಗುತ್ತಿತ್ತು, ಮತ್ತು ಎಲ್ಲಾ

ವಿಧವಾದ ದಂಡನೆ ಹಾಗೂ ಚಿತ್ರಹಿಂಸೆಯನ್ನು ದಾಟಿಕೊಂಡು ಬಂದ ಬಳಿಕ, ಕಡೆಯದಾಗಿ ಅವರನ್ನು ಕಾಡು ಮೃಗಗಳಿಗೆ ಆಹಾರವಾಗಿ ಎಸೆಯಲಾಗುತ್ತಿತ್ತು.[20]

ಈ ಸಮಯದಲ್ಲಿ, ವೃದ್ಧನಾಗಿದ್ದ ಪೊಲಿಕಾರ್ಪನನ್ನು ಬಚ್ಚಿಡುವದಕ್ಕೆ ಕ್ರೈಸ್ತರು ಪ್ರಯತ್ನವನ್ನು ಮಾಡಿದರು, ಆದರೆ ಆತನು ಎಲ್ಲಿ ಇರುತ್ತಾನೆಂಬುದನ್ನು ಹೇಳುವಂತೆ ಒಬ್ಬ ಬಾಲಕನನ್ನು ಹೊಡೆಯಲಾಯಿತು. ಅವರು ಪೊಲಿಕಾರ್ಪನನ್ನು ಹುಡುಕುತ್ತಾ ಬಂದಾಗ, ತನ್ನನ್ನು ಹುಡುಕಿ ಬಂದವರಿಗಾಗಿ ಆತನು ಭೋಜನದ ವ್ಯವಸ್ಥೆಯನ್ನು ಮಾಡಿದನು, ಅವರು ಸಂಭ್ರಮದಿಂದ ಊಟವನ್ನು ಮಾಡುತ್ತಿರುವ ವೇಳೆ, ಈತನು ಪ್ರಾರ್ಥನೆ ಮಾಡಿದನು.

ಅವರು ಅಂತಿಮವಾಗಿ ಅವನನ್ನು ಕ್ರೀಡಾಂಗಣದೊಳಗೆ ಕರೆತಂದರು, ಅಲ್ಲಿ ಯೆಹೂದ್ಯರು ಸೇರಿದಂತೆ ರಕ್ತಕ್ಕಾಗಿ ಹಪಹಪಿಸುತ್ತಿದ್ದ ಜನರ ಗುಂಪು ನೆರೆದು ಬಂದಿತ್ತು. ದೇಶಾಧಿಪತಿಯು ಆತನಿಗೆ ಕ್ರಿಸ್ತನನ್ನು ನಿರಾಕರಿಸಿ ಬಿಡು ಬೇಡಿಕೊಳ್ಳುವವನಾಗಿ, "ಕೈಸರನ ಹೆಸರಿನಲ್ಲಿ ಆಣೆಯಿಡು . . . ಮತ್ತು ನಿನ್ನನ್ನು ಬಿಟ್ಟು ಬಿಡುತ್ತೇನೆ. ಕ್ರಿಸ್ತನನ್ನು ನಿಂದಿಸು" ಎಂದು ಹೇಳಿದನು. ಅದಕ್ಕೆ ಪೊಲಿಕಾರ್ಪನು ಹೀಗೆ ಉತ್ತರವನ್ನು ನೀಡಿದನು, "ನಾನು ಎಂಭತ್ತಾರು ವರ್ಷಗಳಿಂದ ಆತನನ್ನು ಸೇವಿಸಿದ್ದೇನೆ, ಮತ್ತು ಆತನು ನನಗೆ ಎಂದಿಗೂ ತಪ್ಪಾದದ್ದನ್ನು ಮಾಡಲಿಲ್ಲ; ಮತ್ತು ಈಗ ನನ್ನನ್ನು ರಕ್ಷಿಸಿರುವ ಅರಸನನ್ನು ನಾನು ಹೇಗೆ ದೂಷಿಸುವದಕ್ಕೆ ಸಾಧ್ಯ?" ದೇಶಾಧಿಪತಿಯು ಆತನನ್ನು ಕಾಡು ಮೃಗಗಳು ಹಾಗೂ ಬೆಂಕಿಯ ಬೆದರಿಕೆಗಳನ್ನೊಡ್ಡಿ ಹೆದರಿಸುವದಕ್ಕೆ ಪ್ರಯತ್ನಿಸಿದಾಗ, ವೃದ್ಧನು ಹೀಗೆ ಪ್ರತ್ಯುತ್ತರ ನೀಡಿದನು, "ನೀನು ಕ್ಷಣ ಮಾತ್ರ ಉರಿಯುವ ಬೆಂಕಿಯ ಬೆದರಿಕೆಯನ್ನು ನೀಡುತ್ತಿರುವಿ, ಮತ್ತು ದುಷ್ಟರಿಗೆ ನಿತ್ಯವಾದ ಬೆಂಕಿಯ ಶಿಕ್ಷೆಯು ಕಾಯ್ದಿರಿಸಲ್ಪಟ್ಟಿದೆ. ಆದರೆ ನೀನೇಕೆ ವಿಳಂಬ ಮಾಡುತ್ತೀರುವಿ? ನಿನಗೆ ಇಷ್ಟವಿರುವದನ್ನು ಮಾಡು."

ಬೊಬ್ಬೆಯಿಡುತ್ತಿದ್ದ ಜನಸಮೂಹವು ಯೆಹೂದ್ಯರ ಮುಂದಾಳತ್ವದಲ್ಲಿ ವೃದ್ಧ ಕ್ರೈಸ್ತನನ್ನು ಸುಡುವದಕ್ಕೆ ಕಟ್ಟಿಗೆಗಳನ್ನು ಹುಡುಕುವದಕ್ಕಾಗಿ ಚದುರಿ ಹೋದರು. ಸುಡುವದಕ್ಕೆ ಚಿತೆಯು ಸಿದ್ಧಗೊಂಡಾಗ, ಅವರು ಪೊಲಿಕಾರ್ಪನನ್ನು ಕಂಬಕ್ಕೆ ಜಡಿಯುವದಕ್ಕಾರಂಭಿಸಿದರು, ಆದರೆ ಆತನು ಹೀಗೆ ಹೇಳಿದನು, ". . . ಬೆಂಕಿಯನ್ನು ಸಹಿಸಿಕೊಳ್ಳಲು ನನಗೆ ಶಕ್ತಿಯನ್ನು ಕೊಡುವಾತನು, ಈ ಚಿತೆಯ ಮೇಲೆ ಕದಲದಂತಿರುವದಕ್ಕೆ ಸಹ ನನಗೆ . . . ಶಕ್ತಿಯನ್ನು ಅನುಗ್ರಹಿಸುವನು." ಆತನು ತನ್ನ ಹಿಂದಕ್ಕೆ ಕೈಗಳನ್ನು ಕಂಬಕ್ಕೆ ಸುತ್ತಿ ಗಟ್ಟಿಯಾಗಿ ಹಿಡಿದುಕೊಂಡನು, ಮತ್ತು ಪ್ರಾರ್ಥಿಸಿದನು. "ಆಮೆನ್" ಎಂದು ಹೇಳಿದ ಬಳಿಕ, ಮರಣದಂಡನೆ ವಿಧಿಸುವವರು ಬೆಂಕಿಯನ್ನು ಹೊತ್ತಿಸಿದರು. ಪೊಲಿಕಾರ್ಪನು ತನಗೆ "ಎರಡನೆಯ ಮರಣದಿಂದ ಕೇಡಾಗುವದೇ ಇಲ್ಲ" ಎಂಬ ಭರವಸದೊಂದಿಗೆ ಮರಣ ಹೊಂದಿದನು.[21]

## ಪೆರ್ಗಮ: ಪಾಪದ ಪಟ್ಟಣದಲ್ಲಿದ್ದ ಸಭೆ (2:12-17)

**[12]ಪೆರ್ಗಮದಲ್ಲಿರುವ ಸಭೆಯ ದೂತನಿಗೆ ಬರೆ - [13]ಹದವಾದ ಇಬ್ಬಾಯಿಕತ್ತಿಯನ್ನು ಹಿಡಿದಾತನು ಹೇಳುವದೇನೆಂದರೆ - ನೀನು ವಾಸಮಾಡುವ ಸ್ಥಳವನ್ನು ಬಲ್ಲೆನು; ಅದು ಸೈತಾನನ ಸಿಂಹಾಸನವಿರುವ ಸ್ಥಳವಾಗಿದೆ. ನೀನು ನನ್ನ ಹೆಸರನ್ನು ಬಿಡದೇ ಹಿಡಿದುಕೊಂಡಿದ್ದೀ; ನೀನು ಇರುವ ಸೈತಾನನ ನಿವಾಸದಲ್ಲಿ ನನಗೆ ನಂಬಿಗಸ್ತನೂ ಸಾಕ್ಷಿಯೂ ಆದ ಅಂತಿಪನು ಕೊಲ್ಲಲ್ಪಟ್ಟ ದಿನಗಳಲ್ಲಿಯಾದರೂ ನನ್ನಲ್ಲಿಟ್ಟಿರುವ ನಂಬಿಕೆಯನ್ನು ನೀನು ಮರೆಮಾಡಲಿಲ್ಲ. [14]ಆದರೂ ಕೆಲವು ವಿಷಯಗಳಲ್ಲಿ ನಿನ್ನ ಮೇಲೆ ತಪ್ಪು ಹೊರಿಸಬೇಕಾಗುತ್ತದೆ; ವಿಗ್ರಹಕ್ಕೆ ನೈವೇದ್ಯಮಾಡಿದ ಪದಾರ್ಥಗಳನ್ನು ತಿನ್ನುವದರಲ್ಲಿಯೂ ಜಾರತ್ವ**

**ಮಾಡುವದರಲ್ಲಿಯೂ ಇಸ್ರಾಯೇಲ್ಯರು ಮುಗ್ಗರಿಸಿ ಬೀಳಬೇಕೆಂದು ಬಿಳಾಮನು ಬಾಲಾಕನಿಗೆ ಹೇಳಿದ ದುರ್ಬೋಧನೆಯನ್ನು ಅವಲಂಬಿಸಿರುವವರು ನಿನ್ನಲ್ಲಿದ್ದಾರೆ. [15]ಹಾಗೆಯೇ ನಿಕೊಲಾಯಿತರ ಬೋಧನೆಯನ್ನು ಅವಲಂಬಿಸುವವರೂ ನಿಮ್ಮಲ್ಲಿದ್ದಾರೆ. [16]ಆದದರಿಂದ ದೇವರ ಕಡೆಗೆ ತಿರುಗಿಕೋ, ತಿರುಗಿಕೊಳ್ಳದಿದ್ದರೆ ನಾನು ಬೇಗನೆ ಬಂದು ನಿನ್ನ ಬಳಿಗೆ ಬಂದು ನನ್ನ ಬಾಯಿಕತ್ತಿಯಿಂದ ಅವರ ಮೇಲೆ ಯುದ್ಧಮಾಡುವೆನು. [17]ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ. ಯಾವನು ಜಯಹೊಂದುತ್ತಾನೋ ಅವನಿಗೆ ಬಚ್ಚಿಟ್ಟಿರುವ ಮನ್ನವೆಂಬ ಆಹಾರವನ್ನು ಕೊಡುವೆನು; ಇದಲ್ಲದೆ ಅವನಿಗೆ ಬಿಳೀ ಕಲ್ಲನ್ನೂ ಆ ಕಲ್ಲಿನ ಮೇಲೆ ಕೆತ್ತಿದ ಹೊಸ ಹೆಸರನ್ನೂ ಕೊಡುವೆನು. ಆ ಹೆಸರನ್ನು ಹೊಂದಿದವನಿಗೇ ಹೊರತು ಅದು ಇನ್ನಾರಿಗೂ ತಿಳಿಯದು.**

ಮೂರನೆಯ ಪಟ್ಟಣವಾಗಿ ಪೆರ್ಗಮದಲ್ಲಿನ ಕ್ರೈಸ್ತರನ್ನುದ್ದೇಶಿಸಿ ಯೇಸುವು ಮಾತಾಡಿದನು. ಏಳು ಸಭೆಗಳಿಗೆ ಬರೆದ ಪತ್ರಗಳು ಭೌಗೋಳಿಕ ಕ್ರಮಾನುಸಾರದಲ್ಲಿ ವ್ಯವಸ್ಥೆಗೊಳಿಸಲ್ಪಟ್ಟಿರುತ್ತವೆ. ಈ ಸಂಗ್ರಹವು ಎರಡು ಕರಾವಳಿ ಪಟ್ಟಣಗಳೊಂದಿಗೆ ಆರಂಭಗೊಂಡಿತು: ದಕ್ಷಿಣದ ಮೂಲೆಯಲ್ಲಿರುವ ಎಫೆಸ, ಮತ್ತು ಬಳಿಕ ಉತ್ತರದಲ್ಲಿರುವ ಸ್ಮುರ್ನ. ಕೆಲವು ಸಾರಿ ಆಸ್ಯಸೀಮೆಯ ರೋಮನ್ ಪ್ರಾಂತ್ಯದ ರಾಜಧಾನಿಯಾಗಿ ಆರಿಸಿಕೊಳ್ಳಲ್ಪಟ್ಟಿದ್ದ ಪೆರ್ಗಮವು ಸ್ಮುರ್ನದಿಂದ ಉತ್ತರಕ್ಕೆ ಇನ್ನು ಅರವತ್ತು ಅಥವಾ ಅಧಿಕ ಮೈಲುಗಳಷ್ಟು ದೂರದಲ್ಲಿರುತ್ತದೆ. ಎಫೆಸ ಮತ್ತು ಸ್ಮುರ್ನಗಳಂತಲ್ಲದೆ, ಪೆರ್ಗಮವು ಒಂದು ಕರಾವಳಿ ಪ್ರದೇಶದಲ್ಲಿದ್ದ ಪಟ್ಟಣವಾಗಿರಲಿಲ್ಲ, ಆದರೆ ಹದಿನೈದು ಮೈಲುಗಳಷ್ಟು ಒಳನಾಡಿನಲ್ಲಿತ್ತು.

ಪೆರ್ಗಮವು ಒಂದು ಪರ್ವತದ ಮೇಲೆ ಕಟ್ಟಲ್ಪಟ್ಟಿತ್ತು ಮತ್ತು ಬಳಿಕ ಕೆಳಗಿನ ಸಮಪ್ರದೇಶಗಳಿಗೆ ಹರಡಿಕೊಂಡಿತ್ತು. ಇಂದು, ಆಧುನಿಕ ನಗರವಾದ Bergamaವು ಪ್ರಾಚೀನ ನಗರದ ಕೆಳಗಿನ ಭಾಗವನ್ನು ಆವರಿಸಿಕೊಂಡಿರುತ್ತದೆ. ಪೆರ್ಗಮವು ಒಂದು "ನಗರದುರ್ಗ" ಅಥವಾ "ಉನ್ನತ ನಗರ"ವನ್ನು ಹೊಂದಿತ್ತು. ನಗರದುರ್ಗವು ಪರ್ವತದ ಮೇಲಿದ್ದ ಮೂಲ ಪಟ್ಟಣದ ಸ್ಥಳವಾಗಿರುತ್ತದೆ. ಪೆರ್ಗಮದ ದೈಹಿಕ ಅವಶೇಷಗಳಲ್ಲಿ Bergamaದಲ್ಲಿರುವ ಒಂದು ಪುರಾತತ್ವದ ಸ್ಥಳ ಮತ್ತು ಪಟ್ಟಣದ ದಕ್ಷಿಣ ಭಾಗದಲ್ಲಿರುವ ಒಂದು ವೈದ್ಯಕೀಯ ಸಮುಚ್ಛಯ ಇವುಗಳು ಸೇರಿರುತ್ತವೆ.

ಪೆರ್ಗಮ ಪಟ್ಟಣದಲ್ಲಿ ಕರ್ತನ ಸಭೆಯು ಯಾವಾಗ ಸ್ಥಾಪಿಸಲ್ಪಟ್ಟಿತೆಂಬುದು ತಿಳಿದು ಬಂದಿರುವದಿಲ್ಲ. ಆಸ್ಯ ಸೀಮೆಯಲ್ಲಿದ್ದ ಇತರ ಸಭೆಗಳ ಹಾಗೆಯೇ, ಅದು ಬಹುಶಃ ಪೌಲನು ಎಫೆಸದಲ್ಲಿ ನೆಲೆಸಿದ್ದ ಮೂರು ವರ್ಷಗಳ ವೇಳೆಯಲ್ಲಿ ಸ್ಥಾಪಿಸಲ್ಪಟ್ಟಿರಬಹುದು (ಅಪೊಸ್ತಲರ ಕೃತ್ಯಗಳು 19:10). ಹೇಗೂ, ಸಭೆಯು ವಿಶೇಷವಾದ ಸಮಸ್ಯೆಗಳನ್ನು ಎದುರಿಸಿತು ಎಂಬುದಂತೂ ನಮಗೆ ತಿಳಿದ ವಿಚಾರವಾಗಿರುತ್ತದೆ. ಕರ್ತನು ಪೆರ್ಗಮವನ್ನು "ಸೈತಾನನು ಸಿಂಹಾಸನವಿರುವ" ಮತ್ತು "ಸೈತಾನನ ನಿವಾಸ" ಎಂದು ಕರೆದನು (2:13). ಈ ಪಟ್ಟಣಕ್ಕೆ ಕ್ರಿಸ್ತನ ಅಗತ್ಯತೆಯು ಅತ್ಯಧಿಕವಾಗಿತ್ತು.

**ವಚನ 12.** ಈ ಸಭೆಗೆ ಬರೆದ ಪತ್ರವು ಈ ಮಾತುಗಳ ಮೂಲಕ ಪರಿಚಯಿಸಲ್ಪಡುತ್ತದೆ: **ಪೆರ್ಗಮದಲ್ಲಿರುವ ಸಭೆಯ ದೂತನಿಗೆ ಬರೆ** (1:16ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). **ಪೆರ್ಗಮ** ಪಟ್ಟಣವು ಪೆರ್ಗಮಸ್, ಪೆರ್ಗಮೊನ್, ಮತ್ತು ಪರ್ಗಮೊಸ್ ಎಂದು ಸಹ ಪರಿಚಿತವಾಗಿತ್ತು.

ಆ ಭಯಗೊಳಿಸುವ ಸ್ಥಳದಲ್ಲಿರುವ ಕ್ರೈಸ್ತರಿಗೆ ಕರ್ತನ ಶಕ್ತಿಯ ಕುರಿತಾಗಿ ಭರವಸವು

ಕೊಡಲ್ಪಡುವದು ಅಗತ್ಯವಿತ್ತು. ಆದ್ದರಿಂದ ಯೇಸು ತನ್ನನ್ನು **ಹದವಾದ ಇಬ್ಬಾಯಿಕತ್ತಿಯನ್ನು ಹಿಡಿದಾತನು** ಎಂದು ಬಣ್ಣಿಸಿಕೊಳ್ಳುತ್ತಾನೆ. ದೇವರ ವಾಕ್ಯವು ಒಂದು ಕತ್ತಿಯೆಂದು ಕರೆಯಲ್ಪಟ್ಟಿದೆಯಾದ್ದರಿಂದ (ಎಫೆಸ 6:17; ಇಬ್ರಿಯ 4:12), ಮತ್ತು ಈ ಕತ್ತಿಯು ಯೇಸುವಿನ ಬಾಯಿಂದ ಬಂದಿತಾದ್ದರಿಂದ (1:16; 2:16), ಇದು ದೇವರ ವಾಕ್ಯವನ್ನು ಸೂಚಿಸುವದಾಗಿದೆ ಎಂಬುದನ್ನು ಬಹಳಷ್ಟು ಮಂದಿ ಒಪ್ಪಿಕೊಳ್ಳುತ್ತಾರೆ. ಹೇಗೂ, ನಾವು ಅರ್ಥಮಾಡಿಕೊಳ್ಳತಕ್ಕದ್ದೇನೆಂದರೆ, ಈ ವಾಕ್ಯವು ಸುವಾರ್ತೆಯಲ್ಲ, ಆದರೆ ತನ್ನ ವೈರಿಯ ಮೇಲೆ ಕರ್ತನ ನ್ಯಾಯತೀರ್ಪು ಆಗಿರುತ್ತದೆ ಎಂಬದೆ (ಯೆಶಾಯ 49:2; ಪ್ರಕಟನೆ 19:15, 21). ಒಂದು **ಕತ್ತಿಯನ್ನು** ರಚನಾತ್ಮಕವಾಗಿ ಬಳಸಬಹುದು ಅಥವಾ ನಾಶಗೊಳಿಸುವದಕ್ಕಾಗಿ ಬಳಸಬಹುದು, ಮತ್ತು ದೇವರ ವಾಕ್ಯದ ವಿಷಯದಲ್ಲಿ ಸಹ ಅದು ಅಷ್ಟೇ ಸತ್ಯವಾಗಿರುತ್ತದೆ. ಒಬ್ಬ ನುರಿತ ಶಸ್ತ್ರಚಿಕಿತ್ಸಕನ ಕೈಯಲ್ಲಿರುವ ಕಿರುಚೂರಿಯ ಹಾಗೆಯೇ, ವಾಕ್ಯದ ಕತ್ತಿಯು ಹೃದಯವನ್ನು ಗುಣಪಡಿಸುವದಕ್ಕೋಸ್ಕರ ಅದನ್ನು ಬಯಲುಗೊಳಿಸಬಲ್ಲದ್ದಾಗಿದೆ (ಅಪೊಸ್ತಲರ ಕೃತ್ಯಗಳು 2:37; ಇಬ್ರಿಯ 4:12). ಬೇರೆ ಪರಿಸ್ಥಿತಿಗಳಲ್ಲಿ, ಅದು ನ್ಯಾಯವನ್ನು ಮಾಡುವದಕ್ಕೆ ದೇವರ ಸಾಧನವನ್ನಾಗಿ ಬಳಸಲ್ಪಡಬಹುದಾಗಿದೆ (ಯೋಹಾನ 12:48). ಪ್ರಕಟನೆ 2ನೇ ಅಧ್ಯಾಯದಲ್ಲಿ ಯೇಸು ಈ ಎರಡನೆಯ ವಿಧವಾದ ಬಳಕೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದ್ದನು (ವ. 16).

ರೋಮಿನ ಶಕ್ತಿಯು ತನ್ನ ಶಕ್ತಿಗಿಂತಲೂ ದೊಡ್ಡದೇನಲ್ಲ ಎಂಬುದನ್ನು ಪೆರ್ಗಮದ ಕ್ರೈಸ್ತರು ತಿಳಿದುಕೊಳ್ಳಬೇಕೆಂಬುದು ಯೇಸುವಿನ ಬಯಕೆಯಾಗಿತ್ತು. ಆತನ ಅಪರಾಜಿತ ಕತ್ತಿಗೆ ಹೋಲಿಸಿದರೆ, ರೋಮನ್ ಸಾಮ್ರಾಜ್ಯದ ಕತ್ತಿಗಳು ಮಕ್ಕಳಿಂದ ರಚಿಸಲ್ಪಟ್ಟಿರುವ ಕಟ್ಟಿಗೆ ಒಡ್ಡೊಡ್ಡಾದ ಕತ್ತಿಗಳಂತೆ ಇದ್ದವು. ಆದದರಿಂದ, ಕ್ರೈಸ್ತರು ರೋಮನ್ ಆಯುಧಗಳು ತಮ್ಮನ್ನು ಹೆದರಿಸುವಂತೆ ಅವಕಾಶವನ್ನು ಕೊಡಬಾರದಿತ್ತು. ಅವರು ಕೇವಲ ಕರ್ತನ ನ್ಯಾಯತೀರ್ಪಿನ ಕತ್ತಿಗೆ ಮಾತ್ರವೇ ಹೆದರಬೇಕಾಗಿತ್ತು (ವ. 16).

**ವಚನ 13.** ಪೆರ್ಗಮಕ್ಕೆ ಬರೆದ ಪತ್ರದ ಮುಖ್ಯ ಭಾಗವು ಯೇಸುವು ಸಭೆಗೆ ಶ್ಲಾಘನೆಯನ್ನು ನೀಡುವ ಮೂಲಕ ಆರಂಭಗೊಳ್ಳುತ್ತದೆ. ಅವರಿಗಿರುವ ಭಯ ಹುಟ್ಟಿಸುವ ಸವಾಲಿನ ಬಗ್ಗೆ ಬಲ್ಲವನಾಗಿದ್ದಾನೆಂಬ ಭರವಸವನ್ನು ನೀಡುತ್ತಾನೆ: **ನೀನು ವಾಸಮಾಡುವ ಸ್ಥಳವನ್ನು ಬಲ್ಲೆನು; ಅದು ಸೈತಾನನ ಸಿಂಹಾಸನವಿರುವ ಸ್ಥಳವಾಗಿದೆ . . . ನೀನು ಇರುವ ಸೈತಾನನ ನಿವಾಸ. ನಿವಾಸ** ಎಂಬುದನ್ನು ಅನುವಾದಿಸಿರುವ κατοικέω (*katoikeō*) ಎಂಬ ಗ್ರೀಕ್ ಪದವು "ಶಾಶ್ವತವಾದ ವಾಸಸ್ಥಳ" ಎಂದಾಗಿರುತ್ತದೆ.

ಸೈತಾನನ **ಸಿಂಹಾಸನ** ಎಂಬುದಕ್ಕೆ ಬದಲಾಗಿ KJVಯಲ್ಲಿ "ಪೀಠ" ಎಂದಿರುತ್ತದೆ. ಹೇಗೂ, "ಪೀಠ" ಎಂಬುದಕ್ಕಿರುವ ಸಾಮಾನ್ಯ ಗ್ರೀಕ್ ಪದವು ಇಲ್ಲಿ ಬಳಸಲ್ಪಟ್ಟಿರುವದಿಲ್ಲ. ಬದಲಾಗಿ, ಗ್ರೀಕ್ ವಾಕ್ಯದಲ್ಲಿ θρόνος (*thronos*) ಎಂಬ ಪದವು ಇರುತ್ತದೆ, ಈ ಪದದಿಂದಲೇ ಆಂಗ್ಲದ "throne" (ಸಿಂಹಾಸನ) ಎಂಬ ಪದವು ಬಳದಿರುತ್ತದೆ. 4ನೇ ಅಧ್ಯಾಯದಲ್ಲಿ ದೇವರ ಸಿಂಹಾಸನವನ್ನು ಸೂಚಿಸುವದಕ್ಕೆ ಇದೇ ಪದವು ಬಳಸಲ್ಪಟ್ಟಿದೆ. "ಸಿಂಹಾಸನ" ಎಂಬ ಪದವು "ಅಧಿಕಾರದ ಪೀಠ" ವನ್ನು ಸೂಚಿಸುತ್ತದೆ. ಪ್ರಕಟನೆ ಪುಸ್ತಕವು ಅನೇಕ ವಿರುದ್ಧ ಹೋಲಿಕೆಗಳನ್ನೊಳಗೊಂಡಿದೆ. 4 ಮತ್ತು 5 ಅಧ್ಯಾಯಗಳಲ್ಲಿ, ನಾವು ದೇವರ ಸಿಂಹಾಸನವನ್ನು ಅದರ ಸಕಲ ಮಹಿಮೆಯಲ್ಲಿ ಕಾಣಲಿದ್ದೇವೆ. ಅದಕ್ಕೆ ಮುಂದೆ, 2ನೇ ಅಧ್ಯಾಯದಲ್ಲಿ, ಸೈತಾನನು ಸಹ ತನ್ನ ಸಿಂಹಾಸನಗಳನ್ನು - ಆತನ ಶಕ್ತಿ ಮತ್ತು ಪ್ರಭಾವದ ಕೇಂದ್ರಗಳನ್ನು - ಹೊಂದಿರುತ್ತಾನೆಂಬುದನ್ನು ಕಲಿಯುತ್ತೇವೆ. ಪೆರ್ಗಮವು ಅಂತಹ ಒಂದು

ಕೇಂದ್ರವಾಗಿತ್ತು. ಈ ಪಟ್ಟಣವು ಸೈತಾನನ ಧ್ಯೇಯಗಳು ಪ್ರಮುಖ ಸ್ಥಾನವನ್ನು ತೆಗೆದುಕೊಂಡಿದ್ದ ಸ್ಥಳವಾಗಿತ್ತು.

ಯೇಸುವಿನ ಸಂದೇಶವನ್ನು ಗ್ರಹಿಸಿಕೊಳ್ಳಬೇಕೆಂಬುದಕ್ಕಾಗಿ ಸೈತಾನನ ಸಿಂಹಾಸನವೆಂದು ಯಾವದೇ ನಿರ್ದಿಷ್ಟತೆಯನ್ನು ಗುರುತಿಸುವ ಅವಶ್ಯಕತೆಯಿರುವದಿಲ್ಲ, ಆದರೆ ಪೆರ್ಗಮದಲ್ಲಿನ ಕ್ರೈಸ್ತರು ಎದುರಿಸಿದ ಅಡೆತಡೆಗಳನ್ನು ವಿಮರ್ಶಿಸುವದರಿಂದ ಪ್ರಯೋಜನವನ್ನು ಪಡೆಯಬಹುದಾಗಿದೆ:

*ಸೈತಾನನು ರಾಜಕೀಯವಾಗಿ ಸಿಂಹಾಸನದಲ್ಲಿದ್ದನು.* ಪೆರ್ಗಮವು ರೋಮ್ ಜೊತೆಯಲ್ಲಿ ಬಲವಾದ ಬಾಂಧವ್ಯಗಳನ್ನು ಹೊಂದಿತ್ತು. ಇದು ಸಾಮ್ರಾಜ್ಯದ ದೇವಾಲಯವೊಂದನ್ನು ಕಟ್ಟುವದಕ್ಕೆ ಹಕ್ಕನ್ನು ಕೊಡಲ್ಪಟ್ಟ ಪ್ರಥಮ ನಗರವಾಗಿತ್ತು. ಇಂದು, ನಾವು ಸಮತಟ್ಟಾದ ಮೈದಾನದಲ್ಲಿ ನಿಂತು ನಗರದುರ್ಗವನ್ನು ನೋಡುವಾಗ, ಅತ್ಯಂಥ ಪ್ರಬಲವಾಗಿ ಎದ್ದು ಕಾಣುವ ಆಕರ್ಷಣೆಯೆಂದರೆ Trajan ಚಕ್ರವರ್ತಿಗೆ ಸಮರ್ಪಿಸಲ್ಪಟ್ಟಿದ್ದ ಬಿಳಿ ಅಮೃತಶಿಲೆಯಿಂದ ನಿರ್ಮಿಸಲ್ಪಟ್ಟ ಸ್ಮಾರಕವೇ ಆಗಿರುತ್ತದೆ. ಪೆರ್ಗಮವು Thrice Neokoros ಎಂದು ಕರೆಯಲ್ಪಡುವದಕ್ಕೆ ಹೆಮ್ಮೆ ಪಡುತ್ತಿತ್ತು, ಅದು ಚಕ್ರವರ್ತಿಗಳನ್ನು ಸನ್ಮಾನಿಸುವದಕ್ಕಾಗಿ ಮೂರು ದೇವಾಲಯಗಳನ್ನು ಕಟ್ಟುವ ಸದವಕಾಶವು ಕೊಡಲ್ಪಟ್ಟಿದ್ದನ್ನು ಸೂಚಿಸುವ ಒಂದು ಬಿರುದು ಆಗಿರುತ್ತದೆ. ಅಪೊಸ್ತಲರ ಕೃತ್ಯಗಳು 19:35ರಲ್ಲಿ, νεωκόρος (*neōkoros*) ಎಂಬುದು "ದೇವಸ್ಥಾನದ ಪಾಲಕ" ಎಂದು ಅನುವಾದಿಸಲ್ಪಟ್ಟಿದೆ.

ಪೆರ್ಗಮ ಪೂರ್ವ ದಿಕ್ಕಿನಲ್ಲಿ ರೋಮನ್ನರ ಭದ್ರಕೋಟೆಯಾಗಿತ್ತು. ಕೆಲವು ಬರಹಗಾರರ ಪ್ರಕಾರವಾಗಿ, ಇದು ಆಸ್ಯಸೀಮೆಯಲ್ಲಿ ರೋಮನ್ ಪ್ರಾಂತೀಯ ಸರ್ಕಾರದ ಕೇಂದ್ರಸ್ಥಳವಾಗಿತ್ತು ಮತ್ತು ಚಕ್ರವರ್ತಿ ಆರಾಧನೆಯನ್ನು ಜಾರಿಗೆ ತರುವದಕ್ಕೆ ಜವಾಬ್ದಾರವಾಗಿತ್ತು. ಚಕ್ರವರ್ತಿಯ ಒಡೆಯತ್ವವನ್ನು ಒಪ್ಪಿಕೊಳ್ಳುವಂತೆ ಅದರ ಪ್ರಜೆಗಳ ಮೇಲೆ ನಿರಂತರವಾದ ಒತ್ತಡವನ್ನು ಹಾಕುವದಕ್ಕೆ ಈ ನಾಗರೀಕ ಹೆಮ್ಮೆಯೊಂದೆ ಸಾಕಾಗಿತ್ತು. ಬಹುಪಾಲು ಪಟ್ಟಣಗಳಲ್ಲಿ, ಪ್ರಜೆಗಳು ವರ್ಷಕ್ಕೆ ಒಂದಾವರ್ತಿ ಮಾತ್ರವೇ ಚಕ್ರವರ್ತಿಗೆ ತಮ್ಮ ನಿಷ್ಠೆಯನ್ನು ಪ್ರತಿಜ್ಞೆಮಾಡಿ ಹೇಳಬೇಕಿತ್ತು; ಪೆರ್ಗಮದಲ್ಲಿ ಆ ಒತ್ತಡವು ನಿರಂತರವಾಗಿದ್ದಿರಬಹುದಾಗಿದೆ. ಸ್ಮುರ್ನದಲ್ಲಿನ ಸಭೆಗೆ ಬರೆದ ಪತ್ರದಲ್ಲಿ, ಹಿಂಸೆಯು ಯೆಹೂದ್ಯರಿಂದ ಆರಂಭಗೊಳಿಸಲ್ಪಟ್ಟಿತ್ತು (ವಚನಗಳು 8, 9); ಹೇಗೂ, ಪೆರ್ಗಮದಲ್ಲಿ ಹಿಂಸೆಯ ಬೆದರಿಕೆಯನ್ನು ರೋಮನ್ ಅಧಿಕಾರಿಗಳು ಕೊಟ್ಟಿರುತ್ತಿದ್ದರು.

*ಸೈತಾನನು ಧಾರ್ಮಿಕವಾಗಿ ಸಿಂಹಾಸನದಲ್ಲಿದ್ದನು.* ಚಕ್ರವರ್ತಿಗಳಿಗೆ ಸಮರ್ಪಿತವಾಗಿದ್ದ ದೇವಾಲಯಗಳ ಹೊರತಾಗಿ, ಪೆರ್ಗಮವು ಇತರ ಧಾರ್ಮಿಕ ಕಟ್ಟಡಗಳಿಂದ ತುಂಬಿ ಹೋಗಿತ್ತು. ಆ ಪ್ರಾಂತ್ಯದಲ್ಲಿದ್ದ ಒಂದು ದೇವಾಲಯವು ಕೃಷಿಯ ದೇವತೆಯಾಗಿದ್ದ Demeterಳಿಗೆ (ದೆಮೆಟೆರ) ಸಮರ್ಪಿಸಲ್ಪಟ್ಟಿತ್ತು. ಆ ದೇವಾಲಯದ ಅವಶೇಷಗಳ ಬಳಿಯಲ್ಲಿ ಪ್ರಾಕ್ತನ ಶಾಸ್ತ್ರಜ್ಞರು "ತಿಳಿಯದ ದೇವರು" ಗೆ ಸಮರ್ಪಿತವಾಗಿದ್ದ ಒಂದು ಯಜ್ಞವೇದಿಯನ್ನು ಕಂಡುಕೊಂಡಿರುತ್ತಾರೆ, ಅದು ಅಪೊಸ್ತಲರ ಕೃತ್ಯಗಳು 17:23ರಲ್ಲಿ ಪ್ರಸ್ತಾಪಿಸಲಾಗಿರುವ ಲೇಖನದ ರೀತಿಯಲ್ಲಿಯೇ ಇರುತ್ತದೆ.

ನಗರದುರ್ಗದ ಒಂದು ವಿಶಿಷ್ಟ ಲಕ್ಷಣವೆಂದರೆ Zeus (ದೌಸ್ಯನ) ಯಜ್ಞವೇದಿ, ಅದನ್ನು ಕೆಲವು ಲೇಖಕರು ಪ್ರಾಚೀನ ಜಗತ್ತಿನ ಏಳು ಅದ್ಭುತಗಳಲ್ಲೊಂದು ಎಂದು ಪರಿಗಣಿಸುತ್ತಾರೆ. ರೋಮನ್ನರಿಂದ ಜೂಪಿಟರ್ ಎಂದು ಕರೆಯಲ್ಪಡುವ Zeusನು ದೇವರುಗಳ ಮುಖ್ಯಸ್ಥನು ಎಂದು ಗ್ರೀಕ್ ಹಾಗೂ ರೋಮನ್ನರಿಂದ ನಂಬಲಾಗುತ್ತಿತ್ತು. ಒಂದು ಮಹಾ ಜಯದ ನಂತರ,

ಪೆರ್ಗಮದ ರಾಜನು Zeusನಿಗಾಗಿ ತನ್ನ ಪ್ರಶಂಸೆಯನ್ನು ತೋರಿಸುವದಕ್ಕಾಗಿ ಒಂದು ಬೃಹತ್ ಯಜ್ಞವೇದಿಯನ್ನು ನಿರ್ಮಿಸುವದಕ್ಕೆ ಆದೇಶಿಸಿದ್ದನು. ಪೂರ್ಣಗೊಳಿಸಲ್ಪಟ್ಟ ಯಜ್ಞವೇದಿಯು 120 ಅಡಿಗಳಷ್ಟು ಉದ್ದ, 112 ಅಡಿಗಳಷ್ಟು ಅಗಲ, ಮತ್ತು 20 ಅಡಿಗಳಷ್ಟು ಎತ್ತರ ಇತ್ತು. ಅದರ ಬದಿಗಳಲ್ಲಿ ವೈರಿಗಳ ಮೇಲೆ ಗ್ರೀಕ್ ದೇವರುಗಳು ಸಾಧಿಸಿದ ಜಯವನ್ನು ಚಿತ್ರಿಸುವಂತಹ ಅಲಂಕಾರ ಪಟ್ಟಿಯು ಇತ್ತು. ಈ ಕೆತ್ತಲ್ಪಟ್ಟ ಆಕೃತಿಯು ಚಿತ್ರಕಲೆಯ ಮೇರುಕೃತಿ ಎಂದು ಪರಿಗಣಿಸಲ್ಪಟ್ಟಿತ್ತು. ಇಂದು, ನಗರದುರ್ಗದಲ್ಲಿ ಕೇವಲ ಅಸ್ತಿವಾರ ಮಾತ್ರವೇ ಉಳಿದಿರುತ್ತದೆ. ಆ ಅಸ್ತಿವಾರವೇ ಬರ್ಲಿನ್ ನಗರದಲ್ಲಿರುವ ಒಂದು ವಸ್ತುಸಂಗ್ರಹಾಲಯದಲ್ಲಿ ಮರುನಿರ್ಮಾಣ ಮಾಡಲ್ಪಟ್ಟಿರುತ್ತದೆ. ಇಂದು, ಆ ಅಸ್ತಿವಾರದ ಮಧ್ಯಭಾಗದಲ್ಲಿ ಬೆಳೆಯುತ್ತಿರುವ ಒಂದು ಬೃಹತ್ ಮರವನ್ನು ಕೆಳಗಿನ ಮೈದಾನದಲ್ಲಿ ನಿಂತು ಸ್ಪಷ್ಟವಾಗಿ ಕಾಣಬಹುದಾಗಿದೆ. ಅದು ಅಲ್ಲಿರುವದು ಪ್ರಥಮ ಶತಮಾನದಲ್ಲಿ ಯಜ್ಞವೇದಿಯು ಹೇಗೆ ಕಾಣಿಸುತ್ತಿತ್ತದೆಂಬುದನ್ನು ಕಲ್ಪಿಸಿಕೊಳ್ಳಲು ಪ್ರವಾಸಿಗಳಿಗೆ ಸಹಾಯಕವಾಗುತ್ತದೆ. ಅದು ಅನೇಕ ಮೈಲುಗಳಷ್ಟು ದೂರದ ತನಕ ಕಾಣಿಸಬಹುದಾಗಿದೆ.

ಅನ್ಯಧರ್ಮಿಯ ಆರಾಧನೆಯ ಇನ್ನೊಂದು ಮನಸೆಳೆಯುವ ಉದಾಹರಣೆಯು ಆಧುನಿಕ ಬೆರ್ಗಮಾ ಪಟ್ಟಣದ ಹೃದಯಭಾಗದಲ್ಲಿ ಕಾಣುವದಕ್ಕೆ ಸಿಕ್ಕುವದಾಗಿದೆ. ಒಂದು ಕಾಲದಲ್ಲಿ ಐಗುಪ್ತದ ದೇವರುಗಳಿಗಾಗಿ ನಿರ್ಮಿಸಲಾಗಿದ್ದ ದೇವಾಲಯದ ಕೆಂಪು ಇಟ್ಟಿಗೆಗಳ ಗೋಡೆಯು 60 ಅಡಿಗಳಷ್ಟು ಮೇಲಕ್ಕೆ ಇರುತ್ತದೆ. ಈ ಕಟ್ಟಡವು ಅನಂತರದಲ್ಲಿ ಒಂದು ಬೈಝಂಟೈನ್ ಸಭೆಯ ಕಟ್ಟಡವಾಗಿ ಪರಿವರ್ತಿಸಲ್ಪಟ್ಟಿತು.

ಸೈತಾನನಿಗೆ ಅತ್ಯಂಥ ನಿಕಟವಾಗಿ ಸಂಬಂಧ ಹೊಂದಿರುವ ವಿಗ್ರಹಾರಾಧನೆಯು ಬಹುಶಃ ಪಟ್ಟಣದ ದಕ್ಷಿಣಕ್ಕಿರುವ ವೈದ್ಯಕೀಯ ಸಮುಚ್ಛಯದಲ್ಲಿ ಇರಬಹುದಾಗಿದೆ. ಸ್ವಸ್ಥತೆಯನ್ನು ಹೊಂದಿಕೊಳ್ಳುವದಕ್ಕಾಗಿ ರೋಗಿಗಳು ಸಮೀಪದಿಂದಲೂ ದೂರದ ಸ್ಥಳಗಳಿಂದಲೂ ಈ ಪ್ರಸಿದ್ಧ ಕೇಂದ್ರಕ್ಕೆ ಬರುತ್ತಿದ್ದರು. ಪ್ರಸಿದ್ಧ ವೈದ್ಯನಾದ Galenನು (ಕ್ರಿ.ಶ. 130-200) ಅನಂತರದಲ್ಲಿ ಇಲ್ಲಿ ತನ್ನ ವೈದ್ಯಕೀಯ ವೃತ್ತಿಯನ್ನು ಮಾಡುತ್ತಿದ್ದನು. Galenನು "ವೈದ್ಯಶಾಸ್ತ್ರದ ಪಿತಾಮಹ" ಎಂದು ಪರಿಚಿತನಾಗಿರುವ Hippocrates (460-377 ಕ್ರಿ.ಪೂ.) ನ ಬಳಿಕ ಎರಡನೆಯ ಸ್ಥಾನದಲ್ಲಿರುತ್ತಾನೆ. Galenನು ಮಾನವ ದೇಹರಚನೆಯ ಕ್ಷೇತ್ರದಲ್ಲಿನ ಕೆಲಸಕ್ಕೆ ಪರಿಚಿತನಾಗಿರುತ್ತಾನೆ. ಆತನ ಪುಸ್ತಕಗಳು ಹದಿಮೂರು ಶತಮಾನಗಳ ತನಕ ಈ ವಿಷಯದ ಮೇಲೆ ಪ್ರಮಾಣ ಗ್ರಂಥ ಎಂದೆಣಿಸಲ್ಪಟ್ಟಿದ್ದವು. ಚಿಕಿತ್ಸೆಯು ಅನ್ಯಧರ್ಮಿಯ (ವಿಗ್ರಹಾರಾಧಕ) ನಿಗೂಢತ್ವ ಹಾಗೂ ಆದಿಕಾಲದ ಔಷಧಗಳ ಮಿಶ್ರಣವಾಗಿತ್ತು. ಪಡೆದುಕೊಂಡ ಚಿಕಿತ್ಸೆಯನ್ನು ಬಣ್ಣಿಸುವವರಾಗಿ ಪಂಡಿತರು "ನಂಬಿಕೆ-ಸ್ವಸ್ಥತೆ" ಮತ್ತು "ಸ್ವ-ಸಲಹೆ" ಎಂಬ ಪದಗಳನ್ನು ಬಳಸುತ್ತಾರೆ. ಕೆಲವು ರೋಗಗಳು ಮನಶ್ಶಾರೀರಿಕವಾಗಿದ್ದವು - ಅಂದರೆ, ಕಾಯಿಲೆಗಳು ದೈಹಿಕ ಲಕ್ಷಣಗಳನ್ನು ಹೊಂದಿರುತ್ತವೆ, ಆದರೆ ಅವುಗಳು ಮಾನಸಿಕ ಅಥವಾ ಭಾವನಾತ್ಮಕತೆಯ ಕಾರಣಗಳಿಂದ ಉಗಮವಾಗಿರುತ್ತವೆ - ಈ ವೈದ್ಯಕೀಯ ಕೇಂದ್ರವು "ರೋಗಪರಿಹಾರೋಪಾಯಗಳಲ್ಲಿ" ಪಾಲನ್ನು ಹೊಂದಿತ್ತು. ಪಡೆದುಕೊಂಡ ಚಿಕಿತ್ಸೆಯ ಪರಿಣಾಮಕಾರಿತ್ವದ ಕುರಿತಾದ ಅನೇಕ "ಸಾಕ್ಷಿಗಳ"ನ್ನು ಪ್ರಾಚೀನ ಬರಹಗಳಲ್ಲಿ ಕಾಣಬಹುದಾಗಿದೆ. ಅವರ ಆಧುನಿಕ ತದ್ವತ್ತು ಅಥವಾ ಪ್ರತಿಮೂರ್ತಿಯೆಂದರೆ "ನಂಬಿಕೆಯ ಸ್ವಸ್ಥತೆಗಾರರು," ಇವರು ಪ್ರಚಾರ ಮಾಡಲ್ಪಟ್ಟಿರುವ "ರೋಗ ಪರಿಹಾರೋಪಾಯಗಳು" ಹಾಗೂ "ಸಾಕ್ಷಿಗಳನ್ನು" ಹೊಂದಿರುತ್ತಾರೆ. ಹೇಗೂ, ವೈದ್ಯಕೀಯ ಸಮುಚ್ಛಯದ ಅನ್ಯಧರ್ಮಿ ನಿಗೂಢತ್ವದ ಹೊರತಾಗಿಯೂ, ಕೆಲವು ಚಿಕಿತ್ಸೆಗಳು ಪ್ರಯೋಜನಕರವಾಗಿದ್ದವು: ಆಹಾರ

ಪಥ್ಯ, ವ್ಯಾಯಾಮ, ವಿಶ್ರಾಂತಿ, ಮತ್ತು ಬಿಸಿ ಹಾಗೂ ತಣ್ಣೀರಿನ ಸ್ನಾನ.

Asclepieion ಎಂದು ಕರೆಯಲ್ಪಡುವ ಸೌಲಭ್ಯಗಳ ಸ್ಥಳವನ್ನು "ಪವಿತ್ರ ರಸ್ತೆ" ಎಂದು ಕರೆಯಲ್ಪಡುವ ದೀರ್ಘವಾದ ಬೀದಿಯಲ್ಲಿ ಪ್ರಯಾಣಿಸಿ ತಲುಪಲಾಗುತ್ತಿತ್ತು. ಸ್ವಸ್ಥತೆಯನ್ನು ಹುಡುಕುವವರು, ತಾವು ಮರಣವನ್ನು ಹಿಂದಕ್ಕೆ ಬಿಟ್ಟು ಹೋಗುತ್ತಿದ್ದಾರೆಂದು ನಂಬುವವರಾಗಿ ಬರಿದಾದ ಪಾದಗಳಲ್ಲಿ ನಡೆದುಕೊಂಡು ಈ ರಸ್ತೆಯಲ್ಲಿ ಸಾಗುತ್ತಿದ್ದರು. ಆ ರಸ್ತೆಯ ಪ್ರವೇಶದ್ವಾರದಲ್ಲಿ ಸ್ವಸ್ಥತೆಯನ್ನುಂಟು ಮಾಡುವ ಗ್ರೀಕ್ ಹಾಗೂ ರೋಮನ್ ದೇವರಾದ Asclepiusನಿಗೆ ಸಮರ್ಪಿಸತವಾಗಿದ್ದ ಒಂದು ಯಜ್ಞವೇದಿ ಇತ್ತು. ಯಜ್ಞವೇದಿಯ ಮೇಲೆ ಎದ್ದು ಕಾಣುವಂಥದ್ದೆಂದರೆ ಈ ದೇವರ ಲಾಂಛನ: ಸುತ್ತಿಕೊಂಡಿರುವ ಸರ್ಪ, ಇದು ಬಹುಪಾಲು ಯೆಹೂದ್ಯರು ಹಾಗೂ ಕ್ರೈಸ್ತರು ಸೈತಾನನಿಗೆ ಸಂಬಂಧಗೊಳಿಸುವ ಒಂದು ಸಂಕೇತವಾಗಿರುತ್ತದೆ (ಆದಿಕಾಂಡ 3:1-24; ಪ್ರಕಟನೆ 12:9; 20:2). ಸರ್ಪವು ಆರೋಗ್ಯಕ್ಕೆ ಅನ್ಯಧರ್ಮಿಯ ಸಂಕೇತವಾಗಿತ್ತು ಯಾಕೆಂದರೆ ಅದು ತನ್ನ ಪೊರೆಯನ್ನು ಕಳಚಿಕೊಂಡು ಪುನಃ ಯೌವನದಿಂದ ಕಾಣಿಸಬಲ್ಲದ್ದಾಗಿತ್ತು. ಒಂದು ಅಥವಾ ಹೆಚ್ಚು ಸರ್ಪಗಳು ಒಂದು ಕೋಲನ್ನು ಸುತ್ತಿಕೊಂಡಿರುವ ಸಂಕೇತವು ಈಗಲೂ ವೈದ್ಯಕೀಯ ವೃತ್ತಿಯಲ್ಲಿ ವ್ಯಾಪಕವಾಗಿ ಬಳಸಲ್ಪಡುತ್ತಿದೆ.

*ಸೈತಾನನು ಸಾಂಸ್ಕೃತಿಕವಾಗಿ ಸಿಂಹಾಸನದಲ್ಲಿದ್ದನು.* ಪೆರ್ಗಮವು ಒಂದು ಕರಾವಳಿ ಪಟ್ಟಣವಾಗಿರಲಿಲ್ಲವಾದ್ದರಿಂದ, ವ್ಯಾಪಾರದ ಕ್ಷೇತ್ರದಲ್ಲಿ ಅದು ಎಫೆಸ ಹಾಗೂ ಸ್ಮುರ್ನ ಪಟ್ಟಣಗಳ ಸಂಗಡ ಪೈಪೋಟಿ ನಡಿಸಲು ಆಗಲಿಲ್ಲ. ಬದಲಾಗಿ, ಅದು ಸಂಸ್ಕೃತಿಯಲ್ಲಿ ನೈಪುಣ್ಯತೆಯನ್ನು ಹೊಂದಿತ್ತು. "[ಅದರ] ಕವಿಗಳು, ತತ್ವಜ್ಞಾನಿಗಳು, ವಿಜ್ಞಾನಿಗಳು, ಹಾಗೂ ಪಂಡಿತರ ಕಾರಣದಿಂದಾಗಿ . . . ಪೆರ್ಗಮದ ಖ್ಯಾತಿಯು ಅಥೇನೆ ಅಥವಾ ಅಲೆಗ್ಸಾಂದ್ರಿಯದ ಖ್ಯಾತಿಗೆ ಪ್ರತಿಸ್ಪರ್ಧಿಯಾಗಿತ್ತು."[22]

ಪೆರ್ಗಮದ ಹೆಸರಾಂತ ವೈದ್ಯರು ಮತ್ತು Zeus (ದೌಸ್ಯ) ನ ಯಜ್ಞವೇದಿಯ ಕಲಾನೈಪುಣ್ಯತೆಯ ಹೊರತಾಗಿ, ಇನ್ನೊಂದು ಸಾಂಸ್ಕೃತಿಕ ಸಾಧನೆಯೆಂದರೆ ಪೆರ್ಗಮದಲ್ಲಿನ ಗ್ರಂಥಾಲಯ. ಅದು ಎರಡು ಲಕ್ಷ ಸಂಪುಟಗಳನ್ನೊಳಗೊಂಡಿತ್ತು ಮತ್ತು "ಪ್ರಾಮುಖ್ಯತೆಯಲ್ಲಿ [ಐಗುಪ್ತ್ಯದಲ್ಲಿದ್ದ] ಅಲೆಗ್ಸಾಂದ್ರಿಯದ ಗ್ರಂಥಾಲಯಕ್ಕೆ ಪ್ರತಿಸ್ಪರ್ಧಿಯಾಗಿತ್ತು."[23] ಅಲೆಕ್ಸಾಂದ್ರಿಯದೊಂದಿಗಿನ ಪೈಪೋಟಿಯಿಂದಾಗಿ ಪೆರ್ಗಮದಲ್ಲಿ ಎರಡು ಗಮನಾರ್ಹವಾದ ಸಾಧನೆಗಳನ್ನು ಮಾಡುವಂತಾಯಿತು.

ಮೊದಲ ಸಾಧನೆಯೆಂದರೆ ಚರ್ಮಕಾಗದವನ್ನು ಪರಿಪೂರ್ಣಗೊಳಿಸಿದ್ದು. ಐಗುಪ್ತ್ಯದ ಅರಸನು, ಆಸ್ಯಸೀಮೆಯ ಗ್ರಂಥಾಲಯದ ಕುರಿತು ಹೊಟ್ಟೆಕಿಚ್ಚುಳ್ಳವನಾಗಿದ್ದ ಈತನು ಆಸ್ಯಸೀಮೆಗೆ ಪಪ್ಪೈರಸನ್ನು ಕಳುಹಿಸುವದಕ್ಕೆ ನಿರಾಕರಿಸಿದನು. ಪಪ್ಪೈರಸವು ನೈಲ ನದಿಯ ದಡದುದ್ದಕ್ಕೂ ಬೆಳೆದಿರುತ್ತಿದ್ದ ಪಪ್ಪೈರಸ ಗಿಡದ ತಾಳೆಯಿಂದ ತಯಾರಿಸಿದ ಬರವಣಿಗೆಯ ಕಾಗದವಾಗಿತ್ತು. ಪೆಪರ್ (ಕಾಗದ) ಎಂಬ ಪದವು "ಪಪ್ಪೈರಸ" ಎಂಬ ಪದದಿಂದ ವಿಕಾಸವಾಗಿರುತ್ತದೆ (5:1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪಪ್ಪೈರಸ ಮೇಲೆ ಹಾಕಲ್ಪಟ್ಟ ನಿರ್ಬಂಧಕಾಜ್ಞೆಯಿಂದಾಗಿ ಪೆರ್ಗಮದಲ್ಲಿನ ಲೇಖಕರು ಬರವಣಿಗೆಯ ವಸ್ತುವಾಗಿ ಪ್ರಾಣಿಗಳ ಚರ್ಮವನ್ನು ಬಳಸುವ ಪ್ರಾಚೀನ ಪದ್ಧತಿಗೆ ಮರೆಹೋಗುವ ಅನಿವಾರ್ಯತೆಯನ್ನು ಎದುರಿಸಿದರು. ಕಲಾಕಾರರು ಒಂದು ಚರ್ಮಕಾಗದವನ್ನು ಪರಿಪೂರ್ಣವಾಗಿ ಸಿದ್ಧಗೊಳಿಸುವ ತನಕ ವಿವಿಧ ಪ್ರಯೋಗಗಳನ್ನು ಮಾಡುತ್ತಿದ್ದರು, ಅದು "ಪೆರ್ಗಮ" ಎಂಬುದರಿಂದ ತೆಗೆದುಕೊಂಡ ಒಂದು ಹೆಸರಾಗಿತ್ತು. ಆ ಚರ್ಮಕಾಗದವು ಕುರಿ, ಆಡುಗಳು, ಮತ್ತು ಕರುಗಳ

ಚರ್ಮದಿಂದ ತಯಾರಿಸಲ್ಪಡುತ್ತಿತ್ತು. ಚರ್ಮ ಕಾಗದವನ್ನು ಮಾಡುವ ಪ್ರಕ್ರಿಯೆಯಲ್ಲಿ, ಚರ್ಮವನ್ನು ಹಿಗ್ಗಿಸಲಾಗುತ್ತಿತ್ತು, ಕಾಗದದಷ್ಟು ತೆಳ್ಳಗಾಗುವ ತನಕ ಹೊಡೆದು, ಬಳಿಕ ಸಂಸ್ಕರಿಸಲಾಗುತ್ತಿತ್ತು.

ಎರಡನೆಯ ಸಾಧನೆಯೆಂದರೆ ಪುಸ್ತಕಗಳನ್ನು ಅಭಿವೃದ್ಧಿ ಪಡಿಸಿದ್ದು. ಚರ್ಮ ಕಾಗದಗಳನ್ನು ಪಪೈರಸನಂತೆ ನೀಟಾಗಿ ಸುತ್ತಪಡುವದಕ್ಕೆ ಆಗುತ್ತಿರಲಿಲ್ಲ, ಆದ್ದರಿಂದ ಸಂಪ್ರದಾಯಿಕ ಸುರುಳಿಗಳ ಬದಲಿಗೆ ಪುಟಗಳನ್ನೊಳಗೊಂಡ ಪುಸ್ತಕವು ಸೃಷ್ಟಿಸಲ್ಪಟ್ಟಿತು. ಅಂತಹ ಪುಸ್ತಕವನ್ನು "codex" (ಹಸ್ತಾಕ್ಷರಗಳ ಗ್ರಂಥ) ಎಂದು ಕರೆಯಲ್ಪಡುತ್ತಿತ್ತು.

ಹೇಗೂ, ಪೆರ್ಗಮದ ಸಂಸ್ಕೃತಿಯು ಕೇವಲ ಬುದ್ಧಿವಂತರನ್ನು ಮಾತ್ರವೇ ಆಕರ್ಷಿಸಲಿಲ್ಲ; ಅದು ಸೌದಂರ್ಯಾಸ್ವಾದ ಅಂದಕ್ಕೂ ಆಕರ್ಷಕವಾಗಿತ್ತು. ಈ ಪ್ರಾಂತ್ಯದಲ್ಲಿ ಅತ್ಯಂತ ಮನಮೋಹಕವಾದ ದೃಶ್ಯವೆಂದರೆ 10,000 ಆಸನಗಳುಳ್ಳ, ಬೀಸಣಿಗೆ ಆಕಾರದ ನಾಟಕಶಾಲೆ, ಅದು ನಗರದುರ್ಗದ ದಕ್ಷಿಣ ಭಾಗದಲ್ಲಿನ ಇಳಿಜಾರಿನ ಮೇಲೆ ನಿರ್ಮಿಸಲ್ಪಟ್ಟಿತ್ತು. ಒಬ್ಬನು ಆಸನಗಳ ಎಪ್ಪತ್ತೆಂಟು ಸಾಲುಗಳಲ್ಲಿನ ಮೇಲ್ಗಡೆಯಲ್ಲಿರುವ ಸಾಲಿನಲ್ಲಿ ಕುಳಿತುಕೊಳ್ಳುವದಾದರೆ, ಮುಂದೆ ಕಾಣುವ ದೃಶ್ಯವು ಒಂದು ಚಿತ್ರಸದೃಶ್ಯವಾದ ಪರ್ವತ ತುದಿಗಳದ್ದಾಗಿರುತ್ತದೆ. ಆಧುನಿಕ ದಿನದ ಬೆರ್ಗಮಾ ಕೆಳಗಡೆಯಲ್ಲಿ ಮತ್ತು ಎಡಭಾಗಕ್ಕೆ ಇರುತ್ತದೆ. ಮೇಲ್ಗಡೆಯಲ್ಲಿ ಸೂರ್ಯ, ಮೋಡಗಳು, ಮತ್ತು ಅಂತ್ಯವಿಲ್ಲದ ಆಕಾಶ ಇವುಗಳನ್ನು ಬಿಟ್ಟರೆ ಬೇರೆ ಏನೂ ಇರುವದಿಲ್ಲ.

ಪೆರ್ಗಮವು ಸೈತಾನನ ನಿವಾಸ ಎಂದು ಪರಿಚಿತಗೊಳ್ಳುವದಕ್ಕೂ ಗ್ರಂಥಾಲಯ, ನಾಟಕಶಾಲೆ, ಹಾಗೂ ಸಾಂಸ್ಕೃತಿಕ ಅಭಿವ್ಯಕ್ತಿಗಳಿಗೂ ಸಂಬಂಧವೇನಿದೆ? ಬೌದ್ಧಿಕ ಮತ್ತು ಕಲಾತ್ಮಕ ಅನ್ವೇಷಣೆಗಳು ಯಾವ ಬದಲಾವಣೆಯೂ ಇಲ್ಲದೆ ಚಕ್ರವರ್ತಿ, ಒಂದು ಅನ್ಯಧರ್ಮ ದೇವತೆ, ಅಥವಾ ಎರಡಕ್ಕೂ ಸಂಬಂಧವನ್ನು ಹೊಂದಿರುತ್ತಿದ್ದವು. ಈಗಷ್ಟೇ ಬಣ್ಣಿಸಲಾದ ನಾಟಕಶಾಲೆಯಲ್ಲಿನ ಎಲ್ಲಾ ನಾಟಕಗಳು ದ್ರಾಕ್ಷಾರಸದ ದೇವತೆಯಾದ Dionysus ಗೌರವಾರ್ಥವಾಗಿ ಕೊಂಡಾಡಲ್ಪಡುವಿಕೆಯ ಭಾಗವಾಗಿರುತ್ತಿದ್ದವು. Dionysus ದೇವಾಲಯದ ಭಗ್ನಾವಶೇಷಗಳು ವೇದಿಕೆಯ ಪ್ರಾಂತ್ಯದ ಉತ್ತರ ದಿಕ್ಕಿನ ಕೊನೆಯಲ್ಲಿ ಈಗಲೂ ಕಾಣಬಹುದಾಗಿವೆ.

*ಸೈತಾನನು ನೈತಿಕವಾಗಿ ಸಿಂಹಾಸನದಲ್ಲಿದ್ದನು.* ಅನೈತಿಕತೆ (ಜಾರತ್ವ) - ವಿಶೇಷವಾಗಿ ಲೈಂಗಿಕ ಅನೈತಿಕತೆ - ಪೆರ್ಗಮದಲ್ಲಿನ ರಾಜಕೀಯ, ಧಾರ್ಮಿಕ, ಮತ್ತು ಸಾಂಸ್ಕೃತಿಕಗಳ ಅಂತರ್ಗತ ಭಾಗವಾಗಿತ್ತು. ಆ ಪಟ್ಟಣದ ನಾಗರೀಕರು "ಶರೀರಭಾವದ ಕರ್ಮಗಳಲ್ಲಿ" ನಿಪುಣರಾಗಿದ್ದರು, ಉದಾಹರಣೆಗೆ "ಜಾರತ್ವ ಬಂಡುತನ ನಾಚಿಕೆಗೇಡಿತನ . . . ಕುಡಿಕತನ [ಮತ್ತು] ದುಂದೌತಣ" (ಗಲಾತ್ಯ 5:19–21).

ಪಟ್ಟಣದಲ್ಲಿ ಸೈತಾನನ ಸಿಂಹಾಸನಗಳು ಬಹಳವಾಗಿರುವದನ್ನು ಪರಿಗಣನೆಗೆ ತೆಗೆದುಕೊಳ್ಳುವವನಾಗಿ, LaMar Berrett ಹೀಗೆ ಬರೆಯುತ್ತಾನೆ, "ಸೈತಾನನ ಸಿಂಹಾಸನವು ಈ ಯಜ್ಞವೇದಿ ಆಗಿರಲಿಲ್ಲ [ದೌಸ್ಯನ (Zeus) ಯಜ್ಞವೇದಿ] ಆದರೆ *ಸ್ವತಃ ಪೆರ್ಗಮ ಪಟ್ಟಣವೇ ಆಗಿತ್ತು.*"[24] ಸೈತಾನನು ಅದರ ನಾಗರೀಕರ ಮನಸ್ಸುಗಳಲ್ಲಿ, ಹೃದಯಗಳಲ್ಲಿ, ಮತ್ತು ಜೀವಿತಗಳಲ್ಲಿ ಸಿಂಹಾಸನಾರೂಢನಾಗಿದ್ದನು. ಆದ್ದರಿಂದ ಪೆರ್ಗಮವು ಶಿಷ್ಯರು ಸನ್ನಿಹಿತವಾದ ಅಪಾಯದಲ್ಲಿದ್ದ ಪಟ್ಟಣವಾಗಿತ್ತು.

ಈಗ ನಾವು ಯೇಸು ಈ ಸಭೆಯ ಕುರಿತು ಮಾಡಿದ ಶ್ಲಾಘನೆಯನ್ನು ಗುರುತಿಸುವದಕ್ಕೆ ಶಕ್ತರಾಗತಕ್ಕದ್ದು: **ನೀನು ನನ್ನ ಹೆಸರನ್ನು ಬಿಡದೆ ಹಿಡಿದುಕೊಂಡಿದ್ದೀ** (ನನ್ನ ನಂಬಿಕೆಯನ್ನು

ನಿರಾಕರಿಸಲಿಲ್ಲ). ದಾಕ್ಷಿಣ್ಯವಿಲ್ಲದ ಪರಿಸ್ಥಿತಿಗಳಿಂದ ಸುತ್ತುವರೆಯಲ್ಪಟ್ಟಿದ್ದಾಗ್ಯೂ, ಪೆರ್ಗಮದಲ್ಲಿನ ಕ್ರೈಸ್ತರು ನಂಬಿಗಸ್ತರಾಗಿ ಉಳಿದಿದ್ದರು! ಅವರು ಯೇಸುವನ್ನು ವ್ಯಕ್ತಿಯಾಗಿ ಮಾತ್ರವೇ ಹಿಡಿದುಕೊಂಡವರು ಮಾತ್ರವೇ ಆಗಿರಲಿಲ್ಲ, ಆದರೆ ಯೇಸುವಿನ ವಿಧಿಗಳನ್ನು ಸಹ ಹಿಡಿದುಕೊಂಡಿದ್ದರು. ಮೂಲ ವಾಕ್ಯದಲ್ಲಿ, **ನನ್ನ ನಂಬಿಕೆ** ಎಂಬ ಪದಗುಚ್ಛವು ಅಕ್ಷರಶಃ "ನನ್ನ ಕುರಿತ ನಂಬಿಕೆ" (τὴν πίστιν μου, *tēn pistin mou*) ಎಂದಾಗಿರುತ್ತದೆ. ಸಾಮಾನ್ಯವಾಗಿ, ನಿರ್ದಿಷ್ಟ ಗುಣವಾಚಿಯು ("the") "ನಂಬಿಕೆ" ಎಂಬ ಗ್ರೀಕ್ ಪದದ ಮುಂಚೆ ಕಂಡು ಬರುವದಾದರೆ, ಆ "ನಂಬಿಕೆ"ಯು "ಯೇಸುವಿನಲ್ಲಿನ ನಂಬಿಕೆಯ ಸುತ್ತ ಕೇಂದ್ರಕೃತವಾಗಿರುವ ಉಪದೇಶದ ಮುಖ್ಯಭಾಗವನ್ನು ಸೂಚಿಸುತ್ತದೆ" - ಬೇರೆ ಮಾತುಗಳಲ್ಲಿ ಹೇಳುವದಾದರೆ, ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ. ಕೆಲವು ತರ್ಜುಮೆಗಳಲ್ಲಿ "ನೀನು ನನ್ನಲ್ಲಿಟ್ಟ ನಂಬಿಕೆ" ಎಂಬುದಾಗಿ ಅಥವಾ ಅದಕ್ಕೆ ಸಮಾನವಾದ ಮಾತುಗಳನ್ನು ಒಳಗೊಂಡಿವೆ, ಆದರೆ "ನಂಬಿಕೆ" ಎಂಬ ಪದಗುಚ್ಛವು "ಕೇವಲ" ಯೇಸುವಿನಲ್ಲಿ ನಂಬಿಕೆಯಿಡುವದು ಎಂಬುದಕ್ಕಿಂತಲೂ ವ್ಯಾಪಕ ಅರ್ಥವನ್ನು ಹೊಂದಿರುತ್ತದೆ. ಹೇಗೂ, ಕೊಡಲ್ಪಟ್ಟಿರುವ ಅರ್ಥನಿರೂಪಣೆಯಲ್ಲಿ ಯೇಸುವಿನಲ್ಲಿಡುವ ನಂಬಿಕೆಯು *ಸೇರಿರುತ್ತದೆ*. ಅವರು ಯೇಸು ಏನಾಗಿದ್ದನೋ ಅದೆಲ್ಲವನ್ನೂ ಮತ್ತು ಯೇಸು ಉಪದೇಶಿಸಿದ್ದೆಲ್ಲವನ್ನೂ ನಂಬಿದವರಾಗಿದ್ದರು.

ಅಷ್ಟುಮಾತ್ರವಲ್ಲದೆ, ಅವರು ಮರಣದ ಬೆದರಿಕೆಯನ್ನು ಎದುರಿಸಿದಾಗ್ಯೂ ನಂಬಿಗಸ್ತರಾಗಿ ಉಳಿದಿದ್ದರು: **ನೀನು ಇರುವ ಸೈತಾನನ ನಿವಾಸದಲ್ಲಿ ನನಗೆ ನಂಬಿಗಸ್ತನೂ ಸಾಕ್ಷಿಯೂ ಆದ ಅಂತಿಪನು ಕೊಲ್ಲಲ್ಪಟ್ಟ ದಿನಗಳಲ್ಲಿಯಾದರೂ ನನ್ನಲ್ಲಿಟ್ಟಿರುವ ನಂಬಿಕೆಯನ್ನು ನೀನು ಮರೆಮಾಡಲಿಲ್ಲ.** ಸಾಕ್ಷಿ ಎಂಬ ಪದವನ್ನು ಅನುವಾದಿಸಿರುವ ಗ್ರೀಕ್ ಪದವಾದ μάρτυς (*martus*) ಎಂಬ ಪದದಿಂದಲೇ "martyr" (ರಕ್ತಸಾಕ್ಷಿ) ಎಂಬ ಪದವು ಬಂದಿರುತ್ತದೆ. ಈ ಪದವು "ಸಾಕ್ಷಿಯಾಗುವ ಅಥವಾ ಸಾಕ್ಷಿಯನ್ನು ಹೇಳುವ ವ್ಯಕ್ತಿಯನ್ನು" ಸೂಚಿಸುತ್ತದೆ. ಕೆಲವು ಸಾರಿ, ಗ್ರೀಕ್ ಪದವು ತನ್ನ ನಂಬಿಕೆಗೋಸ್ಕರ ಸಾಯುವದಕ್ಕೂ ಸಿದ್ಧನಾಗಿರುವ ಮೂಲಕ ಅದಕ್ಕೆ ಸಾಕ್ಷಿಯಾಗುವ ವ್ಯಕ್ತಿಯನ್ನು ಸೂಚಿಸುತ್ತದೆ - ಅದನ್ನು ನಾವು ರಕ್ತಸಾಕ್ಷಿ ಎಂದು ಕರೆಯುತ್ತೇವೆ. ಅಂತಿಪನು ತನ್ನ ನಂಬಿಕೆಗೋಸ್ಕರ ಮರಣಿಸುವದಕ್ಕೆ ಮನಸ್ಸುಳ್ಳವನಾಗಿದ್ದನಾದ್ದರಿಂದ, KJVಯು "ರಕ್ತಸಾಕ್ಷಿ" ಎಂಬ ಪದವನ್ನು ಬಳಸುತ್ತದೆ. ಅದೇ ಪದವು 17:6ರಲ್ಲಿ ಕಂಡು ಬರುತ್ತದೆ, ಅಲ್ಲಿ ಪುನಃ ಇದು ತಮ್ಮ ಮರಣದ ಮೂಲಕ ಸಾಕ್ಷಿಯಾದವರನ್ನು ಸೂಚಿಸುತ್ತದೆ.

**ಅಂತಿಪನು** ಯಾರು ಎಂಬುದು ನಮಗೆ ತಿಳಿಯದು, ಆದರೆ ಕರ್ತನಿಗೆ ಗೊತ್ತಿದೆ. ಆತನು ಯುವಕನಾಗಿದ್ದನೋ ಅಥವಾ ವೃದ್ಧನಾಗಿದ್ದನೋ, ವಿವಾಹಿತನೋ ಅಥವಾ ಅವಿವಾಹಿತನೋ, ಸಾಧನೆ ಮಾಡಿದವನೋ ಅಥವಾ ಸಾಧನೆ ಮಾಡಿಲ್ಲದವನೋ (ಲೋಕವು ಯಶಸ್ಸನ್ನು ದೃಷ್ಟಿಸುವ ರೀತಿಯಲ್ಲಿ) ನಮಗೆ ತಿಳಿಯದು; ಆದರೆ ಯೇಸು ಆತನನ್ನು **ನನಗೆ ನಂಬಿಗಸ್ತನೂ ಸಾಕ್ಷಿಯೂ** ಎಂಬದಾಗಿ ಕರೆದನು ಎಂಬುದು ಮಾತ್ರ ನಮಗೆ ತಿಳಿದದೆ. ಅಂತ್ಯದಲ್ಲಿ, ಅದೇ ಬಹು ಪ್ರಾಮುಖ್ಯವಾದದ್ದಾಗಿರುತ್ತದೆ. **ಕೊಲ್ಲಲ್ಪಟ್ಟ** ಎಂಬುದು ἀποκτείνω (*apokteinō*) ಎಂಬ ಗ್ರೀಕ್ ಕ್ರಿಯಾಪದವಾಗಿದ್ದು ಹಿಂಸಾತ್ಮಕವಾಗಿ ಮರಣಿಸುವದನ್ನು ಸೂಚಿಸುತ್ತದೆ. KJVಯಲ್ಲಿ "ಕಡಿದು ಕೊಲ್ಲಲ್ಪಟ್ಟನು" ಎಂದಿರುತ್ತದೆ. ಸ್ಮುರ್ನದಲ್ಲಿನ ಸಭೆಯು ಎಚ್ಚರಿಸಲ್ಪಟ್ಟಿತ್ತು, "ಇಗೋ ನೀವು ದುಷ್ಪ್ರೇರಣೆಗೆ ಒಳಗಾಗುವಂತೆ ಸೈತಾನನು ನಿಮ್ಮಲ್ಲಿ ಕೆಲವರನ್ನು ಸೆರೆಮನೆಯೊಳಗೆ ಹಾಕುವದಕ್ಕಿದ್ದಾನೆ" (ವ. 10). ಅತ್ಯಂಥ ಘೋರವಾದದ್ದು ಸ್ಮುರ್ನದ ಸಭೆಯವರಿಗೆ ಮುಂದಿನ ದಿನಗಳಲ್ಲಿ ಬರಲಿತ್ತು, ಆದರೆ ಸೈತಾನನು ಈಗಾಗಲೇ ಪೆರ್ಗಮದಲ್ಲಿ ತನ್ನ ತನ್ನ ಬಲವನ್ನು

ತೋರ್ಪಡಿಸಿದ್ದನು. ಆ ಪಟ್ಟಣದಲ್ಲಿ, ಮೊದಲ ಕ್ರೈಸ್ತನು ಈಗಾಗಲೇ ಹತನಾಗಿದ್ದನು.

**ವಚನ 14.** ಕರ್ತನ ಖಂಡನೆಯು ನಡುಕ ಹುಟ್ಟಿಸುವ ಮಾತುಗಳಿಂದ ಆರಂಭಗೊಳ್ಳುತ್ತದೆ: **ಆದರೂ ಕೆಲವು ವಿಷಯಗಳಲ್ಲಿ ನಿನ್ನ ಮೇಲೆ ತಪ್ಪು ಹೊರಿಸಬೇಕಾಗುತ್ತದೆ.** ಆತನ ಟೀಕೆಗಳು ಸಂಖ್ಯೆಯಲ್ಲಿ **ಕೆಲವು** ಆಗಿದ್ದವಾದರೂ, ಅವುಗಳ ಒಳಾರ್ಥಕ್ಕೆ ನಿತ್ಯವಾದ ಮಹತ್ವಪೂರ್ಣತೆಯಿತ್ತು. ಕರ್ತನು ಮುಂದುವರೆದು ಹೀಗೆ ಹೇಳುತ್ತಾನೆ, **ವಿಗ್ರಹಕ್ಕೆ ನೈವೇದ್ಯಮಾಡಿದ ಪದಾರ್ಥಗಳನ್ನು ತಿನ್ನುವದರಲ್ಲಿಯೂ ಜಾರತ್ವ ಮಾಡುವದರಲ್ಲಿಯೂ ಇಸ್ರಾಯೇಲ್ಯರು ಮುಗ್ಗರಿಸಿ ಬೀಳಬೇಕೆಂದು ಬಿಳಾಮನು ಬಾಲಾಕನಿಗೆ ಹೇಳಿದ ದುರ್ಬೋಧನೆಯನ್ನು ಅವಲಂಬಿಸಿರುವವರು ನಿನ್ನಲ್ಲಿದ್ದಾರೆ.**

**ಬಿಳಾಮನ** ಮತ್ತು **ಬಾಲಾಕನ** ಕಥನವು ಅರಣ್ಯಕಾಂಡ 22-25ರಲ್ಲಿ ಕಂಡು ಬರುತ್ತದೆ. ಬಿಳಾಮನು ಇಸ್ರಾಯೇಲ್ಯರನ್ನು ಶಪಿಸುವದಾದರೆ ಬಾಲಾಕನು ಆತನಿಗೆ ದೊಡ್ಡ ಬಹುಮಾನವನ್ನು ಕೊಡುವದಾಗಿ ಹೇಳಿದನು, ಆದರೆ ಹಾಗೆ ಮಾಡುವದಕ್ಕೆ ಪ್ರವಾದಿಯು ಅಶಕ್ತನಾದನು. ಬಾಲಾಕನಿಂದ ಕೊಡುಗೆಯಾಗಿ ಸಿಕ್ಕುವ ಬೊಕ್ಕಸಗಳನ್ನು ಸಂಪಾದಿಸಿಕೊಳ್ಳುವದಕ್ಕಾಗಿ (2 ಪೇತ್ರ 2:15; ಯೂದನು 11), ಬಿಳಾಮನು ಒಂದು ದುಷ್ಟ ಯೋಜನೆಯನ್ನು ಮಾಡಿದನು. ತತ್ಪರಿಣಾಮವಾಗಿ, ಆತನು ಬಾಲಾಕನಿಗೆ ಹೀಗೆ ಹೇಳಿದನು, "ನಾನು ಇಸ್ರಾಯೇಲ್ಯರನ್ನು ಶಪಿಸುವದಕ್ಕೆ ಸಾಧ್ಯವಿಲ್ಲ, ಆದರೆ ಅವರನ್ನು ಅನ್ಯದೇವರನ್ನು ಆರಾಧಿಸುವಂತೆ ಅವರ ಪುರುಷರನ್ನು ಸೆಳೆಯುವಂತೆ ನಿನ್ನ ಸ್ತ್ರೀಯರನ್ನು ಮತ್ತು ಜಾರತ್ವವನ್ನು ಬಳಸಿಕೊಳ್ಳುವದಾದರೆ, ದೇವರೇ ಸ್ವತಃ ಅವರನ್ನು ಶಪಿಸುವನು." ಬಾಲಾಕನು ಬಿಳಾಮನ ಸಲಹೆಯನ್ನು ಅನುಸರಿಸಿದನು, ಮತ್ತು ಅದರ ಒಂದು ಫಲಿತವಾಗಿ, ದೇವರು ಒಂದು ವ್ಯಾಧಿಯನ್ನು ಬರಮಾಡಿ ಇಸ್ರಾಯೇಲ್ಯರಲ್ಲಿ 24,000 ಮಂದಿಯನ್ನು ಕೊಂದನು (ಅರಣ್ಯಕಾಂಡ 25:9). ಕ್ರಮೇಣದಲ್ಲಿ ಸ್ವತಃ ಬಿಳಾಮನು ಕತ್ತಿಯಿಂದ ಹತನಾಗಿ ಸತ್ತನು (ಅರಣ್ಯಕಾಂಡ 31:8). ಮೋಶೆಯು ಅನಂತರದಲ್ಲಿ *"ಬಿಳಾಮನ ಆಲೋಚನೆಯನ್ನು ಅನುಸರಿಸಿ"* ಅನ್ಯಧರ್ಮಿಯ ಸ್ತ್ರೀಯರು "ಇಸ್ರಾಯೇಲ್ಯರನ್ನು ಯೆಹೋವನಿಗೆ ದ್ರೋಹಿಗಳನ್ನಾಗಿ ಮಾಡಿದರು . . ." ಎಂದು ಬರೆದನು (ಅರಣ್ಯಕಾಂಡ 31:16; ಒತ್ತಿ ಹೇಳಿದ್ದು ನನ್ನದು; ನೋಡಿರಿ ಮೀಕನು 6:5).

**ಬಿಳಾಮನ ದುರ್ಬೋಧನೆಯನ್ನು** ಯಾರು ಅನುಸರಿಸುವವರಾಗಿದ್ದರು? ರಾಜಿ ಮಾಡಿಕೊಂಡು ಹೋಗುವಂತೆ ಬೋಧಿಸುವ ವ್ಯಕ್ತಿಗಳೇ ಆಗಿದ್ದರು. ಪಟ್ಟಣದಲ್ಲಿನ ಅನ್ಯಧರ್ಮಿಯ ಸಂಸ್ಕೃತಿಯಲ್ಲಿ ಪಾಲ್ಗೊಳ್ಳುವದು ಕ್ರೈಸ್ತರಿಗೆ ಅಂಗೀಕೃತವಾದದ್ದೆಂದು ಬಿಳಾಮ್ಯರು ಬೋಧಿಸುತ್ತಿದ್ದರೆಂಬುದರಲ್ಲಿ ಸಂಶಯವೇ ಇಲ್ಲ. ಪೆರ್ಗಮದಲ್ಲಿನ ಸಭೆಯು ಈ ದೋಷಪೂರಿತ ಬೋಧನೆಯನ್ನು ಮಾಡುತ್ತಿದ್ದ ಬೋಧಕರಿಗೆ ಮಧ್ಯದೊಳಗೆ ಬರುವಂತೆ ಮತ್ತು ಉಳಿದುಕೊಳ್ಳುವಂತೆ ಅವಕಾಶವನ್ನು ಕೊಟ್ಟಿತ್ತೆಂಬುದು ಸ್ಪಷ್ಟವಾಗಿ ಕಾಣಿಸುತ್ತದೆ. ಯೇಸು ಸುಳ್ಳು ಬೋಧಕರನ್ನು *ಸಹಿಸಿಕೊಳ್ಳದೆ* ಇರುವದಕ್ಕಾಗಿ ಎಫೆಸದಲ್ಲಿನ ಸಭೆಯನ್ನು *ಶ್ಲಾಘನೆ ಮಾಡಿದ್ದನು*; ಈಗ ಪೆರ್ಗಮ ಸಭೆಯನ್ನು *ಸಹಿಸಿಕೊಂಡದ್ದಕ್ಕಾಗಿ* ಖಂಡನೆಯನ್ನು ಮಾಡುತ್ತಿದ್ದಾನೆ.

ಬಿಳಾಮನ ಈ ಬೋಧನೆಯು ಕ್ರೈಸ್ತರಿಗೆ **ಮುಗ್ಗರಿಸಿ ಬೀಳಬೇಕೆಂದು** ಇದ್ದ ವಿಘ್ನವಾಗಿತ್ತು. "ಮುಗ್ಗರಿಸಿ ಬೀಳುವ" ಎಂಬುದಾಗಿ ಅನುವಾದಿಸಲ್ಪಟ್ಟಿರುವ σκάνδαλον (*skandalon*) ಎಂಬ ಗ್ರೀಕ್ ಪದವು "ಆಸೆ ತೋರಿಸಲು ತಿಂಡಿಯನ್ನಿಟ್ಟಿರುವ ಒಂದು ಗಾಳದ ಭಾಗವನ್ನು ಸೂಚಿಸುವದಾಗಿದೆ. ತಿಂಡಿಯನ್ನು ತೆಗೆದುಕೊಂಡ ಕೂಡಲೇ ಗಾಳವು ಜಿಗಿದು ನತದೃಷ್ಟನನ್ನು

ಬಲೆಯಲ್ಲಿ ಸಿಕ್ಕಿಸಿ ಬಿಡುತ್ತದೆ."[25]

ಈ "ಬಲೆಗೆ ಬೀಳಿಸುವಂಥ" ಸಿದ್ಧಾಂತ ಯಾವದಾಗಿತ್ತು? ಮೊದಲನೆಯದಾಗಿ, ಬಿಳಾಮನ ಬೋಧನೆಯು **ವಿಗ್ರಹಕ್ಕೆ ನೈವೇದ್ಯಮಾಡಿದ ಪದಾರ್ಥಗಳನ್ನು ತಿನ್ನು**ವಂತೆ ಕ್ರೈಸ್ತರಿಗೆ ಉಪದೇಶಿಸುವದಾಗಿತ್ತು. ಪೌಲನು ವಿಗ್ರಹಗಳಿಗೆ ನೈವೇದ್ಯ ಮಾಡಿದ ಮಾಂಸವನ್ನು ತಿನ್ನುವ ಪ್ರಶ್ನೆಯ ಬಗ್ಗೆ ಚರ್ಚಿಸಿದ್ದನು (ರೋಮಾ 14:1-15:13; 1 ಕೊರಿಂಥ 8-10), ಆದರೆ ಆತನ ಚರ್ಚೆಯು ಪ್ರಾಥಮಿಕವಾಗಿ ವಿಗ್ರಹಕ್ಕೆ ಮೊದಲನೆಯದಾಗಿ ಸಮರ್ಪಿಸಲ್ಪಟ್ಟು ನಂತರ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತಿದ್ದ ಮಾಂಸಕ್ಕೆ ಸಂಬಂಧಿಸಿದ್ದಾಗಿತ್ತು. ಸ್ಪಷ್ಟವಾಗಿರುವಂತೆ, ಪ್ರಕಟನೆ 2:14ರಲ್ಲಿ ಉಲ್ಲೇಖಿಸಲಾಗಿರುವ ಪಾಪವು ವಿಗ್ರಹಾರಾಧನೆಯಲ್ಲಿ ವಾಸ್ತವಿಕವಾಗಿ ಪಾಲ್ಗೊಳ್ಳುವದನ್ನು ಒಳಗೊಂಡಿತ್ತು, ಅದು ಯಾವದೇ ಮುಖದಾಕ್ಷಿಣ್ಯವಿಲ್ಲದೆ ದೇವರಿಂದ ಖಂಡಿಸಲ್ಪಟ್ಟಿರುತ್ತದೆ (2 ಕೊರಿಂಥ 6:16; ಗಲಾತ್ಯ 5:20; 1 ಯೋಹಾನ 5:21). ಎರಡನೆಯದಾಗಿ, ಬಿಳಾಮನ ಬೋಧನೆಗಳು **ಜಾರತ್ವ ಮಾಡುವದರಲ್ಲಿ** ಜನರನ್ನು ಪ್ರೋತ್ಸಾಹಿಸಿದವು. "ಜಾರತ್ವ ಮಾಡುವದರಲ್ಲಿ [ಕೃತ್ಯಗಳನ್ನು]" ಎಂಬುದರ ಅನುವಾದಿತ ಗ್ರೀಕ್ ಪದ πορνεύω (*porneuō*) ಎಂಬುದರ ಅರ್ಥವು "ಹಾದರವನ್ನು ಮಾಡುವದು" ಎಂದಾಗಿರುತ್ತದೆ (ನೋಡಿರಿ KJV). ಅನ್ಯಧರ್ಮಿಯ ಆರಾಧನೆಯು ಸಾಮಾನ್ಯವಾಗಿ ಲೈಂಗಿಕ ಅನೈತಿಕತೆ (ಜಾರತ್ವ) ಒಳಗೊಂಡಿರುತ್ತಿತ್ತು, ಅದು ಕರ್ತನಿಂದ ಖಂಡಿಸಲ್ಪಟ್ಟಿತ್ತು (ಮತ್ತು ಖಂಡಿಸಲ್ಪಡುತ್ತಿದೆ; 1 ಕೊರಿಂಥ 6:13-20).

**ವಚನ 15. ಹಾಗೆಯೇ ನಿಕೊಲಾಯಿತರ ಬೋಧನೆಯನ್ನು ಅನುಸರಿಸುವವರೂ ನಿಮ್ಮಲ್ಲಿ ಇದ್ದಾರೆ.** ನಿಕೊಲಾಯಿತರು ಈ ಮುಂಚೆ, ಎಫೆಸದಲ್ಲಿನ ಸಭೆಗೆ ಬರೆದ ಪತ್ರದಲ್ಲಿ ಕಾಣಿಸಿಕೊಂಡರು (ವ. 6ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಆದಿ ಕ್ರೈಸ್ತ ಲೇಖಕರು ನಿಕೊಲಾಯಿತರನ್ನು ಜಾರತ್ವವನ್ನು ಮಾಡುತ್ತಿದ್ದ ಒಂದು ಗ್ನಾಸ್ಟಿಕ್ (ಜ್ಞಾನವಾದಿ) ಗುಂಪು ಎಂದು ಗುರುತಿಸಿದ್ದರು. "ಗ್ನಾಸ್ಟಿಕ್" ಎಂಬ ಪದವು "ಜ್ಞಾನ" ಎಂಬುದಕ್ಕಿರುವ ಗ್ರೀಕ್ ಭಾಷೆಯ γνῶσις (*gnōsis*) ಎಂಬ ಪದದಿಂದ ಬಂದಿರುತ್ತದೆ. ಗ್ನಾಸ್ಟಿಕ್‌ವಾದಿಗಳು ತಮ್ಮಲ್ಲಿ ಬೇರೆ ಯಾರಿಗೂ ಲಭ್ಯವಿಲ್ಲದಿರುವಂತಹ ಜ್ಞಾನ ಮತ್ತು ತಿಳುವಳಿಕೆ ಇರುತ್ತದೆಂದು ಹೇಳಿಕೊಳ್ಳುತ್ತಿದ್ದರು. ಒಂದು ಜನಪ್ರಿಯವಾದ ಗ್ನಾಸ್ಟಿಕ್ ಸಿದ್ಧಾಂತವು ಯಾವದೆಂದರೆ ದೇವರ ಮಗುವು ತಾನು ಇಷ್ಟಪಡುವ ಎಲ್ಲಾ ಪಾಪವನ್ನೂ ಮಾಡಬಹುದು ಮತ್ತು ದೇವರ ಕೃಪೆಯು ಆಗಲೂ ಅವನ ಪಾಪವನ್ನು ಮುಚ್ಚುವದು, ಆತನು ಪಶ್ಚಾತ್ತಾಪ ಪಟ್ಟರೂ ಸರಿಯೇ ಅಥವಾ ಪಡದಿದ್ದರೂ ಸರಿಯೇ, ದೇವರು ಕೃಪೆಯು ಅದನ್ನು ಮುಚ್ಚುವದು ಎಂಬದೆ. ಹೀಗೆ ಅವರು "ದೇವರ ಕೃಪೆಯನ್ನು ನೆವಮಾಡಿಕೊಂಡು ನಾಚಿಕೆಗೆಟ್ಟ ಕೃತ್ಯಗಳನ್ನು ನಡಿಸುವವರಾದರು" (ಯೂದನು 4). ನಮ್ಮ ಪಾಪಗಳಿಗಾಗಿ ದೇವರ ಕೃಪೆಯು ಸಾಕಾದದ್ದು, ಆದರೆ ಇದು ಪಾಪ ಮಾಡುವಂತೆ ಇದು ಒಂದು ಪ್ರೋತ್ಸಾಹ ಆಗಬಾರದು. ಈ ವಿಷಯದ ಮೇಲೆ ಪೌಲನು ಮಾಡುವ ಚರ್ಚೆಯನ್ನು ನೋಡಿರಿ, ಅದು ರೋಮಾ 6:1ರಲ್ಲಿ ಆರಂಭಗೊಳ್ಳುತ್ತದೆ. ನಿಜವಾದ ಪಶ್ಚಾತ್ತಾಪವು ಇರುವದಾದರೆ, ಅದು ದೇವರ ಸಹಾಯದೊಂದಿಗೆ ನಮ್ಮ ಜೀವಿತಗಳಿಂದ ಪಾಪವನ್ನು ತೊಲಗಿಸಿಕೊಳ್ಳಲು ಪ್ರಯತ್ನಿಸುವಂತೆ ಮಾಡುವದು.

"ಬಿಳಾಮನ ಬೋಧನೆ" ಮತ್ತು "ನಿಕೊಲಾಯಿತರ ಬೋಧನೆ" ಎಂಬ ಬಿರುದುಗಳು ಒಂದೇ ಭಕ್ತಿಹೀನ ಸಂದೇಶವನ್ನು ಕರೆಯುವದಕ್ಕೆ ಬಳಸಿದ ಎರಡು ಬೇರೆ ಬೇರೆ ರೀತಿಗಳಾಗಿರಬಹುದು. ಉತ್ಪಾದಕರು ಕೆಲವು ಸಾರಿ ಒಂದೇ ಉತ್ಪನ್ನವನ್ನು ತಯಾರಿಸಿ ಬಳಿಕ ಅದಕ್ಕೆ ಬೇರೆ ಬೇರೆ ಸರಕು ಹೆಸರುಗಳನ್ನಿಡುತ್ತಾರೆ. ಬಹುಶಃ, ಸೈತಾನನು ಹಲವಾರು ಬೇರೆ

ಹೆಸರುಗಳ ಅಡಿಯಲ್ಲಿ ವಿತರಣೆಯಾಗುತ್ತಿದ್ದ ಒಂದು ಖಂಡನೀಯ ಸಿದ್ಧಾಂತವನ್ನು ಉತ್ಪಾದಿಸಿದ್ದನೆಂದು ತೋರುತ್ತದೆ. ಯಾವದೇ ಪ್ರಮಾಣದಲ್ಲಿ ನೋಡಿದರೂ, ಬಿಳಾಮ್ಯರು ಮತ್ತು ನಿಕೊಲಾಯಿರು ಇಬ್ಬರೂ ದೋಷಪೂರಿತ ಬೋಧನೆಯನ್ನು ಕಲಿಸಿದರು, ದೇವರ ಮಕ್ಕಳನ್ನು ಪಾಪ ಮಾಡುವಂತೆ ಪ್ರೋತ್ಸಾಹಿಸುತ್ತಿದ್ದರು.

ಸುಳ್ಳು ಬೋಧಕರ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದರ ಬಗ್ಗೆ ಹೊಸ ಒಡಂಬಡಿಕೆಯು ಸ್ಪಷ್ಟವಾಗಿರುತ್ತದೆ. ಅವರ ಬೋಧನೆಗಳನ್ನು ಗುರುತಿಟ್ಟು “ಅವರನ್ನು ಬಿಟ್ಟು ತೊಲಗಿ ಹೋಗಿರಿ” ಎಂದು ಪೌಲನು ಹೇಳಿದನು (ರೋಮಾ 16:17). ಆತನು ಕ್ರೈಸ್ತರಿಗೆ ಹೀಗೆ ಹೇಳಿದನು, “ನಮ್ಮಿಂದ ಹೊಂದಿದ ಬೋಧನೆಯನ್ನು [ಪ್ರೇರಿತ ಬೋದನೆ] ಅನುಸರಿಸದೆ ಅಕ್ರಮವಾಗಿ ನಡೆಯುವ ಪ್ರತಿ ಸಹೋದರನಿಗೆ ನೀವು ದೂರವಾಗಿರಬೇಕೆಂದು ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ನಿಮಗೆ ಆಜ್ಞಾಪಿಸುತ್ತೇವೆ” (2 ಥೆಸಲೋನಿಕ 3:6; KJV). ಸುಳ್ಳು ಬೋಧಕನನ್ನು ಪ್ರೋತ್ಸಾಹಿಸುವವನು “ಅವನ ದುಷ್ಕೃತ್ಯಗಳಲ್ಲಿ ಪಾಲುಗಾರನಾಗುತ್ತಾನೆ” ಎಂದು ಸಹ ಯೋಹಾನನು ಹೇಳಿದನು (2 ಯೋಹಾನ 11). ಈ ಯಾವದೇ ಬರಹಗಳು ಪೆರ್ಗಮದಲ್ಲಿ ವಿತರಿಸಲ್ಪಟ್ಟಿದ್ದವೋ ಎಂಬುದು ನಮಗೆ ತಿಳಿಯದು, ಆದರೆ ಈ ಪ್ರಾಥಮಿಕ ಸತ್ಯಗಳನ್ನು ಪ್ರೇರಿತ ಪ್ರವಾದಿಗಳು ಹಾಗೂ ಬೋಧಕರು ನಿಶ್ಚಯವಾಗಿಯೂ ತಿಳಿಯಪಡಿಸಿದ್ದರು.

ಈ ಸ್ಥಿತಿಯು ಇರುವದಾಗಿತ್ತೆಂದು ಊಹಿಸಿಕೊಳ್ಳುವದಾದರೆ, ಪೆರ್ಗಮದಲ್ಲಿ ಕ್ರೈಸ್ತರು ಏಕೆ ಈ ಅಪ್ಪಣೆಗಳಿಗೆ ವಿಧೇಯರಾಗಲಿಲ್ಲ? ಬಹುಶಃ ಸುಳ್ಳು ಬೋಧಕರಿಗೆ ಸಭೆಯಲ್ಲಿ ಸ್ನೇಹಿತರಿದ್ದಿರಬಹುದು, ಮತ್ತು ಅವರನ್ನು ಶಿಸ್ತುಗೊಳಿಸಿದರೆ ಸಭೆಯಲ್ಲಿ ಸಮಸ್ಯೆಗಳಿಗೆ ಕಾರಣವಾಗಬಹುದೆಂದು ನಾಯಕರು ಹೆದರಿದ್ದಿರಬಹುದು. ಒಂದು ವೇಳೆ ತಾವು ದೋಷಪೂರಿತ ಬೋಧನೆಯನ್ನು ಸಹಿಸಿಕೊಳ್ಳಬೇಕಾಗಿ ಬಂದರೂ ಸರಿಯೇ ಹಗೆತನವುಳ್ಳ ಲೋಕದ ಮುಂದೆ ತಮ್ಮಲ್ಲಿ ಒಗ್ಗಟ್ಟನ್ನು ಪ್ರದರ್ಶಿಸುವದು ಅತ್ಯಾವಶ್ಯಕವಾದದ್ದೆಂದು ಸದಸ್ಯರು ಯೋಚಿಸಿರಬಹುದಾಗಿದೆ. ಬಹುಶಃ ಅವರು ಸಮಸ್ಯೆಯನ್ನು ಅದರ ಪಾಡಿಗೆ ಬಿಟ್ಟು ಬಿಡುವದಾದರೆ ತನ್ನಷ್ಟಕ್ಕೆ ತಾನೇ ಹೊರಟು ಹೋಗುವದೆಂದು ಯೋಚಿಸಿಕೊಂಡಿರಬಹುದಾಗಿದೆ. ಅವರ ತರ್ಕವು ಏನೇ ಆಗಿದ್ದರೂ ಸರಿಯೇ, ಸುಳ್ಳು ಬೋಧಕರ ವಿಷಯವಾಗಿ ಅವರಲ್ಲಿದ್ದ “ಬದುಕಿರಿ-ಬದುಕಲು ಬಿಡಿರಿ” ಎಂಬ ತತ್ವವು ಕರ್ತನಿಗೆ ಅಂಗೀಕಾರವಾದದ್ದಾಗಿರಲಿಲ್ಲ.

**ವಚನ 16.** ಯೇಸು ನಾಶನಕರವಾದ ಸಂಭಾವ್ಯತೆಗಳ ಬಗ್ಗೆ ಎಚ್ಚರಿಸುತ್ತಾನೆ: **ಆದದರಿಂದ ದೇವರ ಕಡೆಗೆ ತಿರುಗಿಕೋ, ತಿರುಗಿಕೊಳ್ಳದಿದ್ದರೆ ನಾನು ಬೇಗನೆ ನಿನ್ನ ಬಳಿಗೆ ಬಂದು ನನ್ನ ಬಾಯಕತ್ತಿಯಿಂದ ಅವರ ಮೇಲೆ ಯುದ್ಧಮಾಡುವೆನು.** *ತಕ್ಷಣದಲ್ಲಿಯೇ* ಕ್ರಮವನ್ನು ಕೈಗೊಳ್ಳುವದು ಅಗತ್ಯವಾಗಿತ್ತು. ಪೆರ್ಗಮದ ಕ್ರೈಸ್ತರು ಸುಳ್ಳನ್ನು ಬೋಧಿಸಿ ಅವರನ್ನು ಪರಿವರ್ತನೆ ಮಾಡುವದಕ್ಕೆ ಪ್ರಯತ್ನಿಸುವವರನ್ನು ಎದುರಿಸಿ ನಿಲ್ಲಬೇಕಿತ್ತು (ನೋಡಿರಿ ಯೆಹೆಜ್ಕೇಲ 3:18-21). ಸುಳ್ಳು ಬೋಧಕರು ಬದಲಾಗುವದಕ್ಕೆ ನಿರಾಕರಿಸುವದಾದರೆ, ಅವರನ್ನು ಅವರ ಮಧ್ಯದಿಂದ “ತೆಗೆದುಹಾಕಬೇಕಾಗಿತ್ತು” (1 ಕೊರಿಂಥ 5:13; KJV; ನೋಡಿರಿ 1 ಕೊರಿಂಥ 5:1-12). ಯೇಸುವಿನ ಎಚ್ಚರಿಕೆಯ ಸುಚ್ಯಾರ್ಥವೇನೆಂದರೆ “ನೀವು ಈ ಸಮಸ್ಯೆಯನ್ನು ಶೀಘ್ರದಲ್ಲಿಯೇ ಬಗೆಹರಿಸಿಕೊಳ್ಳಲಿಲ್ಲವಾದರೆ, *ನಾನು* ಬೇಗನೆ ಬಂದು ಆ ವಿಷಯವನ್ನು ನೋಡಿಕೊಳ್ಳುವೆನು - ಮತ್ತು ನಾನು ಅದನ್ನು ಮಾಡುವಾಗ ನಿಮಗೆ ಬೇಸರವಾಗುವದು!” ಈ ಸಂದೇಶವನ್ನು 1 ಕೊರಿಂಥ 4:21ರಿಂದ ಪೌಲನು ಕೊರಿಂಥದ ಸಭೆಗೆ

ನೀಡಿದ ಎಚ್ಚರಿಕೆಯೊಂದಿಗೆ ಹೋಲಿಸಿ ನೋಡಿರಿ.

*ಮುಂಜಾಗ್ರತೆಯ* ಶಿಸ್ತಿನಲ್ಲಿ ಬೋಧನೆ ಮತ್ತು ತರಬೇತಿ ಸೇರಿದ್ದರೆ, *ತಿದ್ದುವ* ಶಿಸ್ತಿನಲ್ಲಿ ತಿದ್ದುವಿಕೆ ಮತ್ತು ದಂಡನೆ ಸೇರಿರುತ್ತದೆ. ನಾವು ಮುಂಜಾಗ್ರತೆಯ ಶಿಸ್ತಿನ ವಿಷಯದಲ್ಲಿ ಕಠಿಣವಾಗಿ ಪರಿಶ್ರಮ ಪಡುವದಾದರೆ, ತಿದ್ದುವಿಕೆ ಶಿಸ್ತಿನ ಅಗತ್ಯತೆಯು ಕಡಿಮೆಯಿರುತ್ತದೆ. ಹೇಗೂ, ನಾವು ಮುಂಜಾಗ್ರತೆಯ ಶಿಸ್ತಿನ ವಿಷಯದಲ್ಲಿ ಎಷ್ಟೇ ಕಠಿಣ ಪರಿಶ್ರಮವನ್ನು ಪಟ್ಟರೂ ಸರಿಯೇ, ಕೆಲವು ಸಾರಿ ತಿದ್ದುವಿಕೆಯ ಶಿಸ್ತಿನ ಅಗತ್ಯತೆಯು ಬರುತ್ತದೆ. ತಿದ್ದುವಿಕೆಯ ಶಿಸ್ತು ಎಂದಿಗೂ ಸುಲಭವಾಗಿರುವದಿಲ್ಲ, ಆದರೆ ಅದು ಸಾರಭೂತವಾದದ್ದು: ಅದು ಸಭೆಯ ಶುದ್ಧತ್ವಕ್ಕೆ ಸಾರಭೂತವಾದದ್ದು, ಸಭೆಯ ಹೆಸರಿಗೆ, ಮತ್ತು ರಕ್ಷಣೆ ಹೊಂದಿದವರನ್ನು ರಕ್ಷಣೆ ಹೊಂದಿದವರಾಗಿಯೇ ಉಳಿಸಿಕೊಳ್ಳಲು ಸಾರಭೂತವಾಗಿರುತ್ತದೆ. (ಸಭಾ ಶಿಸ್ತಿನ ಹಲವಾರು ಕಾರಣಗಳಿಗಾಗಿ 1 ಕೊರಿಂಥ 5:1, 5-7 ನೋಡಿರಿ.)

ಈ ವಾಕ್ಯಭಾಗದಲ್ಲಿ, **ನಾನು ಬೇಗನೆ ಬಂದು** ಎಂಬ ಮಾತುಗಳು ಲೋಕಾಂತ್ಯದ ವೇಳೆ ಸಂಭವಿಸುವ ಎರಡನೆಯ ಬರೋಣವನ್ನು ಸೂಚಿಸುತ್ತಿಲ್ಲ, ಆದರೆ ಬದಲಾಗಿ ಕರ್ತನು ಈ ಜೀವನದಲ್ಲಿ ದುಷ್ಟರನ್ನು ದಂಡಿಸುವದಕ್ಕೆ ಪರಲೋಕದಿಂದ ಕೈಚಾಚುವದನ್ನು ಸೂಚಿಸುತ್ತದೆ (1:7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಕರ್ತನು ತನ್ನ ಭಯ ಹುಟ್ಟಿಸುವ ನ್ಯಾಯತೀರ್ಪಿನ ಕತ್ತಿಯನ್ನು ಹೇಗೆ ಬಳಸಬೇಕೆಂದು ಯೋಜನೆ ಮಾಡಿಕೊಂಡಿರುತ್ತಾನೆಂಬುದನ್ನು ತಿಳಿಸಲಿಲ್ಲ, ಆದರೆ "ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿ ಬೀಳುವದು ಭಯಂಕರವಾದದ್ದು" ಎಂಬುದಂತೂ ನಮಗೆ ಗೊತ್ತಿದೆ (ಇಬ್ರಿಯ 10:31).

ಯೇಸುವಿನ ಎಚ್ಚರಿಕೆಯಲ್ಲಿ "ನಿಮ್ಮಲ್ಲಿ" ಮತ್ತು "ಅವರ" ಎಂಬುದರ ನಡುವಿನ ವಿರುದ್ಧತೆಯನ್ನು ಗಮನಿಸಿರಿ: "ನಾನು ಬೇಗನೆ *ನಿಮ್ಮ* ಬಳಿಗೆ ಬಂದು ನನ್ನ ಬಾಯಿಕತ್ತಿಯಿಂದ *ಅವರ* ಮೇಲೆ ಯುದ್ಧಮಾಡುವೆನು" (ಒತ್ತಿ ಹೇಳಿದ್ದು ನನ್ನದು). **ನಿಮ್ಮ** ಎಂಬ ಪದವು ಬಹುಶಃ ಇಡೀ ಸಭೆಯನ್ನು ಸೂಚಿಸಿರಬಹುದಾಗಿದ್ದರೆ, **ಅವರು** ಎಂಬುದು ಸುಳ್ಳು ಬೋಧನೆಯನ್ನು ಹರಡಿಸುತ್ತಿರುವವರನ್ನು ಸೂಚಿಸಿರಬಹುದಾಗಿದೆ. ಬೇರೆ ಸಾಧ್ಯತೆಗಳು ಇರುತ್ತವೆ. ಉದಾಹರಣೆಗೆ, "ಅವರು" ಎಂಬುದು ಸುಳ್ಳು ಬೋಧಕರನ್ನು ಶಿಕ್ಷಿಸುವದಕ್ಕೆ ನಿರಾಕರಿಸಿದಂಥ ಸಭೆಯಲ್ಲಿನ ಯಾರನ್ನೇ ಆಗಲಿ ಸೂಚಿಸುತ್ತಿರಬಹುದಾಗಿದೆ. ಸುಳ್ಳು ಬೋಧಕರನ್ನು ದಂಡಿಸುವದಕ್ಕೆ ಯೇಸುವು ಬರುತ್ತಿರುವನೆಂಬ ವಾಸ್ತವಾಂಶವು ದಂಡಿಸಲ್ಪಡಲಿದ್ದವರ ವಿಷಯವಾಗಿ ಸಭೆಯಲ್ಲಿ ಕಳಕಳಿಯನ್ನುಂಟು ಮಾಡಿರಬಹುದಾಗಿದೆ (ಗಲಾತ್ಯ 6:1). ಅಲ್ಲದೆ ಸಭೆಯು *ತನ್ನ ಸ್ವಂತ* ಸುರಕ್ಷತೆಯ ಕುರಿತಾಗಿ ಸಹ ಕಳವಳಗೊಂಡಿರಬಹುದಾಗಿದೆ. ಕರ್ತನು ಭಕ್ತಿಹೀನರ ಮೇಲೆ ತನ್ನ ಕತ್ತಿಯನ್ನು ಬೀಸಿದಾಗ, ತಮ್ಮನ್ನು ದೂರವಿಟ್ಟುಕೊಳ್ಳಲು ವಿಫಲರಾದವರು ಅದರಿಂದ ಹಾನಿಗೊಳಗಾಗುವದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ. ಅದೊಂದು ರೀತಿಯಲ್ಲಿ ಯೇಸು ಹೀಗೆ ಹೇಳಿದಂತಿತ್ತು, "ನಾನು ಬೇಗನೆ ಸುಳ್ಳು ಬೋಧಕರ ಮೇಲೆ ಬಾಂಬ್ [ಸ್ಫೋಟಕ] ಎಸೆಯಲಿದ್ದೇನೆ; ಮತ್ತು ನಾನು ಹಾಗೆ ಮಾಡುವ ವೇಳೆ ಅವರು ಈಗಲೂ ನಿಮ್ಮ ಮಧ್ಯದಲ್ಲಿಯೇ ಇರುವದಾದರೆ, ನೀವು ಸಹ ಅವರೊಂದಿಗೆ ನಾಶಗೊಳ್ಳಬೇಕಾಗುವದು!"

**ವಚನ 17.** ಎಲ್ಲಾ ಪತ್ರಗಳಲ್ಲಿರುವಂತೆಯೇ, ವೈಯಕ್ತಿಕ ಅನ್ವಯಿಕೆಯನ್ನು ಮಾಡಿಕೊಳ್ಳುವಂತೆ ಯೇಸುವು ಸಭೆಯ ಪ್ರತಿಯೊಬ್ಬ ಸದಸ್ಯನಿಗೆ ಕರೆ ಕೊಡುತ್ತಾನೆ: **ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ.** ಆಲಿಸಿ ವಿಧೇಯರಾಗುವಂತೆ ಅವರನ್ನು ಪ್ರೋತ್ಸಾಹಿಸಲು, ಯೇಸು ಅಮೂಲ್ಯವಾದ ವಾಗ್ದಾನಗಳನ್ನು

ಮುಂದೆ ಎತ್ತಿ ಹಿಡಿಯುತ್ತಾನೆ: **ಯಾವನು ಜಯಹೊಂದುತ್ತಾನೋ ಅವನಿಗೆ ಬಚ್ಚಿಟ್ಟಿರುವ ಮನ್ನವೆಂಬ ಆಹಾರವನ್ನು ಕೊಡುವೆನು; ಇದಲ್ಲದೆ ಅವನಿಗೆ ಬಿಳಿ ಕಲ್ಲನ್ನೂ ಆ ಕಲ್ಲಿನ ಮೇಲೆ ಕೆತ್ತಿದ ಹೊಸ ಹೆಸರನ್ನೂ ಕೊಡುವೆನು; ಆ ಹೆಸರನ್ನು ಹೊಂದಿದವನಿಗೇ ಹೊರತು ಅದು ಇನ್ನಾರಿಗೂ ತಿಳಿಯದು.**

ವಾಗ್ದಾನದ ಮೊದಲನೆಯ ಭಾಗವು - **ಬಚ್ಚಿಟ್ಟಿರುವ ಮನ್ನ**ದ ಉಲ್ಲೇಖನವು - ಹಳೆಯ ಒಡಂಬಡಿಕೆಯಲ್ಲಿ ತನ್ನ ಬೇರುಗಳನ್ನು ಹೊಂದಿದೆ. ಇಸ್ರಾಯೇಲ್ಯರು ಅರಣ್ಯದಲ್ಲಿ ಪ್ರಯಾಣಿಸುತ್ತಿದ್ದ ವೇಳೆಯಲ್ಲಿ, ದೇವರು ಅವರಿಗೆ ಮನ್ನವನ್ನು ತಿನ್ನಿಸಿದನು (ವಿಮೋಚನಕಾಂಡ 16:13-36; ಕೀರ್ತನೆ 78:24). ಮನ್ನ ನಿಖರವಾಗಿ ಏನಾಗಿತ್ತೆಂಬುದನ್ನು ಬೈಬಲ್ ನಮಗೆ ಹೇಳುವದಿಲ್ಲ, ಆದರೆ ಅದು ದೇವರಿಂದ ಅದ್ಭುತಕರವಾಗಿ ಒದಗಿಸಲ್ಪಟ್ಟದ್ದಾಗಿತ್ತೆಂದು ಮಾತ್ರ ವಿಮೋಚನಕಾಂಡ 16:15ನೇ ವಚನವು ಸ್ಪಷ್ಟಗೊಳಿಸುತ್ತದೆ. "ಮನ್ನ" ಎಂಬುದಕ್ಕೆ ಇಬ್ರಿಯ ಪದವು מָן (*mān*), ಇದು "ಏನೀದು?" ಎಂಬ ಅರ್ಥವನ್ನು ಕೊಡುತ್ತದೆ ಅಥವಾ ಕನಿಷ್ಠ ಸೂಚ್ಯಾರ್ಥವನ್ನು ನೀಡುತ್ತದೆ. ಒಡಂಬಡಿಕೆಯ ಮಂಜೂಷದಲ್ಲಿ ಮನ್ನ ತುಂಬಿದ ಒಂದು ಪಾತ್ರೆಯು ಇಡಲ್ಪಟ್ಟಿತ್ತು, ಈ ಮಂಜೂಷವು ದೇವದರ್ಶನ ಗುಡಾರದ ಅತಿಪರಿಶುದ್ಧ ಸ್ಥಳದಲ್ಲಿಡಲ್ಪಟ್ಟಿದ್ದ ಚಿನ್ನ-ಲೇಪಿತ ವಿಶೇಷ ಪೆಟ್ಟಿಗೆಯಾಗಿತ್ತು. ಮಂಜೂಷದ ಒಳಗಡೆಯಲ್ಲಿ ಮೂರು ವಸ್ತುಗಳಿದ್ದವು: ದಶಾಜ್ಞೆಗಳನ್ನು ಬರೆಯಲಾಗಿದ್ದ ಕಲ್ಲಿನ ಎರಡು ಹಲಗೆಗಳು, ಮನ್ನ ತುಂಬಿದ್ದ ಒಂದು ಪಾತ್ರೆ, ಮತ್ತು ಆರೋನನ ಚಿಗುರಿದ ಕೋಲು (ಇಬ್ರಿಯ 9:4). ಮಂಜೂಷದೊಳಗೆ ಬಚ್ಚಿಡಲ್ಪಟ್ಟಿದ್ದ ಮನ್ನವು ದೇವರು ತನ್ನ ಜನರಿಗೆ ಒದಗಿಸಿದ್ದನು ಮತ್ತು ಅವರಿಗೆ ಒದಗಿಸುವದನ್ನು ಮುಂದುವರೆಸುವನು ಎಂಬುದನ್ನು ನಿರಂತರವಾಗಿ ಜ್ಞಾಪಿಸುವದಾಗಿತ್ತು (ವಿಮೋಚನಕಾಂಡ 16:33, 34; ಇಬ್ರಿಯ 9:4). ಅದೇ ರೀತಿಯಲ್ಲಿಯೇ, ಕರ್ತನು ಪೆರ್ಗಮದಲ್ಲಿರುವ ವಿಧೇಯರಿಗೆ ಒದಗಿಸಿ ಕೊಡುವನು. ಮೂಲ ಮನ್ನವು ದೈಹಿಕ ಆಹಾರವಾಗಿತ್ತಾದ್ದರಿಂದ, "ಬಚ್ಚಿಟ್ಟಿರುವ ಮನ್ನ" ವು ಆತ್ಮದ ಪೋಷಣೆಯನ್ನು ಸೂಚಿಸಬಹುದಾಗಿದೆ. ಅನೇಕ ವ್ಯಾಖ್ಯಾನಕಾರರು ಈ ವಾಗ್ದಾನವನ್ನು "ಜೀವ ಕೊಡುವ ರೊಟ್ಟಿ ನಾನೇ" ಎಂಬ ಯೇಸುವಿನ ಮಾತುಗಳಿಗೆ ಜೋಡಿಸುತ್ತಾರೆ (ಯೋಹಾನ 6:31, 35). "ಬಚ್ಚಿಟ್ಟಿರುವ" ಎಂಬ ಮಾತುಗಳು ಒಬ್ಬ ಕ್ರೈಸ್ತನ ಆಶೀರ್ವಾದಗಳು ಲೋಕದ ದೃಷ್ಟಿಗೆ *ಬಚ್ಚಿಡಲ್ಪಟ್ಟಿವೆ* ಎಂಬುದನ್ನು ಸೂಚಿಸಬಹುದಾಗಿದೆ - ಲೋಕವು ಅವುಗಳನ್ನು ಪಡೆದುಕೊಳ್ಳುವದಿಲ್ಲ, ಗುರುತಿಸುವದಿಲ್ಲ, ಅಥವಾ ಗೌರವಿಸುವದಿಲ್ಲ ಎಂಬ ಅರ್ಥದಲ್ಲಿರಬಹುದಾಗಿದೆ.

ಯೇಸುವಿನ ವಾಗ್ದಾನದ ಎರಡನೆಯ ಭಾಗವು ಅಷ್ಟೇನೂ ಸ್ಪಷ್ಟವಾಗಿರುವದಿಲ್ಲ: **ಇದಲ್ಲದೆ ಅವನಿಗೆ ಬಿಳೀ ಕಲ್ಲನ್ನೂ ಆ ಕಲ್ಲಿನ ಮೇಲೆ ಕೆತ್ತಿದ ಹೊಸ ಹೆಸರನ್ನು ಕೊಡುವೆನು; ಆ ಹೆಸರನ್ನು ಹೊಂದಿದವನಿಗೇ ಹೊರತು ಅದು ಇನ್ನಾರಿಗೂ ತಿಳಿಯದು. ಬಿಳೀ ಕಲ್ಲು** ಕುರಿತ ಉಲ್ಲೇಖನವು ಅನುಮೋದನೆ ಅಥವಾ ಅಸಮ್ಮತಿಯನ್ನು ಸೂಚಿಸುವದಕ್ಕಾಗಿ ಒಂದು ಬಿಳೀ ಹಾಗೂ ಒಂದು ಕಪ್ಪು ಆಗಿರುತ್ತಿದ್ದ ಎರಡು ಬೆಣಚುಕಲ್ಲುಗಳನ್ನು ಬಳಸುತ್ತಿದ್ದ ಪ್ರಾಚೀನ ಪದ್ಧತಿಗೆ ಸಂಬಂಧಿಸಿದ್ದಾಗಿತ್ತು. "ಕಲ್ಲು" ಎಂಬುದನ್ನು ಅನುವಾದಿಸಿರುವ ψῆφος (*psēphos*) ಎಂಬ ಗ್ರೀಕ್ ಪದವು ಇಲ್ಲಿ ಮತ್ತು ಅಪೊಸ್ತಲರ ಕೃತ್ಯಗಳು 26:10ರಲ್ಲಿ ಮಾತ್ರವೇ ಕಂಡು ಬರುತ್ತದೆ. ಅಪೊಸ್ತಲರ ಕೃತ್ಯಗಳು 26:10ರ ಕಡೇ ಭಾಗದ ಅಕ್ಷರಶಃ ಅನುವಾದವು "ನಾನು ಒಂದು ಕಲ್ಲನ್ನು ಹಾಕಿದೆನು [ಸಮ್ಮತಿಯನ್ನು ಸೂಚಿಸುವ]" ಎಂದಾಗುವದು. ಈ ದಿನಗಳಲ್ಲಿ ಸಹ ನಾವು ನಮ್ಮ ಮತಗಳನ್ನು *ಹಾಕುವ* ಕುರಿತು ಮಾತಾಡುತ್ತೇವೆ, ಮತ್ತು "black-balled"

ಎಂಬುದು ಈಗಲೂ ತಿರಸ್ಕರಿಸಲ್ಪಡುವದನ್ನು ಸೂಚಿಸುತ್ತದೆ. ದೇವರ "ಬಿಳೀ ಕಲ್ಲು" ಕೊಡಲ್ಪಡುವದೆಂದರೆ ದೇವರಿಂದ-ಅನುಮೋದನೆ ಹೊಂದುವದು ಎಂದರ್ಥವಾಗಿರುತ್ತದೆ. ಈ ಪದ್ಧತಿಯ ಜೊತೆಯಲ್ಲಿ, ಬೈಬಲ್ ಕಾಲಗಳಲ್ಲಿ ಬಿಳೀ ಕಲ್ಲಗಳು ಇತರ ಕಾರ್ಯಗಳಿಗಾಗಿ ಬಳಸಲ್ಪಡುತ್ತಿದ್ದವು: ಅವುಗಳನ್ನು ಆಮಂತ್ರಿಸುವದಕ್ಕಾಗಿ, ಬಹುಮಾನಗಳಾಗಿ, ಮತ್ತು ಲೆಕ್ಕ ಮಾಡುವಿಕೆಯಲ್ಲಿ ಬಳಸಲ್ಪಡುತ್ತಿದ್ದವು. ಬಿಳೀ ಕಲ್ಲು ಎಂಬುದು ವಜ್ರವಾಗಿತ್ತದೆಂದು ಕೆಲವರು ಭಾವಿಸುತ್ತಾರೆ: ಕಾರ್ಬನ್ ಧೀರ್ಘಕಾಲದ ವರೆಗೆ ಅತ್ಯಂಥ ತೀವ್ರವಾದ ಒತ್ತಡದಲ್ಲಿರುವಾದ ವಜ್ರಗಳು ರೂಪಗೊಳ್ಳುತ್ತವೆ, ಅದೇ ರೀತಿಯಲ್ಲಿಯೇ ಪೆರ್ಗಮದಲ್ಲಿನ ಕ್ರೈಸ್ತರು ತೀಕ್ಷ್ಣವಾದ ಒತ್ತಡದಲ್ಲಿದ್ದರು.

ಕಲ್ಲಿನ ಮೇಲೆ ಬರೆಯಲಾಗಿದ್ದ **ಹೊಸ ಹೆಸರು** ಏನಾಗಿತ್ತು? ಮುಂದಿನ ಅಧ್ಯಾಯದಲ್ಲಿ, ಯೇಸು ತನ್ನ "*ಸ್ವಂತ* ಹೊಸ ಹೆಸರು" ಸೂಚಿಸಿ ಹೇಳುತ್ತಾನೆ (3:12; NRSV; ನೋಡಿರಿ ಫಿಲಿಪ್ಪಿ 2:9, 10). ಹೊಸ ಹೆಸರು ಕೇವಲ "ಯೇಸು" ಎಂಬ ಹೆಸರಷ್ಟೆ ಆಗಿರಬಹುದಾಗಿದೆ "ಯೇಸು" ಎಂಬ ಹೆಸರಿನ ಕುರಿತು ಹೊಸದೇನೂ ಇರುವದಿಲ್ಲವಲ್ಲಾ ಎಂದು ಯಾವನಾದರೂ ಆಕ್ಷೇಪಣೆ ಎತ್ತುವದಾದರೆ, ಆತನನ್ನು ಪ್ರೀತಿಸುವವರಿಗೆ ಮತ್ತು ಪ್ರಶಂಸಿಸುವವರಿಗೆ ಅದು ಎಂದೆಂದಿಗೂ ಹೊಸದು ಆಗಿರುವದೆಂದು ನಾವು ಪ್ರತ್ಯುತ್ತರ ನೀಡುತ್ತೇವೆ.

ನಾನು ಕೇಳಿಸಿಕೊಳ್ಳಲು ಇಷ್ಟಪಡುವ ಒಂದು ಹೆಸರುಂಟು,
ಅದರ ಯೋಗ್ಯತೆ ಕುರಿತು ಹಾಡಲು ಇಷ್ಟ ಪಡುತ್ತೇನೆ;
ಅದು ನನ್ನ ಕಿವಿಗೆ ಸಂಗೀತದಂತಿರುತ್ತದೆ,
ಅದು ಭೂಮಿಯ ಮೇಲೆಯೇ ಅತ್ಯಂಥ ಸವಿಯಾದ ಹೆಸರು.[26]

"ಯೇಸು" ಎಂಬುದು ಇಬ್ರಿಯ ಭಾಷೆಯ "ಯೆಹೋಶುವ" ಎಂಬುದರ ಗ್ರೀಕ್ ರೂಪವಾಗಿರುತ್ತದೆ, ಅದರ ಅಕ್ಷರಶಃ ಅರ್ಥವು "ಯೆಹೋವನು ರಕ್ಷಿಸುವನು" ಎಂದಾಗಿರುತ್ತದೆ. ನಿಜವಾಗಿಯೂ "ತಿಳಿದಿರುವವರು," ಅಂದರೆ "ಯೇಸು" ಹೆಸರನ್ನು ಅರ್ಥಮಾಡಿಕೊಂಡು ಪ್ರಶಂಸಿಸುವವರು ಯಾರೆಂದರೆ ಆತನಿಂದ ರಕ್ಷಿಸಲ್ಪಟ್ಟವರು ಮಾತ್ರವೇ ಆಗಿದ್ದಾರೆ (ನೋಡಿರಿ ಅಪೊಸ್ತಲರ ಕೃತ್ಯಗಳು 4:12).

ಅದಕ್ಕೆ ಸಂಬಂಧಿಸಿದ ಒಂದು ಸಾಧ್ಯತೆಯು ಏನೆಂದರೆ ಹೊಸ ಹೆಸರು "ಕ್ರೈಸ್ತನು" ಎಂದಾಗಿರಬಹುದು (ಯೆಶಾಯ 62:2; ಅಪೊಸ್ತಲರ ಕೃತ್ಯಗಳು 11:26). ಆ ಹೆಸರು 19:13ರಲ್ಲಿ ಪ್ರಸ್ತಾಪಿಸಲಾಗಿರುವ ತಿಳಿಯದ ಹೆಸರು ಆಗಿರಬಹುದು, ಅದು ಪರಲೋಕದಲ್ಲಿ ನಮಗೆ ಪ್ರಕಟಗೊಳಿಸಲ್ಪಡಲಿರುವ ಹೆಸರು ಆಗಿರಬಹುದು. ಇನ್ನು ಕೆಲವು ಸಾಧ್ಯತೆಗಳಿವೆ. ಕ್ರಿಸ್ತನು **ಆ ಹೆಸರನ್ನು ಹೊಂದಿದವನಿಗೇ ಹೊರತು ಅದು ಇನ್ನಾರಿಗೂ ತಿಳಿಯದು** ಎಂದು ಯೇಸು ಹೇಳಿದನು - ಮತ್ತು ನಾವು ಅದನ್ನು ಅಷ್ಟಕ್ಕೇ ಬಿಟ್ಟು ಬಿಡತಕ್ಕದ್ದು.

## ಥುವತ್ತೈರ: ಯೆಜೆಬೇಲಳು ಸದಸ್ಯಳಾಗಿದ್ದ ಸಭೆ (2:18-29)

**18ಥುವತ್ತೈರದಲ್ಲಿರುವ ಸಭೆಯ ದೂತನಿಗೆ ಬರೆ – ಬೆಂಕಿಯ ಉರಿಯಂತಿರುವ ಕಣ್ಣುಗಳೂ ತಾಮ್ರದಂತಿರುವ ಪಾದಗಳೂ ಉಳ್ಳ ದೇವಕುಮಾರನು ಹೇಳುವದೇನಂದರೆ - 19ನಿನ್ನ ಕೃತ್ಯಗಳನ್ನೂ ನಿನ್ನ ಪ್ರೀತಿಯನ್ನೂ ನಂಬಿಕೆಯನ್ನೂ ಪರೋಪಕಾರವನ್ನೂ ತಾಳ್ಮೆಯನ್ನೂ ಬಲ್ಲೆನು; ಇದಲ್ಲದೆ ನಿನ್ನ ಕಡೇ ಕೃತ್ಯಗಳು ನಿನ್ನ ಮೊದಲಿನ ಕೃತ್ಯಗಳಿಗಿಂತ ಹೆಚ್ಚಾದವುಗಳೆಂದು**

ಬಲ್ಲೆನು. [20]ಆದರೆ ನಿನ್ನ ಮೇಲೆ ಒಂದು ತಪ್ಪುಹೊರಿಸಬೇಕಾಗುತ್ತದೆ; ಅದೇನಂದರೆ ಯೆಜೆಬೇಲೆಂಬ ಆ ಹೆಂಗಸು ತನ್ನನ್ನು ಪ್ರವಾದಿನಿಯೆಂದು ಹೇಳಿಕೊಂಡು ಜಾರತ್ವಮಾಡಬಹುದೆಂದೂ ವಿಗ್ರಹಗಳಿಗೆ ನೈವೇದ್ಯ ಮಾಡಿದ ಪದಾರ್ಥಗಳನ್ನು ತಿನ್ನಬಹುದೆಂದೂ ನನ್ನ ದಾಸರಿಗೆ ಬೋಧಿಸುತ್ತಾ ಅವರನ್ನು ತಪ್ಪಾದ ಮಾರ್ಗದಲ್ಲಿ ಸೇರಿಸುತ್ತಿರುವಲ್ಲಿ ನೀನು ಅವಳನ್ನು ತಡೆಯದೆ ಬಿಟ್ಟಿರುವದೇ. [21]ದೇವರ ಕಡೆಗೆ ತಿರುಗಿಕೊಳ್ಳುವದಕ್ಕೆ ನಾನು ಅವಳಿಗೆ ಸಮಯವನ್ನು ಕೊಟ್ಟೆನು; ಆದರೆ ದೇವರ ಕಡೆಗೆ ತಿರುಗಿಕೊಂಡು ತನ್ನ ಜಾರತ್ವವನ್ನು ಬಿಟ್ಟು ಬಿಡುವದಕ್ಕೆ ಅವಳಿಗೆ ಇಷ್ಟವಿಲ್ಲ. [22]ಇಗೋ, ಅವಳು ಹಾಸಿಗೆಯ ಮೇಲೆ ಬಿದ್ದುಕೊಂಡಿರುವಂತೆ ಮಾಡುವೆನು, ಮತ್ತು ಅವಳೊಂದಿಗೆ ವ್ಯಭಿಚಾರಮಾಡುವವರು ತಮ್ಮ ಮನಸ್ಸುಗಳನ್ನು ದೇವರ ಕಡೆಗೆ ತಿರುಗಿಸಿಕೊಂಡು ಅವಳ ಕೃತ್ಯಗಳನ್ನು ಬಿಟ್ಟುಬಿಡದೆ ಹೋದರೆ ಮಹಾ ಸಂಕಟದಲ್ಲಿ ಬೀಳುವಂತೆ ಮಾಡುವೆನು. [23]ಅವಳ ಮಕ್ಕಳನ್ನು ಕೊಂದೇ ಕೊಲ್ಲುವೆನು; ಆಗ ನಾನು ಮನುಷ್ಯರ ಅಂತರಿಂದ್ರಿಯವನ್ನೂ ಹೃದಯವನ್ನೂ ಪರೀಕ್ಷಿಸುವವನಾಗಿದ್ದೇನೆಂಬದು ಎಲ್ಲಾ ಸಭೆಗಳಿಗೆ ಗೊತ್ತಾಗುವದು. ನಿಮ್ಮಲ್ಲಿ ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುವೆನು. [24]ಆದರೆ ಥುವತ್ತೈರದಲ್ಲಿರುವ ಉಳಿದವರಿಗೆ, ಅಂದರೆ ಅಗಾಧ ಬೋಧೆಯೆಂದು ಹೇಳಿಸಿಕೊಂಡಿರುವ ಸೈತಾನನಿಂದ ಪ್ರೇರಿತವಾದ ದುರ್ಬೋಧನೆಯನ್ನು ನಿಮ್ಮಲ್ಲಿ ಯಾರಾರು ತಿಳಿಯದೆಯೂ ಅವಲಂಬಿಸದೆಯೂ ಇರುತ್ತಾರೋ ಅವರಿಗೆ ಹೇಳುವದೇನಂದರೆ - [25]ನಿಮಗಿರುವದನ್ನು ನಾನು ಬರುವ ತನಕ ಬಿಗಿಯಾಗಿ ಹಿಡಿದುಕೊಂಡಿರಬೇಕೆಂಬ ಅಪ್ಪಣೆಯನ್ನೇ ಹೊರತು ಮತ್ತೊಂದು ಭಾರವನ್ನು ನಿಮ್ಮ ಮೇಲೆ ಹಾಕುವದಿಲ್ಲವೆಂಬದೇ. [26]ಯಾವನು ಜಯಶಾಲಿಯಾಗಿದ್ದು ನನಗೆ ಮೆಚ್ಚಿಕೆಯಾದ ಕೃತ್ಯಗಳನ್ನು ಕಡೇವರೆಗೂ ನಡಿಸುತ್ತಾನೋ ಅವನಿಗೆ ನಾನು ನನ್ನ ತಂದೆಯಿಂದ ಹೊಂದಿದ ಅಧಿಕಾರದಂತೆ ಜನಾಂಗಗಳ ಮೇಲೆ ಅಧಿಕಾರವನ್ನು ಕೊಡುವೆನು. [27]ಅವನು ಕಬ್ಬಿಣದ ಕೋಲಿನಿಂದ ಅವರನ್ನು ಆಳುವನು; ಮಣ್ಣಿನ ಮಡಿಕೆಗಳು ಒಡೆಯುವಂತೆ ಅವರ ಬಲ ಮುರಿದು ಹೋಗುವದು. [28]ಇದಲ್ಲದೆ ಉದಯಸೂಚಕನಕ್ಷತ್ರವನ್ನು ಅವನಿಗೆ ಕೊಡುವೆನು. [29]ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ.

ಇಲ್ಲಿಯ ತನಕ ಈ ಅಧ್ಯಾಯದಲ್ಲಿ, ಯೇಸುವು ಆಸ್ಯ ಸೀಮೆಯಲ್ಲಿರುವ ಮೂರು ಅತ್ಯಂಥ ಪ್ರಧಾನ ಪಟ್ಟಣಗಳಲ್ಲಿದ್ದ ಸಭೆಗಳನ್ನು ಸಂಬೋಧಿಸಿ ಮಾತಾಡಿದನು: ಎಫೆಸ, ಸ್ಮುರ್ನ, ಮತ್ತು ಪೆರ್ಗಮ. ಪೆರ್ಗಮದಿಂದ ಪ್ರಯಾಣಿಕನೊಬ್ಬನು ಮುಂದಕ್ಕೆ ಥುವತ್ತೈರವನ್ನು ತಲುಪುವ ವರೆಗೂ ಆಗ್ನೇಯ ದಿಕ್ಕಿನೆಡೆಗಿರುವ ಒಳನಾಡಿನಲ್ಲಿ ಸಾಗುವವನಾಗಿದ್ದನು. ಥುವತ್ತೈರವು ಸ್ವಲ್ಪ ಐಶ್ವರ್ಯವುಳ್ಳ ಪಟ್ಟಣವಾಗಿತ್ತು, ಆದರೆ ಆದಿ ಸಭೆಯ ದಿನಗಳಲ್ಲಿ, ಬಹಳಷ್ಟು ಮಂದಿ ಈ ಪಟ್ಟಣವನ್ನು ಪೆರ್ಗಮ ಹಾಗೂ ಸಾರ್ದಿಸ್ ನಗರಗಳ ನಡುವಿನ ಒಂದು ವಿಶ್ರಾಂತಿಯ ನಿಲ್ದಾನ ಮಾತ್ರವೇ ಆಗಿದ್ದು ಮಹತ್ವವಿಲ್ಲದ್ದೆಂದು ಭಾವಿಸಿದ್ದರು. ಅದು ಆಸ್ಯ ಸೀಮೆಯ ಏಳು ಸಭೆಗಳಿದ್ದ ಪಟ್ಟಣಗಳಲ್ಲಿ "ಅಷ್ಟಾಗಿ ಪರಿಚಯವಿಲ್ಲದ, ಅಷ್ಟಾಗಿ ಪ್ರಾಮುಖ್ಯವಲ್ಲದ ಮತ್ತು ಕಡಿಮೆ ಗಮನಾರ್ಹವಾಗಿದ್ದ"[27] ಪಟ್ಟಣವಾಗಿತ್ತು. ಇಂದು ಥುವತ್ತೈರದಲ್ಲಿ ನೋಡುವದಕ್ಕೆ ಅಷ್ಟೇನೂ ಉಳಿದಿರುವದಿಲ್ಲ - ಕೇವಲ ಕೆಲವು ಹಳೇ ಬಂಡೆಗಳು, ಗತಕಾಲದ ಕೆಲವು ಕುಸಿದು ಬೀಳುವಂತಿರುವ ಅವಶೇಷಗಳಷ್ಟೆ ಇರುತ್ತವೆ. ಈ ಒಡೆಯಲ್ಪಟ್ಟ ಕಲ್ಲುಗಳು ಇಂದಿನ-ದಿನದ Akhisar ಎಂಬ ಗ್ರಾಮದ ಮಧ್ಯಭಾಗದಲ್ಲಿನ ಒಂದು ತುಂಡು ಜಮೀನಿನಲ್ಲಿರುತ್ತವೆ.

ಥುವತ್ತೈರವು ಪ್ರಥಮ ಶತಮಾನದ ಲೇಖಕರಿಗೆ ಅಪ್ರಾಮುಖ್ಯವಾಗಿದ್ದಿರಬಹುದು, ಆದರೆ ಅದು ಯೇಸುವಿಗೆ ಪ್ರಾಮುಖ್ಯವಾಗಿತ್ತು. ಎಫೆಸದಲ್ಲಿನ ಸಭೆಗೆ ಬರೆದಿರುವ ಪತ್ರದಲ್ಲಿ ಕೇವಲ

ಏಳು ವಚನಗಳಿರುತ್ತವೆ; ಸ್ಮುರ್ನಕ್ಕೆ ಬರೆದ ಪತ್ರವು ನಾಲ್ಕು ವಚನಗಳನ್ನು; ಪೆರ್ಗಮಕ್ಕೆ ಬರೆದ ಪತ್ರವು ಆರು ವಚನಗಳು ಇರುತ್ತವೆ; ಆದರೆ ಥುವತೈರಗೆ ಬರೆದ ಪತ್ರದಲ್ಲಿ ಹನ್ನೆರಡು ವಚನಗಳಿರುತ್ತವೆ. ಇದು ಎಲ್ಲಾ ಪತ್ರಗಳಲ್ಲಿಯೂ ಅತ್ಯಂಥ ದೀರ್ಘವಾದ ಹಾಗೂ ಉಪದೇಶಗಳಿಂದ ಕೂಡಿದ ಪತ್ರವಾಗಿದೆ. ಯೇಸುವು ಲೋಕದ ಸಕಲ ಜನರಲ್ಲಿಯೂ ಆಸಕ್ತಿಯನ್ನು ಹೊಂದಿದ್ದಾನೆ.

ಆದಿ ಲೇಖಕರು ಥುವತೈರದ ಕುರಿತು ಹೆಚ್ಚಿನದೇನನ್ನೂ ಹೇಳಿರಲಿಕ್ಕೆ ಆಗುತ್ತಿರಲಿಲ್ಲ, ಆದರೆ ಅವರು ಏನು ಹೇಳಿದ್ದಾರೋ ಅದು ಜ್ಞಾನಪ್ರಕಾಶವನ್ನು ಕೊಡುವಂಥದ್ದಾಗಿದೆ. ಥುವತೈರವು ದೊಡ್ಡ ಪಟ್ಟಣವಲ್ಲದಿದ್ದಾಗ್ಯೂ, ಅದು ಒಂದು ವಾಣಿಜ್ಯ ಹಾಗೂ ವ್ಯಾಪಾರದ ಕೇಂದ್ರವಾಗಿತ್ತು. ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ, "ಲೂದ್ಯಳೆಂಬ ಒಬ್ಬ ಸ್ತ್ರೀಯು ಇದ್ದಳು. ಅವಳು ಧೂಮ್ರವರ್ಣದ ವಸ್ತ್ರಗಳನ್ನು ಮಾರುವವಳೂ ಥುವತೈರ ಎಂಬ ಊರಿನವಳೂ" ಆಗಿದ್ದಳು ಎಂಬುದನ್ನು ಓದುತ್ತೇವೆ (ಅಪೊಸ್ತಲರ ಕೃತ್ಯಗಳು 16:14). ಈ ಪಟ್ಟಣವು ಉಣ್ಣೆಯ ಉದ್ಯಮ ಹಾಗೂ ಅದರ ಧೂಮ್ರವರ್ಣದ ಬಣ್ಣಕ್ಕೆ ಪರಿಚಿತವಾಗಿತ್ತು. ಅತ್ಯಂಥ ದುಬಾರಿಯಾದ ಧೂಮ್ರವರ್ಣವನ್ನು ಒಂದು ಅಸ್ಪಷ್ಟವಾದ ಚಿಪ್ಪು ಮೀನಿನಿಂದ ಹನಿ ಹನಿಯಾಗಿ ತೆಗೆಯಲಾಗುತ್ತಿತ್ತು.

ಥುವತೈರವು ವಿಶೇಷವಾಗಿ ಅದರ ವ್ಯಾಪಾರಿಗಳ ಸಂಘಗಳಿಗೆ ಪರಿಚಿತವಾಗಿತ್ತು. ಅಲ್ಲಿರುವ ವ್ಯಾಪಾರಿಗಳ ಸಂಘಗಳು "ಬಹುಶಃ ಪ್ರಾಚೀನ ಜಗತ್ತಿನ ಬೇರೆ ಯಾವದೇ ಪಟ್ಟಣದಲ್ಲಿರುವದಕ್ಕಿಂತಲೂ ಎಷ್ಟೋ ಹೆಚ್ಚು ವಿಸ್ತಾರ ಹಾಗೂ ಸಂಘಟಿತವಾಗಿದ್ದವು."[28] ಸಂಘಗಳನ್ನು ಚರ್ಮದ-ಕೆಲಸಗಾರರಿಗಾಗಿ, ಉಣ್ಣೆಯ ಮತ್ತು ಹತ್ತಿಯ ನೆಯ್ಗೆಗಾರರಿಗಾಗಿ, ಲೋಹದ ಕೆಲಸಗಾರರಿಗಾಗಿ, ಕಂಬಾರರಿಗಾಗಿ, ಬಣ್ಣ ಹಾಕುವವರಿಗಾಗಿ, ವಸ್ತ್ರಗಳ ತಯಾರಕರಿಗಾಗಿ, ರೊಟ್ಟಿ ತಯಾರಕರು, ಮತ್ತು ಇತರ ಎಲ್ಲಾ ವೃತ್ತಿಯವರಿಗಾಗಿ ಸಂಘಟಿಸಲಾಗಿರುತ್ತಿತ್ತು. ಈ ಸಂಘಗಳು ಶಕ್ತಿಶಾಲಿಯಾಗಿದ್ದವು; ಒಬ್ಬ ಮನುಷ್ಯನು ಈ ಸಂಘದ ಸದಸ್ಯನಾಗಿರುವ ಹೊರತು ಆತನಿಗೆ ಉದ್ಯೋಗವನ್ನು ಕಂಡುಕೊಳ್ಳುವದು ಅಸಾಧ್ಯವಾಗಿರುತ್ತಿತ್ತು. ಉದಾಹರಣೆಗೆ, ಆತನು ರೊಟ್ಟಿ ತಯಾರಕರ ಸಂಘಕ್ಕೆ ಸೇರಿದವನಾಗಿರದಿದ್ದರೆ, ಆತನು ಒಬ್ಬ ರೊಟ್ಟಿ ತಯಾರಕನಾಗಿ ಕೆಲಸ ಮಾಡುವದಕ್ಕೆ ಆಗುತ್ತಿರಲಿಲ್ಲ. ಕೆಲವೊಂದು ಅಂಶಗಳಲ್ಲಿ, ಸಂಘಗಳನ್ನು ಅತ್ಯಂಥ ಬಲಿಷ್ಠವಾದ ಕಾರ್ಮಿಕ ಒಕ್ಕೂಟಗಳಿಗೆ ಹೋಲಿಕೆ ಮಾಡಬಹುದಾಗಿದೆ.

ಕ್ರೈಸ್ತರಿಗೆ ಇದ್ದಂಥ ಸಮಸ್ಯೆಯು ಏನೆಂದರೆ "ಪ್ರತಿಯೊಂದು ಸಂಘಕ್ಕೂ ಅದರದ್ದೇ ಆಗಿರುವ ಆಶ್ರಯದಾತ ದೇವರು ಇರುತ್ತಿತ್ತು, ಹಬ್ಬಗಳು, ಮತ್ತು ಕಾಲಕ್ಕನುಗುಣವಾದ ಜಾತ್ರೆಗಳು ಇರುತ್ತಿದ್ದವು, ಅವುಗಳಲ್ಲಿ ಲೈಂಗಿಕತೆಯ ಭಾರಿಮೋಜುಗಳು ಸೇರಿರುತ್ತಿದ್ದವು."[29] ಸಂಘದ ಕೂಟಗಳಲ್ಲಿ ಸಾಮಾನ್ಯವಾಗಿ ವಿಗ್ರಹಕ್ಕೆ ನೈವೇದ್ಯ ಮಾಡಿದ ಪದಾರ್ಥಗಳನ್ನು ತಿನ್ನಲಾಗುತ್ತಿತ್ತು, ಮತ್ತು ಅವುಗಳಲ್ಲಿ ಕೆಲವು ಸಾರಿ ಅನೈತಿಕ ಕ್ರಿಯೆಗಳು ಸಹ ಸೇರಿರುತ್ತಿದ್ದವು. ಇವೆರಡೂ ಪಾಪಗಳು ದೇವರಿಂದ ಖಂಡಿಸಲ್ಪಟ್ಟಿರುತ್ತವೆ ಮತ್ತು ಈಗಲೂ ಖಂಡಿಸಲ್ಪಡುತ್ತವೆ (ವ. 14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಎರಡನೆಯ ಶತಮಾನದ ಹೊತ್ತಿಗೆ, ಕ್ರೈಸ್ತರು ಈ ಸಂಘಗಳಲ್ಲಿ ಸೇರಿರುವದಕ್ಕೆ ಸಾಧ್ಯವಿಲ್ಲ ಎಂಬುದಾಗಿ ಅನೇಕ ಕ್ರೈಸ್ತ ನಾಯಕರು ಬೋಧಿಸಲಾರಂಭಿಸಿದರು - ಆದರೆ ಪ್ರಕಟನೆ ಪುಸ್ತಕವು ಬರೆಯಲ್ಪಡುವ ವೇಳೆಯಲ್ಲಿ, ಕ್ರೈಸ್ತರು ಈಗಲೂ ಸಂದಿಗ್ಧತೆಯೊಂದಿಗೆ ಹೋರಾಟದಲ್ಲಿದ್ದರು.

**ವಚನ 18.** ಪತ್ರವು ಅಭಿವಂದನೆಯೊಂದಿಗೆ ಆರಂಭಗೊಳ್ಳುತ್ತದೆ: **ಥುವತೈರದಲ್ಲಿರುವ**

**ಸಭೆಯ ದೂತನಿಗೆ ಬರೆ** (1:16ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಥುವತೈರದಲ್ಲಿ ಸಭೆಯು ಯಾವಾದ ಸ್ಥಾಪಿಸಲ್ಪಟ್ಟಿತೆಂಬುದು ತಿಳಿದು ಬಂದಿರುವದಿಲ್ಲ. ಲೂದ್ಯಳು ಮತ್ತು ಆಕೆಯ ಮನೆಯವರು ಸ್ವಂತ ಊರಿಗೆ ಹೋದ ಬಳಿಕ ತಮ್ಮ ನಂಬಿಕೆಯ ಕುರಿತು ಹಂಚಿಕೊಂಡಿರಬಹುದು, ಅಥವಾ ಪೌಲನು ಎಫೆಸದಲ್ಲಿರುವ ವೇಳೆಯಲ್ಲಿ ಅದು ಆರಂಭಿಸಲ್ಪಟ್ಟಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 19:10).

ಬಳಿಕ ಯೇಸುವು ಪತ್ರವನ್ನು ಬರೆದವನು ತಾನೇ ಎಂಬ ಪರಿಚಯವನ್ನು ಮಾಡಿಕೊಳ್ಳುವದಕ್ಕೆ ಮೊದಲನೆಯ ಅಧ್ಯಾಯದಲ್ಲಿನ ಪದಗಳನ್ನು ಬಳಕೆ ಮಾಡುತ್ತಾನೆ - ಅದರ ಜೊತೆಯಲ್ಲಿ ಒಂದು ಪ್ರಾಮುಖ್ಯವಾದ ಸಂಗತಿಯನ್ನು ಸೇರ್ಪಡೆಗೊಳಿಸುತ್ತಾನೆ: **ಬೆಂಕಿಯ ಕಣ್ಣುಗಳೂ ತಾಮ್ರದಂತಿರುವ ಪಾದಗಳೂ ಉಳ್ಳ ದೇವಕುಮಾರನು.** ಇಲ್ಲಿ ಹೆಚ್ಚುವರಿಯಾಗಿ ಸೇರಿಸಲ್ಪಟ್ಟಿರುವದೆಂದರೆ "ದೇವಕುಮಾರನು" ಎಂಬ ಪದಗುಚ್ಛವೇ. ಈ ಉಲ್ಲೇಖನದಲ್ಲಿ ಮಾತ್ರವೇ "ದೇವಕುಮಾರನು" ಎಂಬ ಪದವು ಪ್ರಕಟನೆ ಪುಸ್ತಕದಲ್ಲಿ ಏಕೈಕ ಸಾರಿ ಕಾಣಿಸಿಕೊಳ್ಳುವದಾಗಿದೆ. 1ನೇ ಅಧ್ಯಾಯದಲ್ಲಿ "ಮನುಷ್ಯಕುಮಾರನಂತಿರುವ" ವ್ಯಕ್ತಿಯು ಯೇಸುವೇ ಎಂಬ ವಿಷಯದಲ್ಲಿ ಏನಾದರೂ ಸಂಶಯವು ಉಳಿದಿದ್ದಾದಲ್ಲಿ, ಅದು ಈಗ ನಿವಾರಿಸಲ್ಪಡುವದಾಗಿದೆ.

ಯೇಸುವು ತನ್ನ ವಿಷಯವಾಗಿ ಸಭೆಗೆ ಮೂರು ಶಕ್ತಿಶಾಲಿಯಾದ ಸತ್ಯಗಳನ್ನು ಜ್ಞಾಪಕಗೊಳಿಸುತ್ತಾನೆ: (1) ಆತನು ದೋಷಾತೀತನು; ಆತನು **ದೇವಕುಮಾರನು**. (2) ಆತನು ಸರ್ವಜ್ಞನು; ಆತನು **ಬೆಂಕಿಯ ಉರಿಯಂತಿರುವ ಕಣ್ಣುಗಳು** ಉಳ್ಳವನು. ಮುಂದಿನ ವಚನವು "ಬಲ್ಲೆನು" ಎಂಬ ಮಾತುಗಳಿಂದ ಆರಂಭಗೊಳ್ಳುತ್ತದೆ. 23ನೇ ವಚನದಲ್ಲಿ, ಯೇಸು "ನಾನು ಮನುಷ್ಯರ ಅಂತರಿಂದ್ರಿಯವನ್ನೂ ಹೃದಯವನ್ನೂ ಪರೀಕ್ಷಿಸುವವನು" ಎಂಬುದನ್ನು ಒತ್ತಿ ಹೇಳಿದನು. (3) ಆತನು ನ್ಯಾಯವಂತನು; (ಹೊಳಪುಳ್ಳ) **ತಾಮ್ರದಂತಿರುವ ಪಾದಗಳು** ಉಳ್ಳವನು. 1ನೇ ಅಧ್ಯಾಯದಲ್ಲಿ "ಕುಲುಮೆಯಲ್ಲಿ ಕಾಯಿಸಿದ ತಾಮ್ರದಂತೆಯೂ" ಎಂದಿತ್ತು (1:15). ಈ ಉಲ್ಲೇಖನವು ದುಷ್ಟರಿಗೆ ತಪ್ಪಿಸಿಕೊಳ್ಳಲಾಗದೆ ಯೇಸುವಿನಿಂದ ಸಿಕ್ಕುವ ದಂಡನೆಯನ್ನು ಕುರಿತಾಗಿರುತ್ತದೆ. ಪತ್ರದಲ್ಲಿ ಅನಂತರದ ಭಾಗದೊಳಗೆ, ತಾನು ಭಕ್ತಿಹೀನರನ್ನು "ಮಹಾಸಂಕಟದಲ್ಲಿ ಬೀಳುವಂತೆ ಮಾಡುವೆನು" ಎಂದು ಯೇಸು ಹೇಳುತ್ತಾನೆ (ವ. 22). ಪುನಃ, ಆತನು ಪಶ್ಚಾತ್ತಾಪ ಪಡದವರನ್ನು "ವ್ಯಾದಿಯಿಂದ" (2:23) ಕೊಲ್ಲುವೆನೆಂದು ಎಚ್ಚರಿಸುತ್ತಾನೆ.

**ವಚನ 19.** ಯೇಸು ತನ್ನ ಘನಗಾಂಭೀರ್ಯವಾದ ಗುಣಸ್ವಭಾವಗಳು ಏಕೆ ಅವಶ್ಯಕವೆಂಬುದನ್ನು ವಿವರಿಸುವದಕ್ಕೆ ಮುನ್ನ, ಸಭೆಯಲ್ಲಿ ತಾನು ಕಂಡ ಸಕಾರಾತ್ಮಕ ಗುಣಗಳನ್ನು ಶ್ಲಾಘನೆ ಮಾಡುತ್ತಾನೆ: **ನಿನ್ನ ಕೃತ್ಯಗಳನ್ನೂ ನಿನ್ನ ಪ್ರೀತಿಯನ್ನೂ ನಂಬಿಕೆಯನ್ನೂ ಪರೋಪಕಾರವನ್ನೂ ತಾಳ್ಮೆಯನ್ನೂ ಬಲ್ಲೆನು.** ಯೇಸುವು ಬೇರೆ ಯಾವದೇ ಸಭೆಗಿಂತಲೂ ಥುವತೈರದಲ್ಲಿನ ಸಭೆಯಲ್ಲಿ ಶ್ಲಾಘಿಸುವದಕ್ಕೆ ಹೆಚ್ಚು ಸಂಗತಿಗಳನ್ನು ಕಂಡನು:

ಅದೊಂದು *ಕೆಲಸಮಾಡುವ* ಸಭೆಯಾಗಿತ್ತು. ಯೇಸುವು **ನಿನ್ನ ಕೃತ್ಯಗಳನ್ನೂ ಬಲ್ಲೆನು** ಎಂದು ಹೇಳಿದನು. ಥುವತೈರದಲ್ಲಿನ ಸಭೆಯು ಸ್ಫೋಟಕ, ಸಜೀವ ಮತ್ತು ಕಾರ್ಯಸಾಧಕವಾಗಿತ್ತು.

ಅದೊಂದು *ಪ್ರೀತಿಸುವ* ಸಭೆಯಾಗಿತ್ತು. ಯೇಸುವು **ನಿನ್ನ ಪ್ರೀತಿಯನ್ನೂ . . . ಬಲ್ಲೆನು** ಎಂದು ಹೇಳಿದನು. KJVಯಲ್ಲಿ "ದಾನಧರ್ಮ" ಎಂದಿರುತ್ತದೆ, ಆದರೆ ಮೂಲವಾಕ್ಯದಲ್ಲಿ ἀγάπη (*agapē*) ಎಂದಿರುತ್ತದೆ, "ಪ್ರೀತಿ" ಎಂಬುದಕ್ಕೆ ಹೊಸ ಒಡಂಬಡಿಕೆಯ ವಿಶೇಷ

ಪದವಾಗಿದೆ. ಕ್ರೈಸ್ತರು "ಅಣ್ಣತಮ್ಮಂದಿರೆಂದು ಒಬ್ಬರನ್ನೊಬ್ಬರು ಪ್ರೀತಿಸಬೇಕು" (ರೋಮಾ 12:10). ಬಹುಶಃ ಸಂಬೋಧಿಸಲ್ಪಟ್ಟಿರುವ ಏಳು ಸಭೆಗಳೊಳಗೆ ಈ ಸಭೆಯನ್ನು ಮಾತ್ರವೇ ಅದರ ಪ್ರೀತಿಗಾಗಿ ಶ್ಲಾಘಿಸಲಾಗಿದೆ ಎಂಬ ವಾಸ್ತವಾಂಶದಲ್ಲಿ ಸ್ವಲ್ಪ ಮಹತ್ವಪೂರ್ಣತೆಯು ಇರುತ್ತದೆ.

ಅದೊಂದು ಸಹಾಯ ಮಾಡುವ ಸಭೆಯಾಗಿತ್ತು. ಯೇಸುವು ಹೀಗೆ ಹೇಳುತ್ತಾನೆ, **ನಿನ್ನ . . . ಸೇವೆಯನ್ನೂ** (ಪರೋಪಕಾರವನ್ನೂ) **ಬಲ್ಲೆನು.** ಈ ಸಭೆಯ ಪ್ರೀತಿಯು ಕಾರ್ಯರೂಪದ್ದಾಗಿತ್ತು; ಸದಸ್ಯರು ಬೇರೆಯವರಿಗೆ ಸಹಾಯ ಮಾಡುವದಕ್ಕೆ ದಾರಿಗಳನ್ನು ಹುಡುಕಿಕೊಳ್ಳುತ್ತಿದ್ದರು.

ಅದೊಂದು ವಿಶ್ವಾಸಿಸುವ ಸಭೆಯಾಗಿತ್ತು. ಯೇಸು ಹೀಗೆ ಹೇಳಿದನು, **ನಿನ್ನ . . . ನಂಬಿಕೆಯನ್ನೂ ಬಲ್ಲೆನು.** ಅವರು ತಮ್ಮ ಸ್ವಬಲದ ಮೇಲೆ ಅವಲಂಬಿತರಾಗುವದರ ಬದಲಾಗಿ ಕರ್ತನ ಬಲದ ಮೇಲೆ ಅವಲಂಬಿತರಾಗುವದನ್ನು ಕಲಿತುಕೊಂಡಿದ್ದರು.

ಅದೊಂದು *ಅಚಲವಾದ* ಸಭೆಯಾಗಿತ್ತು. ಯೇಸು ಹೀಗೆ ಹೇಳಿದನು, **ನಿನ್ನ . . . ದೃಢನಿಷ್ಠೆಯನ್ನೂ** [ತಾಳ್ಮೆಯನ್ನೂ] **ಬಲ್ಲೆನು.** KJVಯಲ್ಲಿ "ತಾಳ್ಮೆ" ಎಂದಿರುತ್ತದೆ, ಆದರೆ KJVಯಲ್ಲಿ "ತಾಳ್ಮೆ" ಎಂಬ ಪದದ ಅರ್ಥವು ಸಾಮಾನ್ಯವಾಗಿ "ತಾಳ್ಮೆಯಿಂದ ಸಹಿಸಿಕೊಳ್ಳುವಿಕೆ" ಎಂದಾಗಿರುತ್ತದೆ. ಭಕ್ತಿಹೀನ ಸಮಾಜದಿಂದ ಸುತ್ತುವರೆಯಲ್ಪಟ್ಟಿರುವದು ನಿರಾಶದಾಯಕವಾಗಿ ಇದ್ದಿರಬಹುದು, ಆದರೆ ಕ್ರೈಸ್ತರು ಛಲವನ್ನು ಬಿಟ್ಟಿರಲಿಲ್ಲ.

ಅದೊಂದು *ಉತ್ತಮಗೊಳ್ಳುತ್ತಿರುವ* ಸಭೆಯಾಗಿತ್ತು. ಅದು ಸತ್ಕಾರ್ಯಗಳಲ್ಲಿ ವೃದ್ಧಿಯಾಗುತ್ತಿರುವ ಸಭೆಯಾಗಿದೆ ಎಂಬುದು ಯೇಸುವಿನ ಅತ್ಯಂಥ ಗಮನಾರ್ಹವಾದ ಹೇಳಿಕೆಯಾಗಿರುತ್ತದೆ: ಆತನು ಹೀಗೆ ಹೇಳಿದನು, **ಇದಲ್ಲದೆ ನಿನ್ನ ಕಡೇ ಕೃತ್ಯಗಳು ನಿನ್ನ ಮೊದಲಿನ ಕೃತ್ಯಗಳಿಗಿಂತ ಹೆಚ್ಚಾದವುಗಳೆಂದು ಬಲ್ಲೆನು.** ಕಾಲವು ಗತಿಸಿದಂತೆ ಉತ್ಸಾಹವನ್ನು ಕಳೆದುಕೊಂಡು ಹೆಚ್ಚಿನದ್ದರ ಬದಲಾಗಿ ಕಡಿಮೆ ಮಾಡುವದು ಸಾಮಾನ್ಯ ಪ್ರವೃತ್ತಿಯಾಗಿರುತ್ತದೆ, ಆದರೆ ಥುವತ್ತೈರದಲ್ಲಿನ ಸಭೆಯು ಪ್ರತಿ ದಿನವೂ ಕರ್ತನಿಗಾಗಿ ಹೆಚ್ಚಾದದ್ದನ್ನು ಮಾಡುತ್ತಿತ್ತು. ಈ ವಿಷಯದಲ್ಲಿ, ಈ ಸಭೆಯು ಇತರ ಹಲವಾರು ಸಭೆಗಳಿಗೆ ತದ್ವಿರುದ್ಧವಾಗಿತ್ತು - ವಿಶೇಷವಾಗಿ ಸಾರ್ದಿಸಿನಲ್ಲಿರುವ ಸಭೆಗೆ ತದ್ವಿರುದ್ಧವಾಗಿತ್ತು (3:1). James M. Tolleಯು ಹೇಳಿದ ಪ್ರಕಾರ, "ಒಂದು ಸಭೆಯ ಏಕೈಕ ಸುರಕ್ಷತೆಯು ಮುಂದಕ್ಕೆ ಸಾಗುವದರಲ್ಲಿಯೇ ಇರುತ್ತದೆ."[30]

**ವಚನ 20.** ಎಲ್ಲಾ ಸಭೆಗಳ ಪ್ರಕಾರವೇ, ಥುವತ್ತೈರದಲ್ಲಿರುವ ಸಭೆಯಲ್ಲಿ ಕೇವಲ ಬಲವಾದ ಅಂಶಗಳನ್ನಷ್ಟೇ ಹೊಂದಿರಲಿಲ್ಲ, ಆದರೆ ಅದು ಬಲಹೀನತೆಗಳನ್ನು ಸಹ ಹೊಂದಿತ್ತು. ಯೇಸು ಅದರ ಸದ್ಗುಣಗಳ ಬಗ್ಗೆ ಶ್ಲಾಘನೆ ಮಾಡಿದ್ದನು. ಆತನು ಈಗ ಅದರ ದುರ್ಗುಣಗಳನ್ನು ಖಂಡಿಸುತ್ತಾನೆ: **ಆದರೆ ನಿನ್ನ ಮೇಲೆ ಒಂದು ತಪ್ಪು ಹೊರಿಸಬೇಕಾಗುತ್ತದೆ; ಅದೇನಂದರೆ ಯೆಜೆಬೇಲೆಂಬ ಆ ಹೆಂಗಸು ತನ್ನನ್ನು ಪ್ರವಾದಿನಿಯೆಂದು ಹೇಳಿಕೊಂಡು ಜಾರತ್ವಮಾಡಬಹುದೆಂದೂ ವಿಗ್ರಹಗಳಿಗೆ ನೈವೇದ್ಯ ಮಾಡಿದ ಪದಾರ್ಥಗಳನ್ನು ತಿನ್ನಬಹುದೆಂದೂ ನನ್ನ ದಾಸರಿಗೆ ಬೋಧಿಸುತ್ತಾ ಅವರನ್ನು ತಪ್ಪಾದ ಮಾರ್ಗದಲ್ಲಿ ಸೇರಿಸುತ್ತಿರುವಲ್ಲಿ ನೀನು ಅವಳನ್ನು ತಡೆಯದೆ ಬಿಟ್ಟಿರುವದೇ.**

ಸ್ಪಷ್ಟವಾಗಿ ತೋರುವ ಪ್ರಕಾರ, ಥುವತ್ತೈರದಲ್ಲಿನ ಸಭೆಯಲ್ಲಿ ಒಬ್ಬ ಸ್ತ್ರೀ ಸುಳ್ಳು ಬೋಧಕಳು ಇದ್ದಳು. ಕೆಲವರು **ಯೆಜೆಬೇಲ** ಎಂಬ ಹೆಸರು ಕೇವಲ ಕಲಿಸಲ್ಪಟ್ಟಿರುವ ಸುಳ್ಳು ಬೋದನೆಗೆ ಸಂಕೇತವಾಗಿರುತ್ತದೆ ಅಥವಾ ಸುಳ್ಳನ್ನು ಬೋಧಿಸುತ್ತಿದ್ದ ಸಭೆಯಲ್ಲಿನ ಒಂದು

ಭಾಗವನ್ನು ಪ್ರತಿನಿಧಿಸುತ್ತದೆಂದು ಯೋಚಿಸುತ್ತಾರೆ. ಹೇಗೂ, ಅದು ನಿಜವಾಗಿದ್ದಲ್ಲಿ, ಯೇಸುವು ಪೆರ್ಗಮದಲ್ಲಿನ ಸಭೆಯ ವಿಷಯವಾಗಿ ಬಳಸಿದ ರೀತಿಯ ಮಾತುಗಳನ್ನೇ ಇಲ್ಲಿ ಬಳಸಿರುತ್ತಿದ್ದನು: "ಯೆಜೆಬೇಲಳ ಬೋಧನೆಯನ್ನು ಅವಲಂಬಿಸುವವರು ನಿನ್ನಲ್ಲಿ *ಕೆಲವರು* ಇದ್ದಾರೆ" (ನೋಡಿರಿ ವ. 14). ಕ್ರಿಸ್ತನು ಇಲ್ಲಿ ಒಬ್ಬ ವ್ಯಕ್ತಿಯನ್ನು ಸೂಚಿಸಿ ಹೇಳಿರುವ ಸಾಧ್ಯತೆಯು ಅಧಿಕವಾಗಿರುತ್ತದೆ. ಹೇಗೂ, ಆಕೆಯ ಹೆಸರು ವಾಸ್ತವಿಕದಲ್ಲಿ ಯೆಜೆಬೇಲ ಎಂದಿರುವ ಅಸಂಭಾವ್ಯತೆಯಾಗಿರುತ್ತದೆ; ಇಂದು ನಮ್ಮ ಪುತ್ರಿಯರಿಗೆ ಏಕೆ ಆ ಹೆಸರನ್ನು ಇಡುವದಕ್ಕೆ ಇಷ್ಟ ಪಡುವದಿಲ್ಲವೋ ಅದೇ ಕಾರಣಕ್ಕಾಗಿಯೇ ಆಕೆಯ ಹೆತ್ತವರು ಆ ಹೆಸರನ್ನು ಆಕೆಗೆ ಇಡುವದಕ್ಕೆ ಸಾಧ್ಯವಿರಲಿಲ್ಲ. ಬಹುಶಃ ಆಕೆಯು ಹಳೆಯ ಒಡಂಬಡಿಕೆಯಲ್ಲಿರುವ ಕುಖ್ಯಾತ ಈಜಬೇಲಳ ಹೆಜ್ಜೆಜಾಡುಗಳನ್ನು ಅನುಸರಿಸುತ್ತಿದ್ದ ಕಾರಣಕ್ಕಾಗಿ ಯೇಸು ಆಕೆಯನ್ನು ಹಾಗೆ ಕರೆದಿರಬಹುದಾಗಿದೆ.

ಈಜಬೇಲಳು ಒಬ್ಬ ಅನ್ಯಧರ್ಮೀಯ ರಾಜಕುಮಾರಿಯಾಗಿದ್ದು ಇಸ್ರಾಯೇಲ್ಯರ ಅರಸನಾದ ಆಹಾಬನನ್ನು ಮದುವೆಯಾದಳು, ಮತ್ತು ಆತನನ್ನು ವಿಗ್ರಹಾರಾಧನೆಯಲ್ಲಿ ಆಳವಾಗಿ ಕರೆದೊಯ್ದಳು (1 ಅರಸು 16; 18; 19; 21; 2 ಅರಸು 9). ಆಕೆಯು ಸಮಾರ್ಯದಲ್ಲಿ ಬಾಳ್ ದೇವರಿಗೆ ಒಂದು ದೇವಾಲಯವನ್ನು ಕಟ್ಟುವಂತೆ ಆತನ ಮನವೊಲಿಸಿದಳು ಮತ್ತು ತನ್ನ ಸ್ವಂತ ಊಟದ ಮೇಜಿನ ಮುಂದೆ ಅಶೇರನ ನಾನ್ನೂರು ಪ್ರವಾದಿಗಳಿಗೆ ಊಟ ತಿನ್ನಿಸಿದಳು, ಅಶೇರ ಎಂಬುದು ಬಾಳ್ ದೇವರಿಗೆ ಸಮಾನವಾದ ಸ್ತ್ರೀ ದೇವರಾಗಿರುತ್ತದೆ.[31]

ಥುವತೈರದಲ್ಲಿನ ಯೆಜೆಬೇಲಳು ತಾನಂದುಕೊಂಡದ್ದನ್ನು ಸಾಧಿಸುವವಳು ಮತ್ತು ಮನವೊಲಿಸುವವಳು ಆಗಿದ್ದು ತನ್ನನ್ನು **ಪ್ರವಾದಿನಿಯೆಂದು** ಹೇಳಿಕೊಂಡಳೆಂದು ಕಾಣಿಸುತ್ತದೆ. ಸಭೆಯ ಆದಿ ದಿನಗಳಲ್ಲಿ, ಅದ್ಭುತಕರವಾದ ವರಗಳಲ್ಲಿ ಪ್ರವಾದನೆಯು ಒಂದಾಗಿತ್ತು (1 ಕೊರಿಂಥ 12:10). ಈ ಅದ್ಭುತಕರವಾದ ವರಗಳು ಕೇವಲ ತಾತ್ಕಾಲಿಕವಾಗಿದ್ದವು ಮತ್ತು ಹೊಸ ಒಡಂಬಡಿಕೆಯು ಸಂಪೂರ್ಣಗೊಂಡ ವೇಳೆ ನಿಂತು ಹೋದವು.[32] ಪ್ರವಾದನೆಯ ವರವು ಪುರುಷರಿಗೆ ಮಾತ್ರವಲ್ಲದೆ ಸ್ತ್ರೀಯರಿಗೆ ಸಹ ಕೊಡಲ್ಪಟ್ಟಿತ್ತು (ಅಪೊಸ್ತಲರ ಕೃತ್ಯಗಳು 2:17; 1 ಕೊರಿಂಥ 11:5). ಸ್ತ್ರೀಯರು ಈ ವರವನ್ನು ಸಭೆಯ ಸಾರ್ವಜನಿಕ ಕೂಟದಲ್ಲಿ ಬಳಸುವದಕ್ಕೆ ಸಾಧ್ಯವಿರಲಿಲ್ಲ (1 ಕೊರಿಂಥ 14:34), ಆದರೆ ಕೆಲವೊಂದು ಪರಿಸ್ಥಿತಿಗಳ ಅಡಿಯಲ್ಲಿ ಅದನ್ನು ಬಳಸಬಹುದಾಗಿತ್ತು (1 ಕೊರಿಂಥ 11:5). ಹೇಗೂ, ಈ ಸ್ತ್ರೀಯು ನಿಜವಾಗಿಯೂ ಈ ಪ್ರವಾದನಾ ವರವನ್ನು ಹೊಂದಿದ್ದಳೆಂದು ಯೇಸುವು ಹೇಳಲಿಲ್ಲ, ಬದಲಾಗಿ ಆಕೆಯು ತನ್ನನ್ನು ಪ್ರವಾದಿನಿಯೆಂದು *ಹೇಳಿಕೊಂಡಳು*. ಇಂದು, ನಾವು ಆಕೆಯನ್ನು "ಪ್ರವಾದಿನಿಯೆಂದು ಕರೆಯಲ್ಪಡುವವಳು" ಎಂದು ಸೂಚಿಸುವೆವು.

ಗ್ನಾಸ್ಟಿಕ್‌ವಾದಿಗಳ ಹಾಗೆಯೇ (ವ. 9ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಈ ಪ್ರವಾದಿನಿಯು ತನಗೆ "ಆಗಾಧವಾದ ಸಂಗತಿಗಳು" ತಿಳಿದವೆ ಎಂದು, ತನ್ನ ಮೂಲಕ ಮಾತ್ರವೇ ಗಹನವಾದ ಅಂತರ್ದೃಷ್ಟಿಗಳು (ತಿಳುವಳಿಕೆಗಳು) ಲಭ್ಯವಿರುತ್ತವೆ ಎಂದು ಹೇಳಿಕೊಳ್ಳುತ್ತಿದ್ದಳು. ಯೇಸು ಆಕೆಯ ಬೋಧನೆಗಳನ್ನು "ಆಗಾಧ ಬೋಧನೆಯೆಂದು ಹೇಳಿಸಿಕೊಂಡಿರುವ *ಸೈತಾನನಿಂದ ಪ್ರೇರಿತವಾದ* ದುರ್ಬೋಧನೆ" ಎಂದು ಕರೆದನು (ವ. 24; ಒತ್ತಿ ಹೇಳಿದ್ದು ನನ್ನದು). ಏಳು ಪತ್ರಗಳಲ್ಲಿ, ಯೇಸುವು ನಿರಂತರವಾಗಿ ಲೋಕದಲ್ಲಿರುವ ಕೆಟ್ಟದ್ದರ ಹಿಂದೆ ಯಾರಿದ್ದಾರೆಂಬುದನ್ನು "*ಸೈತಾನನ* ಸಭಾಮಂದಿರ" (ವ. 9; 3:9), "*ಸೈತಾನನ* ಸಿಂಹಾಸನ" (ವ. 13), ಮತ್ತು "*ಸೈತಾನನ* ನಿವಾಸ" (ವ. 13) ಎಂಬ ಪದಗುಚ್ಛಗಳ ಮೂಲಕ ಒತ್ತಿ ಹೇಳಿರುತ್ತಾನೆ. "ಆಗಾಧ ಬೋಧನೆಯೆಂದು ಹೇಳಿಸಿಕೊಂಡಿರುವ

ಸೈತಾನನಿಂದ ಪ್ರೇರಿತವಾದ ದುರ್ಬೋಧನೆ" ಎಂಬುದು ಯೆಜೆಬೇಲಳಿಂದ ಬಳಸಿದ ಪದಗುಚ್ಛವೆಂದು ಕೆಲವರು ಯೋಚಿಸುತ್ತಾರೆ. ಆಕೆಯು ಈ ವಿಧವಾಗಿ ಹೇಳಿಕೊಂಡಿರಬಹುದಾಗಿದೆ: "ನಾನು, ಮತ್ತು ನಾನೊಬ್ಬಳೇ ನಿಮ್ಮ ವೈರಿಯನ್ನು ತಿಳಿದುಕೊಳ್ಳುವಂತೆ ಸಹಾಯ ಮಾಡಬಲ್ಲೆನು." ಹೇಗೂ, ಈ ಪದವು ಯೇಸುವಿನ ಮೌಲ್ಯಮಾಪನ ಆಗಿರುವ ಸಾಧ್ಯತೆ ಅಧಿಕವಿರುತ್ತದೆ. ಬಹುಶಃ ಈ ಹೆಂಗಸು ತನಗೆ ಲೋಕದೊಂದಿಗೆ ಕ್ರೈಸ್ತನಿಗಿರುವ ಸಂಬಂಧದ ವಿಷಯವಾಗಿ ಯಾವದೋ ಒಂದು ರೀತಿಯ ನಿಗೂಢ ಪ್ರಕಟನೆ ಉಂಟಾಗಿರುತ್ತದೆಂದು ಹೇಳಿಕೊಂಡಿರಬಹುದು. ಆಕೆಯ ಸಂದೇಶದ ಹೃದಯಭಾಗವನ್ನು ಊಹಿಸಿಕೊಳ್ಳುವದು ಕಷ್ಟಕರವೇನಲ್ಲ: "ನೀವು ನಿಮ್ಮ ಕುಟುಂಬಗಳಿಗೆ ಸಹಾಯವನ್ನು ಒದಗಿಸುವವರಾಗುವಂತೆ ಈ ವ್ಯಾಪಾರ ಸಂಘಗಳ ಭಾಗವಾಗಿರುವ ಅಗತ್ಯವಿರುತ್ತದೆಂದು ದೇವರು ನನಗೆ ಹೇಳಿದ್ದಾನೆ. ವಾಸ್ತವದಲ್ಲಿ, ನೀನು ನಿನ್ನ ವೃತ್ತಿಯಲ್ಲಿ ಯಶಸ್ವಿಗೊಳ್ಳಬೇಕೆಂದು ಆತನು ಇಷ್ಟಪಡುತ್ತಾನೆಂದು ನನಗೆ ಹೇಳಿದ್ದಾನೆ - ಹೀಗೆ ನೀವು ಆತನ ನಂಬಿಗಸ್ತ ಪ್ರವಾದಿನಿಗೆ ಇನ್ನಷ್ಟು ಹೆಚ್ಚು ಕೊಡುವವರಾಗುವಿರಿ!"

ಯೆಜೆಬೇಲಳು ಬಹುಶಃ ತನ್ನ ಪಾಷಂಡ ಬೋಧನೆಯನ್ನು ಒಂದು ಮನೆಯಲ್ಲಿ ಹರಡಿಸಿದಳೆಂದು ತೋರುತ್ತದೆ. ಆಕೆಯು ಒಬ್ಬ ಐಶ್ವರ್ಯವುಳ್ಳ ಮತ್ತು ಪ್ರಭಾವವುಳ್ಳ ಸ್ತ್ರೀಯಾಗಿದ್ದು ಬಾವಿ ಹಿಂಬಾಲಕರನ್ನು ತನ್ನ ಅರಮನೆಯಂತಹ ಮನೆಗೆ ಆಮಂತ್ರಿಸುತ್ತಿದ್ದಿರಬಹುದಾಗಿದೆ. ಬಹುಶಃ ಆಕೆಯು ಹೊಸ ಅನುಯಾಯಿಗಳನ್ನು ಹುಡುಕುತ್ತಾ ಮನೆಯಿಂದ ಮನೆಗೆ ಹೋಗಿರಬಹುದಾಗಿದೆ. ಆಕೆಯು ಅನುಸರಿಸಿದ ವಿಧಾನವು ಏನೇ ಆಗಿದ್ದರೂ ಸರಿಯೇ, ಆಕೆಯು ಹರಡಿಸಿದ ಸಿದ್ಧಾಂತವು ಕ್ರೈಸ್ತರನ್ನು **ಜಾರತ್ವ ಮಾಡುವಂತೆಯೂ ವಿಗ್ರಹಕ್ಕೆ ನೈವೇದ್ಯ ಮಾಡಿದ ಪದಾರ್ಥಗಳನ್ನು ತಿನ್ನುವಂತೆಯೂ** ನಡೆಸಿತು (ವ. 14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಬಿಳಾಮ್ಯರ ಮತ್ತು ನಿಕೊಲಾಯಿತರ ಬೋಧನೆ ಒಂದೇ ಫಲಿತವನ್ನು ಹೊಂದಿತ್ತಾದ್ದರಿಂದ (ವಚನಗಳು 14, 15), ಇದು ಬೇರೆ ಹೆಸರನ್ನು ಹೊಂದಿರುವ ಸೈತಾನನ ಅದೇ ಉತ್ಪನ್ನವಾಗಿರಬಹುದಾಗಿದೆ.

ಬಹುಶಃ ಯೆಜೆಬೇಲಳು ಅನೇಕರಿಗೆ ಕೇಳಿಸಿಕೊಳ್ಳಲು ಇಷ್ಟವಿದ್ದ ಸಂಗತಿಯನ್ನು ಹೊಂದಿದ್ದಳಾದ್ದ ಕಾರಣ ಯಶಸ್ವಿಗೊಂಡಿದ್ದಳೆಂದು ಕಾಣಿಸುತ್ತದೆ. ಇದು ಎಂದೆಂದಿಗೂ ಸತ್ಯವಾಗಿಯೇ ಇರುತ್ತದೆ, ಏನೆಂದರೆ ಕೆಲವರು

> . . . ಸ್ವಸ್ಥಬೋಧನೆಯನ್ನು ಸಹಿಸಿಲಾರದ ಕಾಲವು ಬರುತ್ತದೆ; ಅದರಲ್ಲಿ ಅವರು ತೀಟೇ ಕಿವಿಗಳುಳ್ಳವರಾಗಿ ತಮ್ಮ ದುರಾಶೆಗಳಿಗೆ ಅನುಕೂಲರಾದ ಅನೇಕ ಉಪದೇಶಕರನ್ನು ಇಟ್ಟುಕೊಳ್ಳುವರು. ಅವರು ಸತ್ಯ ಬೋಧನೆಗೆ ಕಿವಿಗೊಡದೆ ಕಲ್ಪನಾಕಥೆಗಳನ್ನು ಕೇಳುವದಕ್ಕೆ ಹೋಗುವರು (2 ತಿಮೊಥೆ 4:3, 4).

ಯೇಸುವು ಯೆಜೆಬೇಲ ಹಾಗೂ ಅವಳ ಹಿಂಬಾಲಕರ ವಿಷಯದಲ್ಲಿ ಕೇವಲ ಬೇಸರಗೊಂಡಿರಲಿಲ್ಲ. ಆಕೆಯು ತನ್ನ ಮೋಹಕ್ಕೊಳಪಡಿಸುವ ಕೃತ್ಯವನ್ನು ಮುಂದುವರೆಸುವಂತೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ವಿಶೇಷವಾಗಿ ಸಭೆಯ ವಿಷಯದಲ್ಲಿ ಬೇಸರಗೊಂಡಿದ್ದನು: **ನೀನು ಅವಳನ್ನು ತಡೆಯದೆ ಬಿಟ್ಟಿರುವದೇ.** ಪ್ರವಾದಿನಿಯೆಂದು ಕರೆಯಿಸಿಕೊಳ್ಳುವವಳ ವಿಷಯದಲ್ಲಿ ಕ್ರಮವನ್ನು ಕೈಕೊಳ್ಳುವ ಬದಲಾಗಿ, ಸಭೆಯ ಸದಸ್ಯರು ತನ್ನ ಸುಳ್ಳು ಸಿದ್ಧಾಂತವನ್ನು ಹರಡಿಸುವಂತೆ ಆಕೆಗೆ ಅವಕಾಶವನ್ನು ಕೊಟ್ಟಿದ್ದರು. ಪೌಲನು ಹೀಗೆ ಆಜ್ಞಾಪಿಸಿದ್ದನು, "ಕತ್ತಲೆಗೆ ಸಂಬಂಧವಾದ ಕೃತ್ಯಗಳಿಂಥ ಯಾವ ಪ್ರಯೋಜನವೂ ಬರಲಾರದು; ಅವುಗಳಲ್ಲಿ ಪಾಲುಗಾರರಾಗಿರದೆ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ"

(ಎಫೆಸ 5:11). ಕ್ರೈಸ್ತರು "ಕ್ರೈಸ್ತಸಹೋದರನೆನಿಸಿಕೊಂಡವನು ಜಾರನಾದರೂ . . . ಆಗಿದ್ದ ಪಕ್ಷದಲ್ಲಿ ಅಂಥವನ ಸಂಗಡ ಸಹವಾಸ ಮಾಡಬಾರದು" ಎಂದು ಆತನು ಹೇಳಿದ್ದನು (1 ಕೊರಿಂಥ 5:11).

ಥುವತ್ತೈರದ ಸಭೆಯು ಏಕೆ ರಾಜಿಮಾಡಿಕೊಂಡಿತು ಮತ್ತು ಯೆಜೆಬೇಲ ಹಾಗೂ ಅವಳ ಹಿಂಬಾಲಕರಿಂದ ದೂರವಿಟ್ಟುಕೊಳ್ಳಲಿಲ್ಲ? ಯೆಜೆಬೇಲಳು ಸಭೆಯ ನಾಯಕನೊಬ್ಬನ ಪತ್ನಿಯಾಗಿದ್ದಳೆಂದು ಅಭಿಪ್ರಾಯ ಪಡಲಾಗಿರುತ್ತದೆ. ಈ ನಿಲುವು 18ನೇ ವಚನದಲ್ಲಿನ "ದೂತನು" (ಸಂದೇಶಕನು) ಸಭೆಯ ನಾಯಕರೊಳಗೆ ಒಬ್ಬನಾಗಿದ್ದನೆಂಬ ಊಹೆಯ ಮೇಲೆ ಅವಲಂಬಿತವಾಗಿರುತ್ತದೆ, ಮತ್ತು ಆದಕಾರಣದಿಂದ "ನಿನ್ನ ಹೆಂಗಸು/ಪತ್ನಿ" ಎಂಬುದು ಆ ನಾಯಕನ ಹೆಂಡತಿಯನ್ನು ಸೂಚಿಸುತ್ತದೆ. ಕೆಲವು ಪ್ರಾಚೀನ ಹಸ್ತಪ್ರತಿಗಳಲ್ಲಿ 20ನೇ ವಚನದೊಳಗೆ "ನಿನ್ನ ಹೆಂಗಸು" (γυναῖκά σου, *gunaika sou*) ಎಂದಿರುತ್ತದೆಂಬುದು ಸತ್ಯವಾದದ್ದು, ಇದು ಗ್ರೀಕ್ ವಾಕ್ಯದಲ್ಲಿ "ನಿನ್ನ ಹೆಂಡತಿ" ಎಂದು ಹೇಳುವ ರೀತಿಯಾಗಿರುತ್ತದೆ, ಆದರೆ ಉತ್ತಮವಾದ ಹಸ್ತಪ್ರತಿಗಳಲ್ಲಿ ಈ ರೀತಿಯಾಗಿರುವದಿಲ್ಲ. ಅತ್ಯಂತ ಕನಿಷ್ಠವಾಗಿ ನೋಡುವದಾದರೆ, ಯೆಜೆಬೇಲಳು ತನ್ನನ್ನು ಎದುರು ಹಾಕಿಕೊಳ್ಳುವವರಿಗೆ ಸಮಸ್ಯೆಯನ್ನುಂಟು ಮಾಡಬಲ್ಲ ಒಬ್ಬ ಪ್ರಭಾವಿ ಹೆಂಗಸಾಗಿದ್ದಳು ಎಂಬುದನ್ನು ಒಪ್ಪಿಕೊಳ್ಳುತ್ತಾನೆ.

ಥುವತ್ತೈರದ ಸಭೆಯು ಈ ಸುಳ್ಳು ಬೋಧಕಳನ್ನು ಸಹಿಸಿಕೊಂಡಿತ್ತು, ಯಾಕೆಂದರೆ ಕೊರಿಂಥದ ರೀತಿಯಲ್ಲಿಯೇ ಈ ಸಭೆಯು ತೀರ್ಪುಮಾಡದಿರುವ ಮನೋಭಾವದ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುವದಾಗಿತ್ತು ಎಂಬ ಸಾಧ್ಯತೆ ಸಹ ಇರುತ್ತದೆ (ನೋಡಿರಿ 1 ಕೊರಿಂಥ 5:1, 2). ಈ ಮುಂಚೆ ಹೇಳಿದ ಪ್ರಕಾರ, ಅದರ ಪ್ರೀತಿಗಾಗಿ ಶ್ಲಾಘಿಸಲ್ಪಟ್ಟ ಏಕೈಕ ಸಭೆ ಇದಾಗಿರುತ್ತದೆ. ಬಹುಶಃ ಕೆಲವರಲ್ಲಿ ಪ್ರೀತಿಯು "ಎಲ್ಲಿ ಕ್ಷೋಬೆಯುಂಟಾಗುತ್ತದೋ ಎಂಬ ಭಯದಲ್ಲಿ ತನ್ನ ಮಧ್ಯದೊಳಗೆ ಪಾಪವನ್ನು ಮೌನವಾಗಿ ಅನುಮೋದಿಸುವ ಮಧುರವಾದ ಭಾವಾತಿರೇಕವಾಗಿ ಮಾರ್ಪಟ್ಟಿತ್ತು."[33] ಸುಳ್ಳನ್ನು ಸಹಿಸಿಕೊಳ್ಳಲು ಏನೇ ಕಾರಣವಿದ್ದಾಗ್ಯೂ, ಆ ಕಾರಣಗಳು ಕ್ರಿಸ್ತನಿಗೆ ಅಂಗೀಕೃತವಾಗಿರಲಿಲ್ಲ. ಯೆಜೆಬೇಲಳ ವಿಷಯದಲ್ಲಿ ಕ್ರಮವನ್ನು ಕೈಗೊಳ್ಳುವದು ಸಭೆಯ ಕಾರ್ಯಕ್ರಮಗಳಲ್ಲಿ ಅಗ್ರಸ್ಥಾನದಲ್ಲಿರುವಂಥದ್ದು ಎಂಬುದನ್ನು ಥುವತ್ತೈರದಲ್ಲಿನ ಕ್ರೈಸ್ತರು ತಿಳಿದುಕೊಳ್ಳಬೇಕೆಂಬುದು ಆತನ ಬಯಕೆಯಾಗಿತ್ತು.

**ವಚನ 21.** ಪತ್ರದಲ್ಲಿನ ಮುಂದಿನ ಹೇಳಿಕೆಯು ಹೆಚ್ಚುಕಡಿಮೆ ಒಂದು ಆಘಾತದಂತೆ ಬರುತ್ತದೆ: **ದೇವರ ಕಡೆಗೆ ತಿರುಗಿಕೊಳ್ಳುವದಕ್ಕೆ ನಾನು ಅವಳಿಗೆ ಸಮಯವನ್ನು ಕೊಟ್ಟೆನು.** ಈ ಪದಗಳು ದೇವರಿಗಿರುವ ದೀರ್ಘಶಾಂತಿಯ ಸ್ವಭಾವದಕ್ಕೆ ಪುರಾವೆಯಾಗಿರುತ್ತವೆ. ಯೇಸುವು ಈ ಭಕ್ತಿಹೀನ ಸ್ತ್ರೀಗೆ ಪಶ್ಚಾತ್ತಾಪ ಪಟ್ಟು ತನ್ನ ದಾರಿಗಳನ್ನು ಬದಲಾಯಿಸಿಕೊಳ್ಳುವದಕ್ಕೆ ಎಲ್ಲಾ ಅವಕಾಶಗಳನ್ನು ಕೊಟ್ಟನು (ನೋಡಿರಿ 2 ಪೇತ್ರ 3:9). ದುರಾದೃಷ್ಟಕರವಾಗಿ, ಕರ್ತನು ಜನರಿಗೆ ಪಶ್ಚಾತ್ತಾಪ ಪಡುವದಕ್ಕೆ ಸಮಯವನ್ನು ಕೊಡುವಾಗ, ಕರ್ತನು ಅವರ ಪಾಪದ ಬಗ್ಗೆ ಚಿಂತೆಯಿಲ್ಲದವನೆಂಬುದಕ್ಕೆ ಪುರಾವೆ ಎಂದು ಕೆಲವರು ಅರ್ಥನಿರೂಪಣೆ ಮಾಡುತ್ತಾರೆ. ಯೆಜೆಬೇಲಳಿಗೆ ಪಶ್ಚಾತ್ತಾಪ ಪಡುವದಕ್ಕೆ ಸದವಕಾಶವು ಕೊಡಲ್ಪಟ್ಟಿತ್ತಾದರೂ, ಯೇಸು ಹೀಗೆ ಹೇಳಿದನು, **ಆದರೆ ದೇವರ ಕಡೆಗೆ ತಿರುಗಿಕೊಂಡು ತನ್ನ ಜಾರತ್ವವನ್ನು ಬಿಟ್ಟು ಬಿಡುವದಕ್ಕೆ ಅವಳಿಗೆ ಇಷ್ಟವಿಲ್ಲ.** RSVಯಲ್ಲಿ "ಆಕೆಯು ಪಶ್ಚಾತ್ತಾಪ ಪಡುವದಕ್ಕೆ ನಿರಾಕರಿಸಿದಳು" ಎಂದಿರುತ್ತದೆ.

**ವಚನ 22.** ಸಭೆಯು ಯೆಜೆಬೇಲಳ ದುರಹಂಕಾರವನ್ನು ಸಹಿಸಿಕೊಂಡಿತ್ತು, ಆದರೆ ಯೇಸು ಸಹಿಸಿಕೊಳ್ಳುವವನಾಗಿರಲಿಲ್ಲ. ಆತನು ಹೀಗೆ ವಾಗ್ದಾನ ಮಾಡುತ್ತಾನೆ, **ಇಗೋ, ಅವಳು**

[ರೋಗದ] **ಹಾಸಿಗೆಯ ಮೇಲೆ ಬಿದ್ದುಕೊಂಡಿರುವಂತೆ ಮಾಡುವೆನು.** NASBಯಲ್ಲಿ "ರೋಗದ" ಎಂಬ ಪದಗಳು ಇಟಾಲಿಕ್‌ನಲ್ಲಿದ್ದು ಅವುಗಳು ಅನುವಾದಕರಿಂದ ಸೇರ್ಪಡೆಗೊಳಿಸಲ್ಪಟ್ಟಿರುತ್ತವೆ ಎಂದು ಸೂಚಿಸುವದಾಗಿದೆ. ಮೂಲವಾಕ್ಯದಲ್ಲಿ ಕೇವಲ **ಹಾಸಿಗೆಯ** ಎಂದಷ್ಟೆ ಇರುತ್ತದೆ (ನೋಡಿರಿ KJV), ಆದರೆ ಈ ಪದವು "ಮಹಾ ಸಂಕಟ" ಎಂಬುದರೊಂದಿಗೆ ಸಮಾನಾರ್ಥದಲ್ಲಿರುವ ಕಾರಣದಿಂದ, ಇಲ್ಲಿ ಒಂದು ವಿಧವಾದ "ಸಂಕಟದ ಹಾಸಿಗೆ" ಎಂಬ ತಾತ್ಪರ್ಯವಿರುತ್ತದೆ. ಯೆಜೆಬೇಲಳು ಬಾಧೆಯನ್ನು ಅನುಭವಿಸುವದು ಮಾತ್ರವೇ ಅಲ್ಲ, ಆದರೆ **ಅವಳೊಂದಿಗೆ ವ್ಯಭಿಚಾರಮಾಡುವವರು** ಸಹ ಬಾಧೆಯನ್ನನುಭವಿಸುವರು. 20ನೇ ವಚನದಲ್ಲಿ, "ಜಾರತ್ವ" ಎಂಬುದು ದೈಹಿಕವಾದ ಲೈಂಗಿಕ ಪಾಪಗಳನ್ನು ಸೂಚಿಸುತ್ತದೆಂದು, ಆದರೆ 22ನೇ ವಚನದಲ್ಲಿ "ಆಕೆಯೊಂದಿಗೆ ವ್ಯಭಿಚಾರಮಾಡುವವರು" ಎಂಬುದು "ಅನ್ಯಧರ್ಮಿಯ ಕೊಂಡಾಟಗಳಲ್ಲಿ ಪಾಲ್ಗೊಳ್ಳುವ ಮೂಲಕ ದೇವರಿಗೆ ಅಪನಂಬಿಗಸ್ತರಾಗಿರುವದಕ್ಕೆ ಆಕೆಯೊಂದಿಗೆ ಸೇರಿಕೊಳ್ಳುವದು" - ಅಂದರೆ, *ಆತ್ಮೀಕವಾದ* ವ್ಯಭಿಚಾರ ಮಾಡುವದು - ಎಂದರ್ಥವಾಗುತ್ತದೆಂದು ಕೆಲವು ಪಂಡಿತರು ಅಭಿಪ್ರಾಯ ಪಡುತ್ತಾರೆ. ಇದೊಂದು ಚಿಕ್ಕ ಪರಿಣಾಮದ ವಿಚಾರವಾಗಿರುತ್ತದೆ. ಒಂದು ಅನ್ಯಧರ್ಮಿಯ ಪಟ್ಟಣದಲ್ಲಿ, ಆತ್ಮೀಕ ವ್ಯಭಿಚಾರದಲ್ಲಿ ಸಾಮಾನ್ಯವಾಗಿ ದೈಹಿಕ ವ್ಯಭಿಚಾರವು ಸೇರಿರುತ್ತಿತ್ತು. ದೈಹಿಕ ಮತ್ತು ಆತ್ಮೀಕ ಎರಡೂ ವ್ಯಬಿಚಾರಿಗಳಿಬ್ಬರನ್ನೂ **ದೇವರ ಕಡೆಗೆ ತಿರುಗಿಕೊಂಡು ಅವಳ ಕೃತ್ಯಗಳನ್ನು ಬಿಟ್ಟುಬಿಡದೆ ಹೋದರೆ ಮಹಾ ಸಂಕಟದಲ್ಲಿ** ಹಾಕಲ್ಪಡುವರು.

ಈ ಎಚ್ಚರಿಕೆಯಲ್ಲಿ, ಯೇಸು ಶಬ್ದಾಡಂಬರವನ್ನು ಬಳಸುತ್ತಾನೆ: ಯೆಜೆಬೇಲಳು ಕ್ರೈಸ್ತರು ಮರಳುಗೊಳಿಸಿ ಜಾರತ್ವದ ಹಾಸಿಗೆಗೆ ಕರೆದೊಯ್ದಿದ್ದಳು; ಯೇಸು ಆಕೆಯನ್ನು ಮತ್ತು ಆಕೆಯ ಹಿಂಬಾಲಕರನ್ನು ಸಂಕಟದ ಹಾಸಿಗೆಯಲ್ಲಿ ಹಾಕುವವನಾಗಿದ್ದನು. ಹೇಗೂ, ಅರ್ಹತೆಯು **ದೇವರ ಕಡೆಗೆ ತಿರುಗಿಕೊಳ್ಳದೆ ಹೋದರೆ** ಎಂದಿರುವದನ್ನು ಗಮನಿಸಿರಿ. ನಮ್ಮ ಕೃಪೆಯುಳ್ಳ ಕರ್ತನು ಯಾವಾಗಲೂ ಆ ಅನುಗ್ರಹವನ್ನು ಸೇರ್ಪಡೆಗೊಳಿಸುತ್ತಾನೆ. ಅರ್ಹತೆಯು "ಅವರ ಕೃತ್ಯಗಳನ್ನು" ಬಿಟ್ಟುಬಿಡದೆ ಎಂಬುದಕ್ಕೆ ಬದಲಾಗಿ "ಅವಳ ಕೃತ್ಯಗಳನ್ನು" ಬಿಟ್ಟುಬಿಡದೆ ಹೋದರೆ ಎಂದಿರುವದು ಅಸಹಜವಾದದ್ದು. ಅವರು ಯೆಜೆಬೇಲಳ ಜೊತೆಯಾಗಿ ಸಾಗಿದ್ದರಾದ್ದರಿಂದ, *ಆಕೆಯ* ಕೃತ್ಯಗಳಿಗೆಲ್ಲಾ *ಅವರನ್ನು* ಹೊಣೆಗಾರರನ್ನಾಗಿ ಮಾಡುತ್ತಿದ್ದಾನೆ.

**ವಚನ 23.** ಯೇಸುವು ಮುಂದುವರೆದು ಹೀಗೆ ಹೇಳುತ್ತಾನೆ, **ಅವಳ ಮಕ್ಕಳನ್ನು** [ವ್ಯಾಧಿಯಿಂದ] **ಕೊಂದೇ ಕೊಲ್ಲುವೆನು. ಅವಳ ಮಕ್ಕಳು** ಎಂಬುದು ಯೆಜೆಬೇಲಳ ಬೋಧನೆಯನ್ನು ಒಪ್ಪಿಕೊಂಡಿದ್ದ ಆಕೆಯ ಆತ್ಮೀಕ ಮಕ್ಕಳನ್ನು ಸೂಚಿಸುತ್ತದೆ. ಅದೇ ರೀತಿಯಲ್ಲಿಯೇ, ಪೌಲನು ತನ್ನ ಮೂಲಕ ಪರಿವರ್ತನೆಗೊಂಡವರನ್ನು ತನ್ನ ಮಕ್ಕಳೆಂದು ಕರೆದನು (ನೋಡಿರಿ 1 ಕೊರಿಂಥ 4:14; 1 ತಿಮೊಥೆ 1:18). ಕೆಲವರು "ಅವಳ ಮಕ್ಕಳು" ಎಂದರೆ ಯೆಜೆಬೇಲಳ ಪ್ರಭಾವಕ್ಕೆ ಒಳಗಾಗದೆ ಇದ್ದ ಆದರೆ ಆಕೆಯ ಸಂದೇಶವನ್ನು ಹರಡಿಸುತ್ತಿದ್ದವರನ್ನು ಸೂಚಿಸುತ್ತದೆಂದು ಅಭಿಪ್ರಾಯ ಪಡುತ್ತಾರೆ.

ಮೂಲ ವಾಕ್ಯದಲ್ಲಿ, ಯೇಸು ಅಕ್ಷರಶಃ ಹೀಗೆ ಹೇಳಿದನು, "ನಾನು ಆಕೆಯ ಮಕ್ಕಳನ್ನು *ಮರಣದಿಂದ* ಕೊಲ್ಲುವೆನು" - ಇದು "ಖಚಿತವಾದ ಹಾಗೂ ಭಯಂಕರವಾದ ಮರಣದಿಂದ ಕೊಲ್ಲುವದು" ಎಂಬುದಕ್ಕೆ ಇಬ್ರಿಯ ಭಾಷೆಯಲ್ಲಿನ ಒಂದು ಸಾಂಕೇತಿಕ ಭಾಷೆಯಾಗಿತ್ತು. ಯೆಜೆಬೇಲಳ ಹಿಂಬಾಲಕರನ್ನು ವ್ಯಾಧಿಯಿಂದ ಕೊಲ್ಲಲ್ಪಡುವಂತೆ ರೋಗ ಮತ್ತು ಸಂಕಟದ ಹಾಸಿಗೆಯಲ್ಲಿ ಹಾಕುವೆನು ಎಂದು ಯಾವ ಅರ್ಥದಲ್ಲಿ ಹೇಳಿದನೆಂಬುದು ನಮಗೆ ತಿಳಿಯದು.

ಬಹುಶಃ ಅವರಿಗೆ ಬುದ್ಧಿ ಬರುವಂತೆ ಮಾಡುವದಕ್ಕೆ ಯೇಸು *ದೈಹಿಕವಾದ* ರೋಗವನ್ನು ಮತ್ತು ಮರಣವನ್ನು ಬಳಸಲಿದ್ದನು. ಬಹುಶಃ ಇಲ್ಲಿ *ಆತ್ಮೀಕ* ರೋಗ ಹಾಗೂ ಮರಣ ಎಂದರ್ಥದಲ್ಲಿ ಹೇಳಲಾಗಿರಬಹುದು. ಯೇಸು ಯಾವ ಅರ್ಥದಲ್ಲಿ ಹೇಳಿದ್ದರೂ ಸರಿಯೇ, ಅದು ಪಶ್ಚಾತ್ತಾಪ ಪಡದಿರುವವರಿಗೆ ಒಂದು ಸಂತೋಷದ ಗಳಿಗೆಯಾಗಿ ಇರುವದಾಗಿರಲಿಲ್ಲ.

ಪಶ್ಚಾತ್ತಾಪ ಪಡದವರನ್ನು ಯೇಸುವು ದಂಡಿಸುವದಕ್ಕೆ ಒಂದು ಕಾರಣವು ಏನೆಂದರೆ ತನ್ನ ಜನರಿಗೆ ಕಲಿಯುವದಕ್ಕೆ ಒಂದು ಪಾಠವಾಗಲೆಂಬುದೇ ಆಗಿತ್ತು: **ಆಗ ನಾನು ಅಂತರಿಂದ್ರಿಯವನ್ನೂ ಹೃದಯವನ್ನೂ ಪರೀಕ್ಷಿಸುವವನಾಗಿದ್ದೇನೆಂಬುದು ಎಲ್ಲಾ ಸಭೆಗಳಿಗೆ ಗೊತ್ತಾಗುವದು. ಅಂತರಿಂದ್ರಿಯವನ್ನೂ** ಎಂಬದನ್ನು ಅನುವಾದಿಸಿರುವ ಗ್ರೀಕ್ ಪದ νεφρός (*nephros*) ಎಂಬುದು ಅಕ್ಷರಶಃ "ಮೂತ್ರಪಿಂಡಗಳು" ಎಂದಾಗಿರುತ್ತದೆ. ಇಂದು, ನಾವು "ಹೃದಯವನ್ನು" ಮಮತೆಯ ಕೇಂದ್ರಭಾಗವೆಂದು ಹೇಳುತ್ತೇವೆ, ಹಾಗಿದ್ದರೂ ಆ ಮಮತೆಯ ಮೂಲವು ರಕ್ತವನ್ನು ಸರಬರಾಜು ಮಾಡುವ ದೈಹಿಕ ಹೃದಯವಲ್ಲ. ವರ್ಷಗಳ ಹಿಂದೆ, ಮನುಷ್ಯರು "ಮೂತ್ರಪಿಂಡ"ವು ಚಿತ್ತದ ಕೇಂದ್ರಭಾಗವಾಗಿದೆ ಎಂದು ಮಾತಾಡುತ್ತಿದ್ದರು, ಹಾಗಿದ್ದರೂ ಅದು ಆ ಅಂಗದ ವಿಷಯದಲ್ಲಿ ಅಕ್ಷರಶಃ ಆಗಿರಲಿಲ್ಲ. ಮಹಾನ್-ಹೃದಯ ಶೋಧಕನಾಗಿ, ಕರ್ತನು ಯಾರು ಪಶ್ಚಾತ್ತಾಪ ಪಡುವರು ಮತ್ತು ಪಡುವದಿಲ್ಲ ಎಂಬುದನ್ನು ಬಲ್ಲವನಾಗಿದ್ದಾನೆ. ಹೀಗೆ ಪ್ರತಿಯೊಬ್ಬ ವ್ಯಕ್ತಿಯು ತನಗೆ ಯೋಗ್ಯವಾದದ್ದನ್ನು ಸರಿಯಾಗಿ ಹೊಂದಿಕೊಳ್ಳುವನು: **ನಿಮ್ಮಲ್ಲಿ ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕ ಹಾಗೆ ಪ್ರತಿಫಲವ ಕೊಡುವೆನು** (ನೋಡಿರಿ ಮತ್ತಾಯ 16:27; ರೋಮಾ 2:6; 2 ಕೊರಿಂಥ 5:10; 11:15; ಪ್ರಕಟನೆ 20:11, 12).

**ವಚನಗಳು 24, 25.** ಪತ್ರದ ಧ್ವನಿಯು ಕಠೋರತೆಯಿಂದ ಕೋಮಲತೆಗೆ ಬದಲಾಗುತ್ತದೆ. ಈ ಮುಂಚೆ ಹೇಳಿದ ಪ್ರಕಾರವೇ, ಬಹುಪಾಲು ಪತ್ರಗಳು ಏಳು ಮೂಲಭೂತ ಘಟಕಗಳಿಂದ ರೂಪಗೊಂಡಿರುತ್ತವಾದರೂ, ಕೆಲವೊಂದು ವ್ಯತ್ಯಾಸಗಳಿರುತ್ತವೆ. ಈ ವಾಕ್ಯಭಾಗವು ಅಂತಹ ಒಂದು ವ್ಯತ್ಯಾಸವಾಗಿರುತ್ತದೆ: ಯೇಸು ಕ್ರಿಸ್ತನು ಸ್ವಲ್ಪ ತಡೆದು ಸಭೆಯಲ್ಲಿದ್ದ "ನಂಬಿಗಸ್ತರಾದ ಸ್ವಲ್ಪ ಜನರ" ಸಂಗಡ ಮಾತಾಡುತ್ತಾನೆ. ಪಶ್ಚಾತ್ತಾಪ ಪಡದಿರುವವರಿಗೆ ಕಾದಿರುವಂಥ ದಂಡನೆಯನ್ನು ಕುರಿತು ಹೇಳಿದ ಬಳಿಕ, ಯೇಸು ಕ್ಲುಪ್ತವಾಗಿ ಹೀಗೆ ಹೇಳುತ್ತಾನೆ,

> ಆದರೆ ಥುವತ್ತೈರದಲ್ಲಿರುವ ಉಳಿದವರಿಗೆ, ಅಂದರೆ ಅಗಾಧ ಬೋಧನೆಯೆಂದು ಹೇಳಿಸಿಕೊಂಡಿರುವ ಸೈತಾನನಿಂದ ಪ್ರೇರಿತವಾದ ದುರ್ಬೋಧನೆಯನ್ನು ನಿಮ್ಮಲ್ಲಿ ಯಾರಾರು ತಿಳಿಯದೆಯೂ ಅವಲಂಬಿಸದೆಯೂ ಇರುತ್ತಾರೋ ಅವರಿಗೆ ಹೇಳುವದೇನಂದರೆ - ನಿಮಗಿರುವದನ್ನು ನಾನು ಬರುವ ತನಕ ಬಿಗಿಯಾಗಿ ಹಿಡಿದುಕೊಂಡಿರಬೇಕೆಂಬ ಅಪ್ಪಣೆಯನ್ನೇ ಹೊರತು ಮತ್ತೊಂದು ಭಾರವನ್ನು ನಿಮ್ಮ ಮೇಲೆ ಹಾಕುವದಿಲ್ಲವೆಂಬದೇ.

ಯೇಸು ಸಭೆಯಲ್ಲಿ ಕೆಲವರನ್ನು ಯೆಜೆಬೇಲ ಹಾಗೂ ಆಕೆಯ ಬೆಂಬಲಿಗರಿಂದ ದೂರವಿಟ್ಟುಕೊಳ್ಳಲು ವಿಫಲರಾಗಿದ್ದಕ್ಕೆ ಹೊಣೆಗಾರರನ್ನಾಗಿ ಮಾಡಿದನೆಂಬುದನ್ನು 20ನೇ ವಚನವು ತೋರಿಸುತ್ತದೆ: "ನೀನು [ಯಾರು] ಅವಳನ್ನು ತಡೆಯದೆ ಬಿಟ್ಟಿರುವದೇ." ಹೇಗೂ, ಆತನು ಮಿಕ್ಕವರನ್ನು ಹೊಣೆಗಾರರನ್ನಾಗಿ ಮಾಡಲಿಲ್ಲ ಎಂಬ ಅನಿಸಿಕೆಯನ್ನು 24ನೇ ವಚನವು ಉಂಟು ಮಾಡುತ್ತದೆ: **ಥುವತ್ತೈರದಲ್ಲಿರುವ ಉಳಿದವರಿಗೆ**. ಮೊದಲ ಗುಂಪಿನವರ ಪ್ರಧಾನ ಸಂಭಾವ್ಯತೆಯೆಂದರೆ, ಸಭೆಯ ಶಿಸ್ತನ್ನು ಚಲಾಯಿಸುವದಕ್ಕೆ ಮುಂದಾಗದೆ ಇದ್ದರೆಂದು ತೋರುವ ಸಭೆಯ ನಾಯಕರೇ ಆಗಿರಬಹುದಾಗಿದೆ. ಎಫೆಸದಲ್ಲಿನ ಸಭೆಯು ಅನೇಕ ವರ್ಷಗಳ ವರೆಗೆ ಹಿರಿಯರನ್ನು ಹೊಂದಿತ್ತು (ಅಪೊಸ್ತಲರ ಕೃತ್ಯಗಳು 20:17, 28); ಥುವತ್ತೈರದ

ಸಭೆಯು ಸಹ ಬಹುಶಃ ಹಿರಿಯರನ್ನು ಹೊಂದಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 14:23). ಹಿರಿಯರಿಗೆ ". . . ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರುವ" ಜವಾಬ್ದಾರಿಕೆಯಿರುತ್ತದೆ (ಅಪೊಸ್ತಲರ ಕೃತ್ಯಗಳು 20:28). ಪೌಲನು ಹಿರಿಯರ ಒಂದು ಗುಂಪಿಗೆ "ನಿಮ್ಮಲ್ಲಿಯೂ ಕೆಲವರು ಎದ್ದು ವ್ಯತ್ಯಾಸ ಬೋಧನೆಗಳನ್ನು ಮಾಡಿ ಯೇಸುವಿನ ಶಿಷ್ಯರನ್ನು ತಮ್ಮ ಹಿಂದಕ್ಕೆ ಎಳಕೊಳ್ಳುವರು" ಎಂಬುದಾಗಿ ಎಚ್ಚರಿಸಿದ್ದನು (ಅಪೊಸ್ತಲರ ಕೃತ್ಯಗಳು 20:30). ಆದ್ದರಿಂದ ಆತನು ಅವರಿಗೆ "ಆದಕಾರಣ . . . ಎಚ್ಚರಿಕೆಯಾಗಿರಿ" ಎಂದು ಬೇಡಿಕೊಂಡಿದ್ದನು (ಅಪೊಸ್ತಲರ ಕೃತ್ಯಗಳು 20:31). ಥುವತ್ತೈರದಲ್ಲಿ ಯಾರು ನಾಯಕರಾಗಿದ್ದರೋ, ಅವರು ತಮ್ಮ ಜವಾಬ್ದಾರಿಯಲ್ಲಿ ವಿಫಲರಾಗಿದ್ದರು. ಸಭೆಯ ಬೇರೆ ಸದಸ್ಯರಿಂದ ತಿದ್ದುವಂತಹ ಸಭಾ ಶಿಸ್ತುಕ್ರಮವನ್ನು ಕೈಕೊಂಡಿರಬಹುದಾಗಿತ್ತಾದರೂ, ಇಲ್ಲಿ ಎರಡು ಅಂಶಗಳನ್ನು ಒತ್ತಿ ಹೇಳತಕ್ಕದ್ದು: (1) ಶಿಸ್ತುಕ್ರಮದ ಅಗತ್ಯತೆಯು ಬರುವಾಗ ದೇವರಿಂದ ನೇಮಿಸಲ್ಪಟ್ಟವರಾಗಿ ಹಿರಿಯರು ಮೊದಲ ಹೆಜ್ಜೆಯನ್ನು ಇಡತಕ್ಕದ್ದು. (2) ಒಬ್ಬ ವ್ಯಕ್ತಿಯ ಸಹವಾಸದಿಂದ ದೂರವಿರುವದನ್ನು ಸಭೆಯ ನಾಯಕರು ವಿರೋಧಿಸುವದಾದರೆ, ಪರಿಣಾಮಕಾರಿಯಾದ ಶಿಸ್ತುಕ್ರಮವನ್ನು ಜರುಗಿಸುವದು ಅತ್ಯಂಥ ಕಷ್ಟಕರವಾಗುತ್ತದೆ.

ಹೇಗೂ, ಎರಡನೆಯ ಗುಂಪಿನಲ್ಲಿ ಯಾರು ಸೇರಿರುತ್ತಾರೆ - ಯೇಸು ಯಾರನ್ನು ಹೊಣೆಗಾರರನ್ನಾಗಿ ಮಾಡ*ಲಿಲ್ಲವೋ* ಅವರು ಯಾರು? ಬಹುಶಃ ಅವರು ಯೆಜೆಬೇಲಳ ತಂಡದಿಂದಾಗುವ ಹಾನಿಯನ್ನು ಗುರುತಿಸಿದವರು ಆದರೆ ವ್ಯಕ್ತಿಗಳಾಗಿ ಏನನ್ನಾದರೂ ಮಾಡುವದಕ್ಕೆ ಅಧಿಕಾರವಿಲ್ಲದೆ ಇದ್ದಂಥ ಸಭೆಯಲ್ಲಿನ ನಂಬಿಗಸ್ತ ಸದಸ್ಯರಾಗಿರಬಹುದಾಗಿದೆ. ಇವರಿಗೆ ಯೇಸುವು ಹೀಗೆ ಹೇಳಿದನು, **ನಿಮಗಿರುವದನ್ನು ನಾನು ಬರುವ ತನಕ ಬಿಗಿಯಾಗಿ ಹಿಡಿದುಕೊಂಡಿರಬೇಕೆಂಬ ಅಪ್ಪಣೆಯನ್ನು ಹೊರತು ಮತ್ತೊಂದು ಭಾರವನ್ನು ನಿಮ್ಮ ಮೇಲೆ ಹಾಕುವದಿಲ್ಲ. ಭಾರ** ಎಂದು ಹೇಳಲ್ಪಟ್ಟಿರುವದು ಬಹುಶಃ ಜವಾಬ್ದಾರಿಗಳನ್ನು ಸೂಚಿಸಬಹುದಾಗಿದೆ. "ಭಾರ" ಏನಾಗಿತ್ತೆಂಬುದರ ವಿಷಯದಲ್ಲಿ ಪ್ರತಿಯೊಬ್ಬ ವ್ಯಾಖ್ಯಾನಕಾರನು ಸಹ ಸ್ವಲ್ಪ ಬೇರೆಯಾದ ಅಭಿಪ್ರಾಯವನ್ನು ಹೊಂದಿರುತ್ತಾನೆ, ಆದರೆ ಯಾವದೋ ಒಂದು ರೀತಿಯಲ್ಲಿ ಇದು ಯೇಸುವಿನ ಚಿತ್ತವನ್ನು ಸೂಚಿಸುವದಾಗಿದೆ ಎಂಬುದನ್ನು ಬಹುತೇಕರು ನಂಬುತ್ತಾರೆ. ಅನೇಕ ಲೇಖಕರು ಇತರ ಎರಡು ವಾಕ್ಯಭಾಗಗಳಲ್ಲಿರುವ "ಭಾರ" ಎಂಬ ಪದವನ್ನು ಗಮನಿಸುವಂತೆ ಕರೆ ನೀಡುತ್ತಾರೆ. ಮತ್ತಾಯ 1:28-30ರಲ್ಲಿ (KJV), "ಭಾರ" ಎಂಬುದು ಕ್ರಿಸ್ತನಿಗೆ ವಿಧೇಯವಾಗುವದನ್ನು ಸೂಚಿಸುತ್ತದೆ. ಅಪೊಸ್ತಲರ ಕೃತ್ಯಗಳು 15:28, 29ರಲ್ಲಿ, "ಭಾರ" ಎಂಬುದು ಕೆಲವೊಂದು ಆಜ್ಞೆಗಳಿಗೆ ವಿಧೇಯರಾಗುವದಕ್ಕೆ ಅನ್ಯಜನಾಂಗದ ಕ್ರೈಸ್ತರಿಗಿರುವ ಜವಾಬ್ದಾರಿಯನ್ನು ಸೂಚಿಸುತ್ತದೆ. ಪ್ರಕಟನೆ 2:24ರಲ್ಲಿ, ಸನ್ನಿವೇಶದಲ್ಲಿ ಕ್ರಿಸ್ತನ ಹೇಳಿಕೆಯು ಈ ಅರ್ಥವನ್ನು ಕೊಡುವಂತೆ ತೋರುತ್ತದೆ, "ಈ ಸಮಸ್ಯೆಯನ್ನು ಬಗೆಹರಿಸುವ ಭಾರವನ್ನು ನಾನು ನಿಮ್ಮ ಬಾಹುಗಳ ಮೇಲೆ ಹಾಕುವದಿಲ್ಲ; ನೀವು ನಿಮ್ಮಿಂದ ಸಾಧ್ಯವಾಗಿದ್ದನ್ನು ಮಾಡಿರುವಿರಿ. ಈಗ ನಿಮ್ಮ ಜವಾಬ್ದಾರಿಯು ನಾನು ನಿಮಗೆ ಕೊಟ್ಟಿರುವ ಆಶೀರ್ವಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ನಂಬಿಗಸ್ತರಾಗಿ ಉಳಿಯುವದೇ."

**ವಚನ 26.** ಯೇಸುವು ನೀಡಿದ ಕರೆಯು ಥುವತ್ತೈರದಲ್ಲಿರುವ ಕ್ರೈಸ್ತರಿಗೆ ಸುಲಭವಾಗಿರಲಿಲ್ಲ. ಒಂದು ಭಕ್ತಿಹೀನ ಜಗತ್ತಿನಿಂದ, ಅಪನಂಬಿಗಸ್ತರಾದ ಸದಸ್ಯರು, ಮತ್ತು ಬೇಜವಾಬ್ದಾರಿಯುಳ್ಳ ನಾಯಕರಿಂದ ಸುತ್ತುವರೆಯಲ್ಪಟ್ಟಿರುವದು ನಿರಾಶದಾಯಕ ವಾದದ್ದು. ಈ ಕಾರಣಕ್ಕಾಗಿ, ಇಂಥ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿರುವ ಯಾರನ್ನೇ ಆಗಲಿ

ಪ್ರೋತ್ಸಾಹಿಸುವದಕ್ಕಾಗಿ ಯೇಸುವು ವಿಶೇಷ ವಾಗ್ದಾನವನ್ನು ಕೊಟ್ಟನು: **ಯಾವನು ಜಯಶಾಲಿಯಾಗಿದ್ದು ನನಗೆ ಮೆಚ್ಚಿಕೆಯಾದ ಕೃತ್ಯಗಳನ್ನು ಕಡೇವರೆಗೂ ನಡಿಸುತ್ತಾನೋ ಅವನಿಗೆ ನಾನು . . . ಜನಾಂಗಗಳ ಮೇಲೆ ಅಧಿಕಾರವನ್ನು ಕೊಡುವೆನು.** 22ನೇ ವಚನದಲ್ಲಿನ "ಅವಳ ಕೃತ್ಯಗಳು" ಮತ್ತು 26ನೇ ವಚನದಲ್ಲಿನ **ನನಗೆ ಮೆಚ್ಚಿಕೆಯಾದ ಕೃತ್ಯಗಳು** ನಡುವೆ ಒಂದು ವಿರುದ್ಧ ಹೋಲಿಕೆ ಕಾಣಿಸುತ್ತದೆ. ಥುವತ್ತೈರದಲ್ಲಿರುವ ಕ್ರೈಸ್ತರು ಒಂದೇ ಸಮಯದಲ್ಲಿ ಯೆಜೆಬೇಲಳ ಕೃತ್ಯಗಳನ್ನೂ ಯೇಸುವಿನ ಕೃತ್ಯಗಳನ್ನೂ ಮಾಡುವದಕ್ಕೆ ಸಾಧ್ಯವಿರಲಿಲ್ಲ.

**ವಚನ 27.** ಯೇಸು ಅವರಿಗೆ ಅಧಿಕಾರದ ವಾಗ್ದಾನ ಮಾಡುತ್ತಾನೆ: **ನಾನು ತಂದೆಯಿಂದ ಹೊಂದಿದ ಅಧಿಕಾರದಂತೆ ಜನಾಂಗಗಳ ಮೇಲೆ ಅಧಿಕಾರ ಕೊಡುವೆನು. ಅವನು ಕಬ್ಬಿಣದ ಕೋಲಿನಿಂದ ಅವರನ್ನು ಆಳುವನು; ಮಣ್ಣಿನ ಮಡಿಕೆಗಳು ಒಡೆಯುವಂತೆ ಅವರ ಬಲ ಮುರಿದು ಹೋಗುವದು. ಕಬ್ಬಿಣದ ಕೋಲಿನಿಂದ ಆಳುವನು** ಎಂಬ ಉಲ್ಲೇಖನವು ಕೀರ್ತನೆ 2ರಿಂದ ತೆಗೆದುಕೊಂಡದ್ದಾಗಿದೆ, ಅದೊಂದು ಮೆಸ್ಸೀಯನಿಗೆ ಸಂಬಂಧಿತ ಕೀರ್ತನೆಯಾಗಿದ್ದು ಯೇಸುವಿನ ಅಧಿಕಾರದ ಬಗ್ಗೆ ಮಾತಾಡುತ್ತದೆ. (ಇಡೀ ಕೀರ್ತನೆಯ ಸನ್ನಿವೇಶದಲ್ಲಿ 2:9ನ್ನು ಆಲೋಚಿಸಿರಿ.) ಆತನ ಕೃತ್ಯಗಳನ್ನು ಕೈಕೊಂಡು ನಡೆಯುವವರು, ಅಂದರೆ ಆತನಿಗೆ ವಿಧೇಯರಾಗುವವರು ಆತನ **ಆಳುವಿಕೆಯಲ್ಲಿ** ಪಾಲ್ಗೊಳ್ಳುವರು (5:9, 10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ; ನೋಡಿರಿ ರೋಮಾ 5:17) ಮತ್ತು ಅಂತಿಮವಾಗಿ ಆತನು ಕೆಟ್ಟದ್ದರ ಮೇಲೆ ಗಳಿಸುವ ಜಯದಲ್ಲಿ ಪಾಲುಗಾರರಾಗುವರು. ಈ ಮಹತ್ವಪೂರ್ಣವಲ್ಲದ ಪಟ್ಟಣದಲ್ಲಿರುವ ಈ ಅಸ್ಪಷ್ಟವಾದ ಸಭೆಗೆ ಇದೊಂದು ಕಣ್ಣುನ ಕೋರೈಸುವಂತಹ ಭವಿಷ್ಯ ದೃಷ್ಟಿಯಾಗಿತ್ತು.

**ವಚನ 28.** ಬಳಿಕ ಯೇಸು ನಿರೀಕ್ಷೆಯನ್ನು ಅವರ ಮುಂದೆ ಎತ್ತಿ ಹಿಡಿಯುತ್ತಾನೆ: **ಇದಲ್ಲದೆ ಉದಯಸೂಚಕನಕ್ಷತ್ರವನ್ನು ಅವನಿಗೆ ಕೊಡುವೆನು. ಉದಯಸೂಚಕನಕ್ಷತ್ರ**ವು ಒಂದು ಪ್ರಕಾಶಮಾನ "ನಕ್ಷತ್ರ" ಆಗಿದ್ದು ನಸುಕಿನ ಮುಂಜಾನೆಯು ಬಂದ ತಕ್ಷಣದಲ್ಲಿ ಬಾನಲ್ಲಿ ಕಾಣಿಸಿಕೊಳ್ಳುವಂಥದ್ದಾಗಿದೆ. ಸಾಮಾನ್ಯವಾಗಿ "ಉದಯನಕ್ಷತ್ರ" ವು ಶುಕ್ರ ಗ್ರಹವಾಗಿರುತ್ತದೆ, ಆದರೆ ಆಗೊಮ್ಮೆ ಈಗೊಮ್ಮೆ ಅದು ಮಂಗಳ ಗ್ರಹವಾಗಿರುತ್ತದೆ. ಪ್ರಕಟನೆ ಪುಸ್ತಕದ ಕೊನೆಯ ಅಧ್ಯಾಯದಲ್ಲಿ, ಯೇಸು ತನ್ನನ್ನು "ಉದಯಸೂಚಕವಾದ ಪ್ರಕಾಶವುಳ್ಳ ನಕ್ಷತ್ರ" ಎಂದು ಕರೆದುಕೊಳ್ಳುತ್ತಾನೆ (22:16), ಆದ್ದರಿಂದ ಬಹುಶಃ ಆತನು ನಂಬಿಗಸ್ತರೊಂದಿಗೆ ತಾನು ಒಂದು ವಿಶೇಷ ಸಂಬಂಧವನ್ನಿಟ್ಟುಕೊಳ್ಳುವ ಕುರಿತು ಮಾತಾಡುತ್ತಿರಬಹುದು. ಯೇಸುವು ಥುವತ್ತೈರದಲ್ಲಿರುವ ಕ್ರೈಸ್ತರಿಗೆ ಮುಂದೆ ನಿರೀಕ್ಷಿಸುವದಕ್ಕೆ ಏನನ್ನಾದರೂ ಕೊಡಬೇಕೆಂದು ಬಯಸಿದ್ದನು. ಉದಯಸೂಚಕ ನಕ್ಷತ್ರವು ಒಂದು ನೂತನ ದಿನಕ್ಕೆ ಮುನ್ಸೂಚನೆಯಾಗಿರುವಂತೆಯೇ, ಯೇಸುವಿನ ಪ್ರಸನ್ನತೆಯು ಈ ವಿಶ್ವಾಸಿಗಳಿಗೆ ನಿರಾಶದಾಯಕತೆಯ ಕತ್ತಲೆಯ ರಾತ್ರಿಯು ಶೀಘ್ರದಲ್ಲಿ ಮುಕ್ತಾಯಗೊಂಡು ಅವರ ಜೀವಿತಗಳ ಬಾನಲ್ಲಿ ನಿರೀಕ್ಷೆಯಿಂದ ಕೂಡಿದ ಒಂದು ಹೊಸ ದಿನವು ಉದಯಿಸುವದು ಎಂಬುದನ್ನು ತೋರಿಸುವದಾಗಿತ್ತು.

**ವಚನ 29.** ಯೇಸು ಪುನಃ ಒಂದು ಬುದ್ಧಿವಾದವನ್ನು ಸೇರ್ಪಡೆಗೊಳಿಸುತ್ತಾನೆ, **ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ.** ಇದನ್ನು ಗಮನಿಸಿರಿ, ಮೊದಲ ಬಾರಿಗೆ, ಈ ಬುದ್ಧಿವಾದವು ಪತ್ರದ ಮುಕ್ತಾಯದಲ್ಲಿ ಬರುತ್ತಿದೆ. ಈ ವಿಧಾನವು ಮುಂದಿನ ಮೂರು ಪತ್ರಗಳಲ್ಲಿ ಮುಂದುವರೆಯಲಿದೆ.

# ಅನ್ವಯಿಸುವಿಕೆ

## ಪಶ್ಚಾತ್ತಾಪ ಪಡಿರಿ - ಇಲ್ಲವಾದರೆ! (ಅಧ್ಯಾಯಗಳು 2; 3)

ಪಶ್ಚಾತ್ತಾಪವೆಂದರೆ ಮನಸ್ಸನ್ನು ಬದಲಾಯಿಸಿಕೊಳ್ಳುವಿಕೆಯಾಗಿದ್ದು ಅದು ಕ್ರಿಯೆಯಲ್ಲಿ ಒಂದು ಬದಲಾವಣೆಯನ್ನು ಉಂಟು ಮಾಡುತ್ತದೆ. ಮನುಷ್ಯನಿಗೆ ಅನ್ವಯಿಸುವದಾದರೆ, ಅದು *ಪಾಪದ* ವಿಷಯದಲ್ಲಿ ತನ್ನ ಮನಸ್ಸನ್ನು ಬದಲಾಯಿಸಿಕೊಳ್ಳುವದಾಗಿದ್ದು ಅದು ಒಂದು ಮಾರ್ಪಟ್ಟ *ಜೀವಿತ*ದಲ್ಲಿ ಫಲಿತಗೊಳ್ಳುವದು. ಪಶ್ಚಾತ್ತಾಪದ ಪ್ರಾಮುಖ್ಯತೆಯನ್ನು ಎಷ್ಟೇ ಒತ್ತಿ ಹೇಳಿದಾಗ್ಯೂ ಅದು ಅತಿಯಾಗುವದಿಲ್ಲ. ಯೇಸು ಹೀಗೆ ಹೇಳಿದನು, "ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಹಾಗೆಯೇ ಹಾಳಾಗಿ ಹೋಗುವಿರಿ" (ಲೂಕ 13:3).

ಪಶ್ಚಾತ್ತಾಪವು ಪ್ರಕಟನೆ ಪುಸ್ತಕದಲ್ಲಿ ಮುಖ್ಯವಾದ ಚರ್ಚೆಯಾಂಶವಾಗಿದೆ. ಎಫೆಸದಲ್ಲಿರುವ ಸಭೆಗೆ ಯೇಸುವು ಹೀಗೆ ಹೇಳಿದನು, "ಆದದರಿಂದ ನೀನು ಎಲ್ಲಿಂದ ಬಿದ್ದಿದ್ದೀಯೋ ಅದನ್ನು ನೆನಪಿಗೆ ತಂದುಕೊಂಡು ದೇವರ ಕಡೆಗೆ ತಿರುಗಿಕೋ, ನೀನು ಮೊದಲು ಮಾಡುತ್ತಿದ್ದ ಕೃತ್ಯಗಳನ್ನು ಮಾಡು. ನೀನು ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನಾನು ಬಂದು ನಿನ್ನ ದೀಪಸ್ತಂಭವನ್ನು ಅದರ ಸ್ಥಳದಿಂದ ತೆಗೆದು ಹಾಕುವೆನು" (2:5). ಆತನು ಪೆರ್ಗಮಕ್ಕೆ ಸಹ ಅದೇ ರೀತಿಯ ಸಂದೇಶವನ್ನು ಹೊಂದಿದ್ದನು: "ಆದದರಿಂದ ದೇವರ ಕಡೆಗೆ ತಿರುಗಿಕೋ, ತಿರುಗಿಕೊಳ್ಳದಿದ್ದರೆ ನಾನು ಬೇಗನೆ ನಿನ್ನ ಬಳಿಗೆ ಬಂದು ನನ್ನ ಬಾಯಿಕತ್ತಿಯಿಂದ ಅವರ ಮೇಲೆ ಯುದ್ಧಮಾಡುವೆನು" (2:16). ಆತನು ಥುವತ್ತೈರದಲ್ಲಿರುವ ಸಭೆಯನ್ನುದ್ದೇಶಿಸಿ ಮಾತಾಡಿದಾಗ, ಆತನು ಸುಳ್ಳು ಬೋಧಕಳು ಮತ್ತು ಆಕೆಯ ಶಿಷ್ಯರ ವಿಷಯವಾಗಿ ಈ ಮಾತುಗಳನ್ನು ಹೇಳಿದ್ದನು: "ದೇವರ ಕಡೆಗೆ ತಿರುಗಿಕೊಳ್ಳುವದಕ್ಕೆ ನಾನು ಅವಳಿಗೆ ಸಮಯವನ್ನು ಕೊಟ್ಟೆನು; ಆದರೆ ದೇವರ ಕಡೆಗೆ ತಿರುಗಿಕೊಂಡು ತನ್ನ ಜಾರತ್ವವನ್ನು ಬಿಟ್ಟು ಬಿಡುವದಕ್ಕೆ ಅವಳಿಗೆ ಇಷ್ಟವಿಲ್ಲ. ಇಗೋ, ಅವಳು ಹಾಸಿಗೆಯ ಮೇಲೆ ಬಿದ್ದುಕೊಂಡಿರುವಂತೆ ಮಾಡುವೆನು, ಮತ್ತು ಅವಳೊಂದಿಗೆ ವ್ಯಭಿಚಾರಮಾಡುವವರು ತಮ್ಮ ಮನಸ್ಸನ್ನು ದೇವರ ಕಡೆಗೆ ತಿರುಗಿಸಿಕೊಂಡು ಅವಳ ಕೃತ್ಯಗಳನ್ನು ಬಿಟ್ಟುಬಿಡದೆ ಹೋದರೆ ಮಹಾ ಸಂಕಟದಲ್ಲಿ ಬೀಳುವಂತೆ ಮಾಡುವೆನು" (2:21, 22).

ಆತನು ಸಾರ್ದಿಸ್ ಸಭೆಗೆ ಈ ಬುದ್ಧಿವಾದ ಹೇಳಿದನು: "ಆದದರಿಂದ ನೀನು ಹೊಂದಿದ ಉಪದೇಶವನ್ನೂ ಅದನ್ನು ಕೇಳಿದ ರೀತಿಯನ್ನೂ ನೆನಪಿಗೆ ತಂದುಕೊಂಡು ಅದನ್ನು ಕಾಪಾಡಿಕೋ ಮತ್ತು ದೇವರ ಕಡೆಗೆ ತಿರುಗಿಕೋ. ನೀನು ಎಚ್ಚರವಾಗಿಲ್ಲದಿದ್ದರೆ ಕಳ್ಳನು ಬರುವಂತೆ ಬರುವೆನು; ನಾನು ಯಾವ ಗಳಿಗೆಯಲ್ಲಿ ನಿನ್ನ ಮೇಲೆ ಬರುವೆನೋ ಅದು ನಿನಗೆ ತಿಳಿಯುವದೇ ಇಲ್ಲ" (3:3). ಲವೊದಿಕೀಯಕ್ಕೆ ಬರೆದ ತನ್ನ ಪತ್ರದಲ್ಲಿ, ಆತನು ಹೀಗೆ ಹೇಳಿದನು, "ನಾನು ಯಾರಾರನ್ನು ಪ್ರೀತಿಸುತ್ತೇನೋ ಅವರನ್ನು ಗದರಿಸುತ್ತೇನೆ ಮತ್ತು ಶಿಕ್ಷಿಸುತ್ತೇನೆ. ಆದದರಿಂದ ನೀನು ಆಸಕ್ತನಾಗಿರು; ದೇವರ ಕಡೆಗೆ ತಿರುಗಿಕೋ" (3:19).

ಪ್ರಕಟನೆ ಪುಸ್ತಕದಲ್ಲಿ ಅತ್ಯಂಥ ದುಃಖಕರ ಮಾತುಗಳೆಂದರೆ "ಅವರು ದೇವರ ಕಡೆಗೆ ತಿರುಗಲಿಲ್ಲ": "ಉಳಿದ ಜನರು ತಾವೇ ಮಾಡಿಕೊಂಡ ವಿಗ್ರಹಗಳನ್ನು ಬಿಟ್ಟು ದೇವರ ಕಡೆಗೆ ತಿರುಗಲಿಲ್ಲ . . . ಇದಲ್ಲದೆ ತಾವು ನಡಿಸುತ್ತಿದ್ದ ಕೊಲೆ ಮಾಟ ಜಾರತ್ವ ಕಳ್ಳತನ ಇವುಗಳೊಳಗೆ ಒಂದನ್ನು ಬಿಟ್ಟು ಮಾನಸಾಂತರಮಾಡಿಕೊಳ್ಳಲಿಲ್ಲ" (9:20, 21). "ಮನುಷ್ಯರು . . . ದೇವರನ್ನು ಘನಪಡಿಸುವ ಹಾಗೆ ಮಾನಸಾಂತರಮಾಡಿಕೊಳ್ಳದೆ . . . ತಮ್ಮ ಕೃತ್ಯಗಳ ವಿಷಯದಲ್ಲಿ ಮಾನಸಾಂತರಮಾಡಿಕೊಳ್ಳದೆ . . . ಪರಲೋಕದ ದೇವರನ್ನು ದೂಷಿಸಿದರು"

(16:9, 11). ಇದು ನಿಮ್ಮ ವಿಷಯವಾಗಿ ಎಂದಿಗೂ ಹೇಳಲ್ಪಡದಿರಲಿ: “ಆತನು [ಅವಳು] ಮಾನಸಾಂತರ ಮಾಡಿಕೊಳ್ಳಲಿಲ್ಲ!”

## ಪತ್ರಗಳಲ್ಲಿನ ನಾಲ್ಕು ಸತ್ಯಗಳು (ಅಧ್ಯಾಯಗಳು 2; 3)

ಈ ಪ್ರಾಚೀನ ಪತ್ರಗಳಲ್ಲಿನ ಅನೇಕ ಸತ್ಯಗಳು “ಅನ್ವಯಿಸುವಿಕೆಯ ಕಾತರದ ಹಸ್ತಗಳಿಂದ ಅನೇಕ ಶತಮಾನಗಳನ್ನು ದಾಟಿ ನಮ್ಮ ಶತಮಾನವನ್ನು ತಲುಪುತ್ತವೆ.”[34] ನಾವು ಥುವತೈರಕ್ಕೆ ಬರೆದ ಪತ್ರದಲ್ಲಿ ಸಿಕ್ಕುವ ಅಂತಹ ನಾಲ್ಕು ಸತ್ಯಗಳ ಕಡೆಗೆ ನಮ್ಮ ಗಮನವನ್ನು ಕೇಂದ್ರಿಕರಿಸೋಣ.

1. *ನಮಗೆ ಈಗಲೂ ಲೋಕದೊಂದಿಗೆ ಹೋರಾಟವಿರುತ್ತದೆ, ಮತ್ತು ನಾವು ರಾಜಿ ಮಾಡಿಕೊಳ್ಳುವದಕ್ಕೆ ಸಾಧ್ಯವಿಲ್ಲ*. ಕ್ರೈಸ್ತರ ಪ್ರತಿಯೊಂದು ಹೊಸ ಪೀಳಿಗೆಯು ಥುವತೈರದಲ್ಲಿನ ಸಭೆಯು ಎದುರಿಸಿದ್ದ ಸವಾಲುಗಳನ್ನು ಎದುರಿಸಬೇಕಾಗಿರುತ್ತದೆ: “ಲೋಕದಲ್ಲಿರುವದು” (ಯೋಹಾನ 17:11), ಆದರೆ “ಲೋಕದವರಾಗಿ” ಇಲ್ಲದಿರುವದು (ಯೋಹಾನ 17:16).

2. *ಸುಳ್ಳು ಬೋಧನೆಯನ್ನು ಆಕರ್ಷಕವಾಗಿ ಕಾಣುವಂತೆ ಮಾಡುವ ಪ್ರಭಾವಶಾಲಿ ಜನರು ನಮ್ಮ ಮಧ್ಯದಲ್ಲಿರುತ್ತಾರೆ, ಮತ್ತು ದಾರಿ ತಪ್ಪಿಸಲ್ಪಡಕೂಡದು*. ಯೆಜೆಬೇಲಳ ಮಕ್ಕಳು ಈಗಲೂ ಜೀವಂತವಾಗಿದ್ದಾರೆ ಮತ್ತು ಇಂದಿಗೂ ಚೆನ್ನಾಗಿಯೇ ಇದ್ದಾರೆ. “ಆಕರ್ಷಕ, ಮನಮೋಹಕ, ಪ್ರತಿಭೆಯುಳ್ಳ ಜನರು ಬುದ್ಧಿಯಲ್ಲಿ ಅಥವಾ ನೈತಿಕತೆಯಲ್ಲಿ ಅವಶ್ಯಕವಾಗಿ ದೋಷಾತೀತರಾಗಿರುವದಿಲ್ಲ”[35] ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ಎಲ್ಲರನ್ನೂ ದೇವರ ವಾಕ್ಯದ ಸ್ಪಷ್ಟವಾದ ಬೋಧನೆಯ ಮೂಲಕ ಪರೀಕ್ಷಿಸತಕ್ಕದ್ದು (1 ಯೋಹಾನ 4:1).

3. *ನಮ್ಮ ಸವಾಲುಗಳನ್ನು ಸಂಧಿಸುವದಕ್ಕೆ ಈಗಲೂ ನಮಗೆ ಕರ್ತನ ಸಹಾಯವು ಇರುತ್ತದೆ, ಮತ್ತು ನಾವು ಹತಾಶರಾಗಬಾರದು*. ಏಳು ಪತ್ರಗಳಲ್ಲಿರುವ ಪ್ರತಿಯೊಂದು ವಾಗ್ದಾನವು “ಜಯಹೊಂದುವವನ” ವಿಷಯವಾಗಿ ಮಾತಾಡುತ್ತದೆ. ಈ ಪತ್ರದಲ್ಲಿ, ಯೇಸು ಒಂದು ವಿವರಣಾತ್ಮಕ ಪದಗುಚ್ಛವನ್ನು ಸೇರ್ಪಡೆಗೊಳಿಸುತ್ತಾನೆ: “ನನಗೆ ಮೆಚ್ಚಿಕೆಯಾದ ಕೃತ್ಯಗಳನ್ನು ಕಡೇವರೆಗೂ ನಡಿಸುತ್ತಾನೋ” (ವ. 26). ನೀವು ಒಬ್ಬ “ಜಯಹೊಂದುವವನು” ಆಗುವದಾದರೆ, ನೀವು ನಿನ್ನ ಜೀವಿತವನ್ನು ಯೇಸುವಿಗೆ ಒಪ್ಪಿಸಿಕೊಟ್ಟು ಏನೇ ಪರಿಣಾಮಗಳಾದರೂ ಸರಿಯೇ, ಆತನ ಚಿತ್ತವನ್ನು ಮಾಡುವದಕ್ಕೆ ದೃಢನಿರ್ಧಾರವನ್ನು ಮಾಡಿಕೊಳ್ಳತಕ್ಕದ್ದು. ನೀವು ಆತನಿಗೆ ಒಪ್ಪಿಸಿ ಕೊಡುವದಾದರೆ, ಜೀವಿತದಲ್ಲಿ ಯಾವದೇ ಸಮಸ್ಯೆಯನ್ನು ಜಯಿಸುವಂತೆ ಯೇಸು ನಿಮಗೆ ಸಹಾಯ ಮಾಡುವನು.

4. *ನಾವು ಈಗಲೂ ತಪ್ಪಾಗಿರಬಲ್ಲೆವು, ಮತ್ತು ನಾವು ಮೊಂಡುತನವನ್ನು ಹೊಂದಿರಕೂಡದು*. ನೀವು ಲೋಕದೊಂದಿಗೆ ರಾಜಿಯಿಂದಿರುವ ಬೋಧನೆಯನ್ನು ಮಾಡಿದ ಮತ್ತು ಅನುಸರಿಸಿದ ಅಪರಾಧಕ್ಕೊಳಗಾಗಿದ್ದೀರೋ? ಕರ್ತನು ನಿಮ್ಮನ್ನು ಪಶ್ಚಾತ್ತಾಪಕ್ಕೆ ಕರೆಯುತ್ತಿದ್ದಾನೆ. ಈ ಸಂದೇಶವನ್ನು ನಿಮ್ಮ ಹೃದಯದಲ್ಲಿ ಅನ್ವಯಿಸಿಕೊಳ್ಳಿರಿ, ಮತ್ತು ಕೃಪಾಭರಿತ ಒಡೆಯನಿಂದ ನಿಮಗೆ ಕೊಡಲ್ಪಟ್ಟಿರುವ ಸದವಕಾಶವನ್ನು ಅಸಡ್ಡೆ ಮಾಡದಿರಿ. ಅಂತ್ಯದಲ್ಲಿ ಕರ್ತನು ನಿಮ್ಮನ್ನು ಶಪಿಸುವದರ ಬದಲಾಗಿ ಆಶೀರ್ವದಿಸುವಂತಾಗುವ ಹಾಗೇ ಈ ಹೊತ್ತು ಸಹ ನಿಮ್ಮ ಜೀವಿತವನ್ನು ಬದಲಾಯಿಸಿಕೊಳ್ಳಿರಿ.

## ಪತ್ರಗಳ ನಮೂನೆ (ಅಧ್ಯಾಯಗಳು 2; 3)

ಪತ್ರಗಳಲ್ಲಿನ ಏಳು ಅಂಶಗಳನ್ನು ಒಂದೇ ಅಕ್ಷರದಿಂದ ಆರಂಭಗೊಳ್ಳುವಂತೆ ಮರುಶೀರ್ಷಿಕೆಯನ್ನು ಅವುಗಳಿಗೆ ಕೊಡಬಹುದಾಗಿದೆ. ಉದಾಹರಣೆಗೆ: (1) ಆದೇಶ –

"ದೂತನಿಗೆ," (2) ಗುಣಸ್ವಭಾವ - ಯೇಸುವಿನ ಬಣ್ಣನೆ, (3) ಶ್ಲಾಘನೆ, (4) ಖಂಡನೆ, (5) ತಿದ್ದುವಿಕೆ - ಎಚ್ಚರಿಕೆ, (6) ಕರೆ - "ದೇವರಾತ್ಮನು ಹೇಳುವದನ್ನು ಕೇಳಿರಿ," ಮತ್ತು (7) ಸವಾಲು – "ಯಾವನು ಜಯಹೊಂದುತ್ತಾನೋ."

## ಸಿದ್ಧತೆ (ಅಧ್ಯಾಯಗಳು 2; 3)

ಆಸ್ಯ ಸೀಮೆಯ ಕ್ರೈಸ್ತರ ದಾರಿಯಲ್ಲಿ ಸಮಸ್ಯೆಯು ಕಾಯುತ್ತಿತ್ತು. ನಮಗೆ ಸಹ ಸಮಸ್ಯೆಯು ಕಾದಿರುತ್ತದೆ. ಒಂದು ಅದು ಅವರು ಅನುಭವಿಸಿದಂತಹ ಅದೇ ರೀತಿಯ ಸಮಸ್ಯೆಯು ಆಗಿರಬಹುದು ಅಥವಾ ಆಗಿರದೇ ಇರಬಹುದಾಗಿದೆ, ಆದರೆ ಅದು ಆಗಲೂ ನಮ್ಮ ಆತ್ಮಗಳನ್ನು ಪರೀಕ್ಷಿಸುವದು. ಈ ಆದಿ ಕ್ರೈಸ್ತರು ಬಿರುಗಾಳಿಗಾಗಿ ಸಿದ್ಧರಾಗಿರಬೇಕೆಂದು ಯೇಸು ಬಯಸಿದ್ದನು; ಆದ್ದರಿಂದ ಆತನು ಅವರ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಿ ಅವರ ಬಲಹೀನತೆಗಳನ್ನು ತಿದ್ದುವದಕ್ಕೆ ಶಕ್ತನಾಗುವಂತೆ ಅವರನ್ನು ಸೂಕ್ಷ್ಮವಾಗಿ ಪರಿಶೋಧಿಸುತ್ತಾನೆ. ನೆನಪಿನಲ್ಲಿಟ್ಟುಕೊಳ್ಳಿರಿ: ಕರ್ತನು ಬಂಡಾಯಕಾರಿ ಹಾಗೂ ಅವಿಧೇಯರಾದ ಜನರನ್ನು ಆಶೀರ್ವದಿಸುವದಕ್ಕೆ ಸಾಧ್ಯವಿಲ್ಲ.

*ನಾವು* ಸಹ ಎದುರಾಗುವ ಯಾವದಕ್ಕಾದರೂ ಸಿದ್ಧರಿರಬೇಕೆಂದು ಕರ್ತನು ಬಯಸುತ್ತಾನೆ. ಸಿದ್ಧತೆಯು ಈಗಲೂ ಮೂರು ಕಾರಣಾಂಶಗಳ ಮೇಲೆ ಆಧಾರವಾಗಿರುತ್ತದೆ: ನಮ್ಮ ಸಾಮರ್ಥ್ಯಗಳು ಮತ್ತು ಬಲಹೀನತೆಗಳ ಕುರಿತು ಒಂದು ಪ್ರಾಮಾಣಿಕವಾದ ಮೌಲ್ಯಮಾಪನ, ನಮ್ಮ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುವಿಕೆ, ಮತ್ತು ನಮ್ಮ ಬಲಹೀನತೆಗಳನ್ನು ತಿದ್ದಿ ಸರಿಪಡಿಸಿಕೊಳ್ಳುವಿಕೆ. ನೀವು ಗೌರವಿಸುವಂತಹ ಒಬ್ಬರನ್ನು ಹುಡುಕಿಕೊಂಡು ನಿಮಗೆ ಸ್ವ-ಮೌಲ್ಯಮಾಪನದಲ್ಲಿ ಸಹಾಯವನ್ನು ಮಾಡುವಂತೆ ಅವರಲ್ಲಿ ವಿಶ್ವಾಸಿಸಲು ಬಯಸಬಹುದು. ಬಳಿಕ, ನಿಮ್ಮ ಸಾಮರ್ಥ್ಯಗಳ ಮೇಲೆ ಕಟ್ಟಿಕೊಳ್ಳಲು ಮತ್ತು ನಿಮ್ಮ ದುರ್ಬಲತೆಗಳನ್ನು ಸರಿಪಡಿಸಿಕೊಳ್ಳುವದಕ್ಕೆ ನಿಮ್ಮನ್ನು ಸಮರ್ಪಿಸಿಕೊಳ್ಳಿರಿ.

ನಮ್ಮಲ್ಲಿ ಪ್ರತಿಯೊಬ್ಬರೂ ಅವನನ್ನು ಅಥವಾ ಅವಳನ್ನು ಕೇಳಿಕೊಳ್ಳುವ ಅಗತ್ಯವಿದೆ: "ನಾನು ಜೀವನದ ಯುದ್ಧಗಳಿಗಾಗಿ ಸಿದ್ಧನಾಗಿದ್ದೇನೋ?"; "ಆ ಯುದ್ಧಗಳಿಗಾಗಿ ನನ್ನನ್ನು ಸಿದ್ಧಪಡಿಸಿಕೊಳ್ಳಲು ನಾನೇನು ಮಾಡಬೇಕಾದ ಅಗತ್ಯವಿರುತ್ತದೆ?"; "ನಾನು ಅಗತ್ಯವಾಗುವದನ್ನೆಲ್ಲಾ ಮಾಡುವದಕ್ಕೆ ಮನಸ್ಸುಳ್ಳವನಾಗಿದ್ದೇನೋ?"

## ಎಫೆಸಕ್ಕೆ ಬರೆದ ಪತ್ರ (2:1-7)

ಪ್ರಸಂಗಿಗಳು ಏಳು ಪತ್ರಗಳ ಮೇಲೆ ಪ್ರಸಂಗಗಳಿಗಾಗಿ ಅನೇಕ ಜಾಣತನದ ಶೀರ್ಷಿಕೆಗಳನ್ನು ಕಲ್ಪಿಸಿಕೊಂಡಿರುತ್ತಾರೆ. ಎಫೆಸದಲ್ಲಿನ ಸಭೆಗೆ ಬರೆದ ಪತ್ರದ ಮೇಲಿನ ಪಾಠಗಳಿಗಾಗಿರುವ ಬಿರುದುಗಳಲ್ಲಿ ಇವುಗಳು ಸೇರಿರುತ್ತವೆ: "ಮೊದಲ ಪ್ರೀತಿ," "ನಿಷ್ಠೆಯಿದೆ ಆದರೆ ಅದರಲ್ಲಿ ಕೊರತೆಯಿದೆ," "ಎಲ್ಲವೂ ಆದರೆ ಒಂದು ಸಂಗತಿಯಿಲ್ಲ," "ಒಂದು ಮರಣಾಂತಿಕ ದೋಷ," ಮತ್ತು "ಮಧುಚಂದ್ರ ಮುಗಿದು ಹೋಯಿತು!"

ನೀವು ಪತ್ರಗಳಲ್ಲಿ ಏಳು ಅಂಶಗಳನ್ನು ನಿಮ್ಮ ಪ್ರಮುಖ ಅಂಶಗಳಿಗಾಗಿ ಬಳಸಿಕೊಳ್ಳಬಹುದು, ಅಥವಾ ನೀವು ಮೂರರಿಂದ ಐದು ಅಂಶಗಳ ಪ್ರಸಂಗಶಾಸ್ತ್ರೀಕ ದಾರಿಯನ್ನು ಅನುಸರಿಸಬಹುದು, ಬಹುಶಃ ಎಲ್ಲವೂ ಒಂದೇ ಅಕ್ಷರದಿಂದ ಆರಂಭಗೊಳ್ಳುವಂತಿರಬಹುದು. ಬಹಳ ಮಂದಿ ಲೇಖಕರು/ಬೋಧಕರು ಅಭಿವಂದನೆ ಹಾಗೂ ಬಣ್ಣನೆಯನ್ನು ತಮ್ಮ ಪರಿಚಯದ ಭಾಗದಲ್ಲಿ ಚರ್ಚಿಸುತ್ತಾರೆ ಮತ್ತು ಬುದ್ಧಿವಾದ ಹಾಗೂ ವಾಗ್ದಾನಗಳನ್ನು ತಮ್ಮ ಮುಕ್ತಾಯದ ಭಾಗದಲ್ಲಿ ಸೇರಿಸುವವರಾಗಿದ್ದು, ಸಂಕ್ಷಿಪ್ತ ವಿವರಣೆಗಾಗಿ

ಪತ್ರದ ಮುಖ್ಯಭಾಗವನ್ನು ಮಾತ್ರವೇ ಉಳಿಸಿಕೊಳ್ಳುತ್ತಾರೆ. ಎಫೆಸದಲ್ಲಿನ ಸಭೆಗೆ ಬರೆದ ಪತ್ರದ ಮಧ್ಯಭಾಗದಲ್ಲಿನ ವಚನಗಳ ಸಂಕ್ಷಿಪ್ತ ವಿವರಣೆಯನ್ನು ಹೇಗೆ ಮಾಡಬಹುದು ಎಂಬುದಕ್ಕೆ ಎರಡು ಉದಾಹರಣೆಗಳು ಇಲ್ಲಿವೆ: (1) "ಅನುಮೋದನೆ," (2) "ದೋಷಾರೋಪ," ಮತ್ತು (3) "ಬುದ್ಧಿವಾದ,"[36] ಅಥವಾ, (1) "ಖಂಡನೆ," (2) "ಟೀಕೆ," ಮತ್ತು (3) "ಅಲೋಚನೆ ಹೇಳುವಿಕೆ."[37] ಇಂಥ ಸಂಕ್ಷಿಪ್ತ ವಿವರಣೆಗಳಲ್ಲಿ, ಮೊದಲ ಭಾಗವು ಸಾಮಾನ್ಯವಾಗಿ 2, 3 ಮತ್ತು 6 ವಚನಗಳಿಗೆ ಸಂಬಂಧಿಸಿರುತ್ತದೆ; ಎರಡನೆಯ ಭಾಗವು 4ನೇ ವಚನದ ಮೇಲೆ ವಿವರಿಸುತ್ತಾ ಹೋಗುತ್ತದೆ; ಮತ್ತು ಮೂರನೆಯ ಭಾಗವು 5ನೇ ವಚನವನ್ನು ವಿವರಿಸುತ್ತದೆ.

## ನೀವು ನಿಮ್ಮ ಮೊದಲ ಪ್ರೀತಿಯನ್ನು ಕಳೆದುಕೊಂಡಿರುವಿರೋ? (2:1-7)

ಯಾವ ಆತ್ಮೀಕ ಸಮಸ್ಯೆಯೂ ಒಂದು ವ್ಯಾಧಿಗ್ರಸ್ಥ ಹೃದಯವನ್ನು ಕಂಡುಹಿಡಿಯುವಷ್ಟು ಕಠಿಣವೇನಲ್ಲ, ಆದರೆ ಅದೇ ರೀತಿಯಲ್ಲಿ ಯಾವದೇ ಆತ್ಮೀಕ ಸಮಸ್ಯೆಯು ನಮ್ಮ ಆತ್ಮೀಕ ಆರೋಗ್ಯಕ್ಕೆ ಅದರಷ್ಟು ಅಪಾಯಕರವಲ್ಲ. ದೋಷವುಳ್ಳ ಹೃದಯವನ್ನು ಸರಿಪಡಿಸುವ ಹೊರತು, ಮರಣವು ಅನಿವಾರ್ಯವಾಗಿರುತ್ತದೆ. ಎಫೆಸದಲ್ಲಿನ ಸಭೆಗೆ ಬರೆದ ಪತ್ರವು ನಮ್ಮೊಬ್ಬೊಬ್ಬರಿಗೂ ಕೂಗಿ ಹೇಳುವದೇನೆಂದರೆ: ಇದು ಗಂಭೀರವಾದ ಹೃದಯ ಪರೀಕ್ಷೆಗಾಗಿ ಮಹಾನ್ ವೈದ್ಯನ ಬಳಿಗೆ ಹೋಗಬೇಕಾದ ಸಮಯವಾಗಿದೆ. ದೇವರು ಮಹಾನ್ ಹೃದಯ-ಬಲ್ಲವನು (1 ಅರಸು 8:39; 1 ಪೂರ್ವಕಾಲವೃತ್ತಾಂತ 28:9; ಯೆರೆಮೀಯ 17:10; ಲೂಕ 16:15). ನಮ್ಮ ಪ್ರಾರ್ಥನೆಯು ಕೀರ್ತನೆ 139:23, 24ರಲ್ಲಿ ದಾವೀದನು ಮಾಡಿದ ಪ್ರಾರ್ಥನೆಯಂತಿರತಕ್ಕದ್ದು: "ದೇವಾ, ನನ್ನನ್ನು ಪರೀಕ್ಷಿಸಿ ನನ್ನ ಹೃದಯವನ್ನು ತಿಳಿದುಕೋ; ನನ್ನನ್ನು ಶೋಧಿಸಿ ನನ್ನ ಆಲೋಚನೆಗಳನ್ನು ಗೊತ್ತುಮಾಡು. ನಾನು ಕೇಡಿನ ಮಾರ್ಗದಲ್ಲಿರುತ್ತೇನೋ ಏನೋ ನೋಡಿ ಸನಾತನಮಾರ್ಗದಲ್ಲಿ ನನ್ನನ್ನು ನಡಿಸು."

ಎಫೆಸಕ್ಕೆ ಪತ್ರವು ಬರೆದ ಸ್ವಲ್ಪ ಕಾಲದಲ್ಲಿಯೇ, Domitianನು ಮರಣಿಸಿದನು ಮತ್ತು ಯೋಹಾನನು ಸೆರೆವಾಸದಿಂದ ಬಿಡುಗಡೆ ಹೊಂದಿದನು. ಯೋಹಾನನು ತನ್ನ ಮರಣದ ಹಾಸಿಗೆಯಲ್ಲಿರುವಾಗ, ಆದಿ ಲೇಖಕರ ಪ್ರಕಾರವಾಗಿ, ಆತನು ಸಹೋದರರನ್ನು ಒಬ್ಬರನ್ನೊಬ್ಬರು ಪ್ರೀತಿಸುವಂತೆ ಬೇಡಿಕೊಂಡನು. ಬಹುಶಃ ಅವರು ಅದಕ್ಕೆ ಆಕ್ಷೇಪಣೆ ಎತ್ತಿ, "ಆದರೆ ನೀನು ನಮಗೆ ಹೊಸದೇನಾದರೂ ಹೇಳಬೇಕೆಂದು ಬಯಸುತ್ತೇವೆ" ಎಂದು ಹೇಳಿರಬಹುದು. ಯೋಹಾನನು ತನ್ನ ಮೊದಲ ಪತ್ರಿಕೆಯಿಂದ ಉಲ್ಲೇಖನ ಮಾಡುವ ಮೂಲಕ ಅದಕ್ಕೆ ಪ್ರತ್ಯುತ್ತರ ನೀಡಿರಬಹುದಾಗಿದೆ:

> ಪ್ರಿಯರೇ, ನಾನು ನಿಮಗೆ ಬರೆಯುವದು ಹೊಸ ಅಪ್ಪಣೆಯಲ್ಲ, ಮೊದಲಿನಿಂದಲೂ ನಿಮಗಿದ್ದ ಹಳೆಯ ಅಪ್ಪಣೆಯೇ ಆಗಿದೆ . . . ನಾವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬದೇ ನೀವು ಮೊದಲಿನಿಂದಲೂ ಕೇಳಿದ ವಾಕ್ಯವಾಗಿದೆ (1 ಯೋಹಾನ 2:7; 3:11).

ನೀವು ನಿಮ್ಮ ಮೊದಲ ಪ್ರೀತಿಯನ್ನು ಬಿಟ್ಟಿರುವ ಸಾಧ್ಯತೆಯು ಇರುತ್ತದೋ? ಇರುವದಾದರೆ, ನಿಮ್ಮ ಹೃದಯದಲ್ಲಿ ಮರೆಯಾಗುತ್ತಿರುವ ಪ್ರೀತಿಯ ಕಿಡಿಯನ್ನು ಪುನಃ ಹೊತ್ತಿಸುವದಕ್ಕೆ ಈ ಹೊತ್ತೇ ಸೂಕ್ತ ಸಮಯವಾಗಿದೆ - ಅದು ತಡವಾಗಿ ಹೋಗುವ ಮುನ್ನ ಇಂದೇ ಹೊತ್ತಿಸಿರಿ.

## ದಾಂಪತ್ಯ ಪ್ರೀತಿ ಮತ್ತು ಆತ್ಮೀಕ ಪ್ರೀತಿ (2:1-7)

ಪ್ರಕಟನೆ 2:1-7 ವಚನಗಳನ್ನು "ಏಳು ಸಭೆಗಳಿಗೆ ಪತ್ರಗಳು" ಸರಣಿಗಳಲ್ಲಿ ಬಳಸುವದರ

ಜೊತೆಯಲ್ಲಿ, ಇದನ್ನು ದಾಂಪತ್ಯದಲ್ಲಿ ಹೇಗೆ ಪ್ರೀತಿಯನ್ನು ಪುನರುಜ್ಜೀವನಗೊಳಿಸಬೇಕು ಎಂಬುದರ ಕುರಿತ ಒಂದೇ ಸಂದೇಶವಾಗಿ ಮಾತ್ರವೇ ಬಳಸಿಕೊಳ್ಳಬಹುದಾಗಿದೆ: "ಕಿಡಿಯು ಪುನಃ ಹೊತ್ತಿಸಲ್ಪಡಬಲ್ಲದೋ?" ಅಂತಹ ಒಂದು ಪ್ರಸಂಗಕ್ಕಾಗಿ, ದಾಂಪತ್ಯದ ಪ್ರೀತಿ ಮತ್ತು ಆತ್ಮೀಕ ಪ್ರೀತಿಗಳ ನಡುವಿನ ಹೋಲಿಕೆಯನ್ನು ಸವಿಸ್ತಾರವಾಗಿ ವಿವರಿಸಿರಿ.

"ಮೊದಲ ಪ್ರೀತಿ" ಎಂಬ ಪದದ ಮಹತ್ವವನ್ನು ಅರ್ಥಮಾಡಿಕೊಳ್ಳಬೇಕಾದರೆ, ಹೊಸದಾಗಿ ಮದುವೆಯಾಗಿರುವ ದಂಪತಿಯ ಬಗ್ಗೆ ಯೋಚಿಸಿರಿ. ಈ ವಿಧವಾದ ಪದಗಳು ನೆನಪಿಗೆ ಬರಬಹುದಾಗಿದೆ: "ಗಾಢ," "ರೋಮಾಂಚಕಾರಿ," "ಅಳತೆಮೀರಿದ." ಆತ್ಮೀಕವಾದದ್ದರ ಕಡೆಗೆ ಗಮನವನ್ನು ಹರಿಸುವದಾದರೆ, ನೀವು ಮೊದಲು ಕ್ರೈಸ್ತರಾದ ಗಳಿಗೆಯನ್ನು ಪುನಃ ಜ್ಞಾಪಕಕ್ಕೆ ತಂದುಕೊಳ್ಳಿರಿ. ಬಹುಶಃ, ಇಲ್ಲಿ ಸಹ "ಗಾಢ," "ರೋಮಾಂಚಕಾರಿ," "ಅಳತೆಮೀರಿದ" ಎಂಬ ಪದಗಳು ಅನ್ವಯವಾಗಬಹುದಾಗಿದೆ.

ಒಂದು ದಾಂಪತ್ಯದಲ್ಲಿನ ಪ್ರೀತಿಯು - ಅಥವಾ ದೇವರ ಸಂಗಡದ ನಮ್ಮ ಸಂಬಂಧದಲ್ಲಿನ ಪ್ರೀತಿಯು - ತನ್ನಿಂದ ತಾನೇ ತನ್ನ ಗಾಢತೆಯನ್ನು ಮತ್ತು ನಿಕಟತೆಯನ್ನು ಕಾಪಾಡಿಕೊಳ್ಳುವದೋ? ದಾಂಪತ್ಯದಲ್ಲಿ ದಂಪತಿಗಳು ಪ್ರೀತಿಯು ಪ್ರಕಾಶಮಾನದಿಂದ ಉರಿಯುತ್ತಿರುವದರೊಂದಿಗೆ ತಮ್ಮ ಜೀವಿತವನ್ನು ಆರಂಭಿಸುತ್ತಾರೆ. ಬಳಿಕ, ಕಾಲವು ಗತಿಸಿದ ಹಾಗೆ, ಪ್ರೀತಿಯನ್ನು ಪುನಃ ಭರ್ತಿ ಮಾಡದೆ ಹೋದರೆ ಜ್ವಾಲೆಗಳು ಕಡಿಮೆಯಾಗಿ ಉರಿಯುತ್ತಾ ಸಾಗುವವು. ದಂಪತಿಗಳು ಹೆಚ್ಚಾಗಿ ಒಂದೇ ರೀತಿಯಲ್ಲಿ ವರ್ತಿಸುವದನ್ನು ಮುಂದುವರೆಸಬಹುದು, ಆದರೆ ಕಿಡಿಯು ಕಣ್ಮರೆಯಾಗಿರುತ್ತದೆ. ಅವರು ಕೇವಲ "ಚಲನವಲನಗಳನ್ನು ಮಾತ್ರವೇ ಹೊಂದಿರುತ್ತಾರೆ"; ಅವರ ದಾಂಪತ್ಯವು ಯಾಂತ್ರಿಕದಂತಾಗಿರುತ್ತದೆ. ನಾವು ಸಹ ನಮ್ಮ ಆತ್ಮೀಕ ಜೀವಿತಗಳಲ್ಲಿ ಗಾಢತೆಯನ್ನು ಮತ್ತು ನಿಕಟತೆಯನ್ನು ಕಳೆದುಕೊಳ್ಳಬಹುದಾಗಿದೆ. ನಾವು ಒಂದು ಮುಂಜಾನೆಯಲ್ಲಿ ಎಚ್ಚರಗೊಂಡು ಕರ್ತನಿಗೆ ನಾವು ಮಾಡುವ ಸೇವೆಯು ಒಂದು ಹವ್ಯಾಸದಂತಾಗಿರುತ್ತದೆ, ನಮ್ಮ ಹೃದಯಗಳು ಅದರಲ್ಲಿರುವದಿಲ್ಲ, ನಾವು ಪ್ರೀತಿಯಿಂದ ಮಾಡುವದಕ್ಕಿಂತಲೂ ಹೆಚ್ಚಾಗಿ ನಮ್ಮ ಕರ್ತವ್ಯ ಎಂಬ ಅರ್ಥದಲ್ಲಿ ವಿಧೇಯರಾಗುವವರಾಗಿದ್ದೇವೆ ಎಂಬುದನ್ನು ಗ್ರಹಿಸಿಕೊಳ್ಳಬಹುದು.

ಯಾರಾದರೊಬ್ಬರು ಆಕ್ಷೇಪಣೆ ಎತ್ತಬಹುದು, "ಆದರೆ ಮೊದಲ ಪ್ರೀತಿಯ ಉತ್ಸಾಹವು ಮುಂದುವರೆಯಬೇಕೆಂದು ಅಪೇಕ್ಷಿಸುವದು ಅವಾಸ್ತವಿಕವಾದದ್ದು - ಅದು ದಾಂಪತ್ಯದಲ್ಲಿಯೇ ಆಗಿರಲಿ ಅಥವಾ ನಮ್ಮ ಕ್ರೈಸ್ತ ಜೀವಿತಗಳಲ್ಲಿಯೇ ಆಗಿರಬಹುದು. ಕಾಲವು ಒಂದು ರೀತಿಯಲ್ಲಿ ನಮ್ಮ ಪ್ರೀತಿಯನ್ನು ಮಂದಗೊಳಿಸುತ್ತದೆ. ಅದು ಹಾಗೆಯೇ ನಡೆಯುತ್ತದೆ, ಆದ್ದರಿಂದ ಅದರ ಬಗ್ಗೆ ಚಿಂತೆ ಮಾಡಬೇಡ." ಅದು ಯೇಸುವಿಗೆ ಕಳಕಳಿಯನ್ನುಂಟು ಮಾಡಿತ್ತೋ? ಆತನು ಹೀಗೆ ಹೇಳಿದನು, "ಆದರೆ ಮೊದಲು ನಿನಗಿದ್ದ ಪ್ರೀತಿಯನ್ನು ನೀನು ಬಿಟ್ಟು ಬಿಟ್ಟಿದ್ದೀಯೆಂದು *ನಾನು ನಿನ್ನ ಮೇಲೆ ತಪ್ಪು ಹೊರಿಸಬೇಕಾಗುತ್ತದೆ*" (ವ. 4; ಒತ್ತಿ ಹೇಳಿದ್ದು ನನ್ನದು). ಯೇಸು ಅದರ ಬಗ್ಗೆ ಕಳಕಳಿ ಹೊಂದಿದ್ದಾದರೆ, ನಾವು ಸಹ ಕಳಕಳಿಯನ್ನು ಹೊಂದಿರಬೇಕು.

## ಇಂದು ಸಭೆಗಳ ಮಧ್ಯದಲ್ಲಿ ಇರುವ ಯೇಸು (2:1)

ಇಂದು, ಸಭೆಯಾಗಿಯೂ ವ್ಯಕ್ತಿಗತ ಕ್ರೈಸ್ತರಾಗಿಯೂ ನಮ್ಮ ಬಲಕ್ಕಾಗಿ ನಾವು ಈಗಲೂ ಯೇಸುವನ್ನು ಅವಲಂಬಿಸಿರುತ್ತೇವೆ. ಯೇಸು ಈಗಲೂ ತನ್ನ ಸಭೆಗಳ ಮಧ್ಯದಲ್ಲಿ ಕಾರ್ಯವನ್ನು ಮಾಡುತ್ತಿದ್ದಾನೆ. ಆತನು ಈಗಲೂ ಪರಿಶೀಲನಾ ಯಾತ್ರೆಗಳನ್ನು ಮಾಡುತ್ತಾ ಸಾಮರ್ಥ್ಯಗಳನ್ನು ಮತ್ತು ಬಲಹೀನತೆಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತಾನೆ. ಯೇಸು ಮಾತ್ರವೇ ಪರಲೋಕದಿಂದ ಅಧಿಕಾರ ಹೊಂದಿರುವ ಸಭಾ

ಪರಿಶೀಲನಾಧಿಕಾರಿಯಾಗಿದ್ದಾನೆ. ಆತನೊಬ್ಬನಿಗೆ ಆ ಕೆಲಸವನ್ನು ಸರಿಯಾಗಿ ಮಾಡುವ ಅಧಿಕಾರ, ಜವಾಬ್ದಾರಿ, ಮತ್ತು ಸಂಪನ್ಮೂಲಗಳಿರುತ್ತವೆ. ಯೇಸು ಮಾತ್ರವೇ ಸಭೆಯ ಶಿರಸ್ಸಾಗಿದ್ದಾನೆ (ಎಫೆಸ 1:22, 23; ಕೊಲೊಸ್ಸೆ 1:18, 24). ನಮ್ಮಂತಲ್ಲದೆ, ಯೇಸುವು ಒಬ್ಬ ವ್ಯಕ್ತಿಯಲ್ಲಿ ಏನಿರುತ್ತದೆಂಬುದನ್ನು ಬಲ್ಲನು (ಯೋಹಾನ 2:24, 25); ಹೃದಯದ ಉದ್ದೇಶಗಳನ್ನು ತೀರ್ಪುಮಾಡುವದಕ್ಕೆ ಆತನೊಬ್ಬನೇ ಸನ್ನದ್ಧನಾಗಿರುತ್ತಾನೆ. ನಾವು ದೋಷದ ಬೋಧನೆಯನ್ನು ಕಂಡು ಹಿಡಿದು ಶಿಸ್ತುಗೊಳಿಸಬೇಕೆಂದು ಕರ್ತನು ಬಯಸುತ್ತಾನೆ (2:2, 6), ಆದರೆ ನಾವು ನಮ್ಮನ್ನು ಸಭಾ ಪರಿಶೀಲನಾಧಿಕಾರಿ ಸಹೋದರರಾಗಿ ನಮ್ಮನ್ನು ನೇಮಕ ಮಾಡಿಕೊಳ್ಳುವ ಪ್ರಲೋಭನೆಗೆ ಒಳಗಾಗದೆ ಎದುರಿಸತಕ್ಕದ್ದು. ನಮ್ಮಲ್ಲಿ ಬಹು ಮಂದಿ ನಮ್ಮ ದುರ್ಬಲತೆಗಳಿಂದ ಮತ್ತು ನಾವು ಕೆಲಸ ಮಾಡುವ ಹಾಗೂ ಆರಾಧನೆ ಮಾಡುವ ಸಭೆಗಳ ಅಗತ್ಯತೆಗಳಿಂದ ಕೈಗಳನ್ನು ತುಂಬಿಸಿಕೊಂಡಿರುತ್ತೇವೆ.

### ಶ್ಲಾಘನೆಯೊಂದಿಗೆ ಆರಂಭಿಸಿರಿ (2:2, 3)

ಯೇಸು ಎಫೆಸದಲ್ಲಿನ ಸಭೆಯ ಸಕಾರಾತ್ಮಕ ಗುಣಗಳಿಂದ ಆರಂಭಗೊಳಿಸುತ್ತಾನೆ: ಅವರ ಕೃತ್ಯಗಳು, ಪ್ರಯಾ, ದೃಢನಿಷ್ಠೆ, ಮತ್ತು ದುಷ್ಟ ವ್ಯಕ್ತಿಗಳನ್ನು ಸಹಿಸಿಕೊಳ್ಳದಿರುವಿಕೆ (ವಚನಗಳು 2, 3). ನಾವು ಒಂದು ಸಭೆಯ ತಪ್ಪನ್ನು ಅಥವಾ ಒಬ್ಬ ವ್ಯಕ್ತಿಯ ತಪ್ಪನ್ನು ಖಂಡಿಸಬೇಕಾದ ಸಂದರ್ಭ ಬಂದಾಗ, ಪ್ರಾಮಾಣಿಕವಾಗಿಯೂ ನಿಜವಾಗಿಯೂ ಶ್ಲಾಘಿಸಬಹುದಾದ ವೈಯಕ್ತಿಕವಾದ ಗುಣಲಕ್ಷಣಗಳನ್ನು ಗಮನಕ್ಕೆ ತರುವ ಮೂಲಕ ಆರಂಭಗೊಳಿಸತಕ್ಕದ್ದು.

### ಸೈರಣೆ (2:2)

ಇಂದು ವಿಶ್ವದ ಅನೇಕ ಭಾಗಗಳಲ್ಲಿ, "*ಸಹಿಸಿಕೊಳ್ಳಲು* ಸಾಧ್ಯವಿಲ್ಲ" ಎಂಬ ಪದಗುಚ್ಛವು "ರಾಜಕೀಯವಾಗಿ ಸರಿಯಿಲ್ಲ" ಎಂದು ತೀರ್ಪು ಮಾಡಲ್ಪಡುವದು. ಸೈರಣೆಯು ಶ್ಲಾಘಿಸಲ್ಪಟ್ಟಿದೆ ಮತ್ತು ಅಸಹನೆಯು ಖಂಡಿಸಲ್ಪಡುತ್ತದೆ, ಆದರೆ ಯೇಸು ಒಂದು ಸಭೆಯನ್ನು ಅದು ಪಾಪವನ್ನು ಸಹಿಸಿಕೊಳ್ಳದಿರುವಿಕೆಗಾಗಿ - ವಿಶೇಷವಾಗಿ, ಅದರ ಅಸಹನೆಗಾಗಿ - ಪ್ರಶಂಸೆ ಮಾಡುತ್ತಾನೆ. ನಾವು ಪಾಪದ ವಿರುದ್ಧವಾಗಿ "ಸಾಯಬೇಕಾದಷ್ಟರ" ಮಟ್ಟಿಗೆ ಯುದ್ಧದಲ್ಲಿರುತ್ತೇವೆ (ಎಫೆಸ 6:11; ಪ್ರಕಟನೆ 12:17); ನಾವು ರಾಜಿ ಮಾಡಿಕೊಳ್ಳುವದಕ್ಕೆ ಸಾಧ್ಯವಿಲ್ಲ.

### ಸ್ಮುರ್ನಕ್ಕೆ ಬರೆದ ಪತ್ರ (2:8-11)

ಸ್ಮುರ್ನದಲ್ಲಿನ ಸಭೆಗೆ ಬರೆದ ಪತ್ರದ ಮೇಲಿನ ಒಂದು ಪ್ರಸಂಗಕ್ಕೆ ಈ ಶೀರ್ಷಿಕೆಯನ್ನು ಕೊಡಬಹುದು "ಐಶ್ವರ್ಯವಂತವಾಗಿದ್ದ ಬಡ ಸಭೆ." ಈ ಮನವಿಯಲ್ಲಿ, ಈ ಸಭೆಯನ್ನು ಲವೊದಿಕೀಯದಲ್ಲಿನ ಸಭೆಯೊಂದಿಗೆ ವಿರುದ್ಧ ಹೋಲಿಕೆಯನ್ನು ಮಾಡಬಹುದು: "ಬಡತನದಲ್ಲಿದ್ದ ಐಶ್ವರ್ಯವಂತ ಸಭೆ." ಅನೇಕ ಬೋಧಕರು ಸ್ಮುರ್ನದಲ್ಲಿರುವವರ ಬಾಧೆಯನ್ನು ಒತ್ತಿ ಹೇಳುವದಕ್ಕೆ ಆದ್ಯತೆ ಕೊಡುತ್ತಾರೆ, ಅದಕ್ಕೆ ಬಳಸುವ ಪಾಠಗಳ ಬಿರುದುಗಳೆಂದರೆ "ಬಾಧೆಯನ್ನನುಭವಿಸುವ ದೇವಜನರು," "ಬಾಧೆಯು ಅಪ್ಪಳಿಸುವಾಗ," "ಬಾಧೆಯನ್ನನುಭವಿಸಲು ಸಿದ್ಧರಾಗಿರಿ," ಅಥವಾ "ಮರಣದ ಚಿಹ್ನೆಯ ಅಡಿಯಲ್ಲಿ ಸಭೆ."

ಬಾಧೆಯ ಪ್ರಧಾನ ಚರ್ಚೆಯಾಂಶೆಯ ಸುತ್ತ ಪಾಠವನ್ನು ರಚಿಸಬಹುದು: (1) "ಬಾಧೆಯನ್ನನುಭವಿಸುವ ಮೌಲ್ಯ," (2) "ಹೇಗೆ ಬಾಧೆಯನ್ನನುಭವಿಸುವದೆಂದು ಕಲಿಯುವದು." ಎರಡನೆಯ ಶಿರೋನಾಮೆಯ ಅಡಿಯಲ್ಲಿ, 9ನೇ ವಚನದ ಈ

ಚರ್ಚೆಯಾಂಶಗಳನ್ನು ಚರ್ಚಿಸಬಹುದಾಗಿದೆ: "ಸಂಕಷ್ಟದ ಮೇಲೆ ಹೇಗೆ ಜಯ ಹೊಂದುವದು," "ಬಡತನದ ಮೇಲೆ ಹೇಗೆ ಜಯ ಹೊಂದುವದು," ಮತ್ತು "ನಿಂದನೆಯ ವಿರುದ್ಧ ಹೇಗೆ ಜಯ ಹೊಂದುವದು."

## ವೈಯಕ್ತಿಕ ಅನ್ವಯಿಸುವಿಕೆಯನ್ನು ಮಾಡುವದು (2:8-11)

ಸ್ಮುರ್ನದಲ್ಲಿನ ಸಭೆಗೆ ಯೇಸು ಹೇಳಿದ ಮಾತುಗಳನ್ನು ನಾವು ಓದುವ ವೇಳೆ, ಇಂದು ನಾವು ವೈಯಕ್ತಿಕವಾಗಿ ಅನ್ವಯ ಮಾಡಿಕೊಳ್ಳಬೇಕೆಂದು ಆತನು ಬಯಸುವನು. ಆತನು ಮುಂದುವರೆದು ಹೀಗೆ ಹೇಳುತ್ತಾನೆ, "ಸಭೆಗಳಿಗೆ ದೇವರಾತ್ಮನು ಹೇಳುವದನ್ನು ಕಿವಿಯುಳ್ಳವನು ಕೇಳಲಿ" (ವ. 11). Henry Ward Beecherನು ಒಮ್ಮೆ ಹೀಗೆ ಹೇಳಿದನು, ಏನೆಂದರೆ "ದೇಶದ ಸಭೆಗಳು ಎಲ್ಲೆಡೆಯೂ ಬೋಳು-ತಲೆಯ ವೃದ್ಧ ಪಾಪಿಗಳಿಂದ ಪ್ರೋಕ್ಷಿಸಲ್ಪಟ್ಟಿದ್ದು ಅವರ ಕೂದಲುಗಳು ಅವರ ಕಡೆಗೆ ಗುರಿಮಾಡಿ ಪ್ರಸಂಗಿಸಲಾದ ಆದರೆ ಅವರಿಂದ ಓರೆಯಾಗಿ ತಿರುಗಿ ಹಿಂದೆ ಸಭಿಕರಲ್ಲಿ ಕುಳಿತಿದ್ದ ವ್ಯಕ್ತಿಗೆ ಬಡಿದಿರುತ್ತವೆ."[38]

ಪ್ರತಿಯೊಂದು ಸಭೆಯು ವೈಯಕ್ತಿಕ ಅನ್ವಯಿಕೆಯನ್ನು ಮಾಡಿಕೊಳ್ಳುವ ಅಗತ್ಯವಿರುತ್ತದೆ. ಪ್ರತಿಯೊಂದು ಸಭೆಯ ನಾಯಕರು *ಪ್ರತಿಯೊಬ್ಬ* ಸದಸ್ಯನನ್ನು ಕ್ರಿಸ್ತನ ಧ್ಯೇಯಕ್ಕೆ ಸಮರ್ಪಿಸಿಕೊಳ್ಳುವಂತೆ ಪ್ರೋತ್ಸಾಹಿಸುವ ಗುರಿಯನ್ನು ಹೊಂದಿರತಕ್ಕದ್ದು. ಅಷ್ಟುಮಾತ್ರವಲ್ಲದೆ, ಪ್ರತಿಯೊಬ್ಬ ವ್ಯಕ್ತಿಯು ವೈಯಕ್ತಿಕವಾದ ಅನ್ವಯಿಕೆಯನ್ನು ಮಾಡಿಕೊಳ್ಳುವ ಅಗತ್ಯವಿರುತ್ತದೆ. ನಮ್ಮಲ್ಲಿ ಪ್ರತಿಯೊಬ್ಬರೂ ಈ ವಿಧವಾದ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು: "ನಾನು ಕರ್ತನಿಗೆ ನಿಜವಾಗಿಯೂ ನಂಬಿಗಸ್ತನಾಗಿದ್ದೇನೋ?"; "ನಾನು ನನ್ನ ನಂಬಿಕೆಗೋಸ್ಕರ ಮರಣಿಸುವದಕ್ಕೆ ಮನಸ್ಸುಳ್ಳವನಾಗಿದ್ದೇನೋ?"; "ನಾನು ಈ ದಿನ ಸಾಯುವದಾದರೆ, ನಾನು ಜೀವದ ಜಯಮಾಲೆಯನ್ನು ಪಡೆದುಕೊಳ್ಳುವೆನೋ?"

ಸ್ಮುರ್ನದಲ್ಲಿನ ಸಭೆಗೆ ಬರೆದ ಪತ್ರವು ನಮ್ಮಲ್ಲಿ ಪ್ರತಿಯೊಬ್ಬರು ನಿಜವಾಗಿಯೂ ಪ್ರಾಮುಖ್ಯವಾದದ್ದರಲ್ಲಿ ಐಶ್ವರ್ಯವಂತರಾಗಿರಬಲ್ಲೆವು ಎಂಬುದನ್ನು ಒತ್ತಿ ಹೇಳುತ್ತದೆ. ನೀವು ಲೋಕವು ಕಸಿದುಕೊಳ್ಳಲಾಗದ ಐಶ್ವರ್ಯಗಳನ್ನು ಹೊಂದುವವನಾಗಬೇಕಾದರೆ, *ಈಗಲೇ* ಯೇಸುವಿನ ಸೇವೆ ಮಾಡುವದಕ್ಕೆ ದೃಢನಿರ್ಧಾರ ಮಾಡಿಕೊಳ್ಳಿರಿ.

## ನಿಜವಾದ ಐಶ್ವರ್ಯಗಳು (2:9)

ನಿಜವಾದ ಐಶ್ವರ್ಯವು ಏನೆಂಬುದನ್ನು ಕಲಿತುಕೊಳ್ಳುವದು ನಮಗೆ ಅಗತ್ಯವಿರುತ್ತದೆ. ಕೆಲವರು ಹಣ ಹಾಗೂ ಸ್ವತ್ತುಗಳನ್ನು ಕೂಡಿಸಿಟ್ಟುಕೊಳ್ಳುವದಕ್ಕೆ ತಮ್ಮನ್ನು ಸರ್ಮಪಿಸಿಕೊಂಡಿರುತ್ತಾರೆ, ಆದರೆ ನಿಜವಾಗಿಯೂ ಯಾವದು ಪ್ರಾಮುಖ್ಯವೋ ಅದನ್ನು ಹಣವು ಖರೀದಿಸುವದಕ್ಕೆ ಸಾಧ್ಯವಿಲ್ಲ: ಹಣವು ಔಷಧವನ್ನು ಖರೀದಿಸಬಲ್ಲದು, ಆದರೆ ಅದು ಆರೋಗ್ಯವನ್ನು ಖರೀದಿಸಲಾರದು. ಹಣವು ಸೇವೆಯನ್ನು ಖರೀದಿಸಬಲ್ಲದು, ಆದರೆ ಅದು ಸ್ನೇಹಿತರನ್ನು ಖರೀದಿಸಲಾಗದು. ಹಣವು ಮನೋರಂಜನೆಯನ್ನು ಖರೀದಿಸಬಲ್ಲದು, ಆದರೆ ಅದು ಸಂತೋಷವನ್ನು ಖರೀದಿಸಲಾರದು. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೀಗೆ ಹೇಳಿದನು, "ದ್ರವ್ಯಾಶೆಯಿಲ್ಲದವರಾಗಿರಿ; ನಿಮಗಿರುವವುಗಳಲ್ಲಿ ತೃಪ್ತರಾಗಿರಿ" (ಇಬ್ರಿಯ 13:5). ಯೇಸು ಹೀಗೆ ಬೇಡಿಕೊಂಡನು, "ಆದರೆ ಪರಲೋಕದಲ್ಲಿ ಗಂಟು ಮಾಡಿ ಇಟ್ಟುಕೊಳ್ಳಿರಿ; ಅಲ್ಲಿ ಅದು ನುಸಿ ಹಿಡಿದು ಕಿಲುಬುಹತ್ತಿ ಕೆಟ್ಟುಹೋಗುವದಿಲ್ಲ; ಅಲ್ಲಿ ಕಳ್ಳರು ಕನ್ನಾಕೊರೆಯುವದೂ ಇಲ್ಲ, ಕದಿಯುವದೂ ಇಲ್ಲ" (ಮತ್ತಾಯ 6:20).

## ಹಿಂಸೆ (2:10)

ಸ್ಮುರ್ನದಲ್ಲಿದ್ದ ಹಿಂಸೆಯ ಕುರಿತು ಕರ್ತನಿಗೆ ಗೊತ್ತಿತ್ತು. ಅಲ್ಲದೆ ನಾವು ಯಾವಾಗ ಸಂಕಟವನ್ನು ಅನುಭವಿಸುತ್ತೇವೆಂಬುದು, ನಾವು ಒತ್ತಡದಲ್ಲಿ ಇನ್ನೇನು ಮಣಿದು ಬಿಡುತ್ತಿದ್ದೇವೆಂದು ಯಾವಾಗ ನಮಗನ್ನಿಸುತ್ತದೆಂಬುದು ಸಹ ಯೇಸುವಿಗೆ ತಿಳಿದಿದೆ. ಆತನು ಬಲ್ಲನು ಮತ್ತು ಅರ್ಥಮಾಡಿಕೊಳ್ಳುತ್ತಾನೆ (ಇಬ್ರಿಯ 4:15). ಪೌಲನು ಹೀಗೆ ಬರೆದನು: "ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸುಮಾಡುವವರೆಲ್ಲರೂ ಹಿಂಸೆಗೊಳ*ಗಾಗುವರು*" (2 ತಿಮೊಥೆ 3:12; ಒತ್ತಿ ಹೇಳಿದ್ದು ನನ್ನದು). ನಮ್ಮ ಅಗ್ನಿಪರೀಕ್ಷೆಗಳು ಸ್ಮುರ್ನದಲ್ಲಿನ ಕ್ರೈಸ್ತರ ರೀತಿಯಲ್ಲಿಯೇ ಇರದೆ ಇರಬಹುದು, ಆದರೆ ನಾವು ನಂಬಿಗಸ್ತರಾಗಿರುವದಾದಲ್ಲಿ ಸಂಕಷ್ಟಗಳು ಬರುವವೆಂದು ಪೌಲನು ಎಚ್ಚರಿಸಿದನು. ಒಮ್ಮೆ ಒಬ್ಬ ಕ್ರೈಸ್ತನಿದ್ದನು, ಆತನು ಒಂದು ಕಂಪನಿಯಲ್ಲಿ ಉದ್ಯೋಗ ಮಾಡುವವನಾಗಿದ್ದು ಆತನ ಮನಸ್ಸಾಕ್ಷಿಗೆ ವಿರುದ್ಧವಾಗಿ ಕೃತ್ಯಗಳನ್ನು ಮಾಡುವಂತೆ ಒತ್ತಾಯಿಸಲ್ಪಟ್ಟನು. ಆತನು ನಿರಾಕರಿಸಿದನು; ಮತ್ತು ಅದರ ಫಲಿತವಾಗಿ, ವರ್ಷದಿಂದ ವರ್ಷಕ್ಕೆ ಆತನನ್ನು ಬಿಟ್ಟು ಬೇರೆಯವರಿಗೆ ಭಡ್ತಿಯನ್ನು ಕೊಡಲಾಗುತ್ತಿತ್ತು. ಹಾಗಿದ್ದರೂ, ಆತನು ತನ್ನ ಮನವರಿಕೆಗಳಿಗೆ ನಿಷ್ಠೆಯಿಂದ ಇದ್ದನು ಮತ್ತು ಆತನು ಈ ದಿನದ ವರೆಗೂ ಕರ್ತನಿಗೆ ನಂಬಿಗಸ್ತನಾಗಿರುತ್ತಾನೆ. ಅದೇ ರೀತಿಯಾದ ಪರಿಸ್ಥಿತಿಗೆ ಒತ್ತಾಯಿಸಲ್ಪಟ್ಟ ಮತ್ತೊಬ್ಬ ಸದಸ್ಯನು ಹೀಗೆ ತರ್ಕ ಮಾಡಿದನು, "ನನ್ನ ಉದ್ಯೋಗವನ್ನು ಉಳಿಸಿಕೊಳ್ಳಬೇಕಾದರೆ ನಾನು ಈ ಕಾರ್ಯಗಳನ್ನು ಮಾಡಲೇ ಬೇಕು, ಮತ್ತು ನಿಶ್ಚಯವಾಗಿಯೂ ನಾನು ನನ್ನ ಕುಟುಂಬದ ಪೋಷಣೆಯನ್ನು ನೋಡಿಕೊಳ್ಳಬೇಕೆಂಬುದು ದೇವರ ಅಪೇಕ್ಷೆಯಾಗಿರುತ್ತದೆ." ಆತನು ಒತ್ತಡಕ್ಕೆ ಮಣಿದನು ಮತ್ತು ವ್ಯಾಪಾರದಲ್ಲಿ ಅಭಿವೃದ್ಧಿ ಹೊಂದಿದನು. ನಮಗೆ ಚೆನ್ನಾಗಿ ತಿಳಿದಿರುವ ಪ್ರಕಾರ, ಆತನು ಅನೇಕ ವರ್ಷಗಳಿಂದ ಕರ್ತನಿಗೆ ಅಪನಂಬಿಗಸ್ತನಾಗಿರುತ್ತಾನೆ. ಆತನು ತನ್ನನ್ನು ತಾನೇ ಪರೀಕ್ಷಿಸಿಕೊಳ್ಳುವದು ಸೂಕ್ತವಾಗಿರುತ್ತದೆ. ನಮ್ಮ ಜೀವಿತದಲ್ಲಿ ಯಾವದೇ ಹಿಂಸೆಯ ಅರಿವು ನಮಗಿರುವದಿಲ್ಲ, ಬಹುಶಃ ನಾವು ನಮ್ಮ ನಂಬಿಕೆಯೊಂದಿಗೆ ರಾಜಿ ಮಾಡಿಕೊಂಡು ನಮ್ಮ ಮನವರಿಕೆಗಳನ್ನು ಬಚ್ಚಿಟ್ಟುಕೊಳ್ಳುತ್ತಿರಬಹುದಾಗಿದೆ.

## ಪೆರ್ಗಮಕ್ಕೆ ಬರೆದ ಪತ್ರ (2:12-17)

ಪೆರ್ಗಮದಲ್ಲಿನ ಸಭೆಯು "ಅಪನಂಬಿಗಸ್ತವಾಗಿದ್ದ ನಂಬಿಗಸ್ತ ಸಭೆ," "ನರಕ ಕೇಂದ್ರ ಕಛೇರಿಯ ಸ್ಥಳದಲ್ಲಿರುವ ಸಭೆ" ಮತ್ತು "ಸೈತಾನನ ಹಿತ್ತಲಲ್ಲಿದ್ದ ಸಭೆ" ಎಂದು ಕರೆಯಲ್ಪಟ್ಟಿದೆ. ಅದಕ್ಕಿದ್ದ ವಿಶಿಷ್ಟವಾದ ಸವಾಲುಗಳನ್ನು "ಪಾಪದ ನಗರದಲ್ಲಿದ್ದ ಸಭೆ" ಎಂಬ ಬಿರುದಿನಿಂದ ಸಾರಾಂಶಗೊಳಿಸಬಹುದಾಗಿದೆ. ಪೆರ್ಗಮದಲ್ಲಿನ ಸಭೆಗೆ ಬರೆದ ಪತ್ರದ ಮೇಲಿನ ಪಾಠಕ್ಕಾಗಿ ಇತರ ಸಂಭಾವ್ಯ ಬಿರುದುಗಳಲ್ಲಿ ಇವುಗಳು ಸೇರಿರುತ್ತವೆ: "ಸೈತಾನನು ನೆಲೆಸಿದ್ದ ಸ್ಥಳ," "ಸೈತಾನನು ತನ್ನ ಸಿಂಹಾಸನವನ್ನು ಹೊಂದಿದ್ದ ಸ್ಥಳ," "ಶೋಧಿಸಲ್ಪಟ್ಟಿದ್ದ ಸಭೆ," ಮತ್ತು "ಸೈತಾನನ ಸ್ಥಳದಲ್ಲಿದ್ದ ಸಭೆ."

ಒಬ್ಬ ಕ್ರೈಸ್ತನಾಗಿರುವದು ಸುಲಭವಲ್ಲ ಎಂಬುದನ್ನು ಪೆರ್ಗಮದಲ್ಲಿನ ಸಭೆಗೆ ಬರೆದ ಪತ್ರವು ಘೋಷಿಸುತ್ತದೆ. ಯೇಸುವು ಈಗಲೂ ದೃಢವಾಗಿ ನಿಂತುಕೊಳ್ಳುವ ಧೈರ್ಯವುಳ್ಳವರಿಗಾಗಿ, ಏನೇ ಪರಿಣಾಮಗಳಾದಾಗ್ಯೂ ನಂಬಿಕೆಯನ್ನು ನಿರಾಕರಿಸದೆ ಇರುವಷ್ಟು ಧೈರ್ಯವುಳ್ಳವರಿಗಾಗಿ ಹುಡುಕುತ್ತಿದ್ದಾನೆ. ಅಲ್ಲದೆ ದೈವಿಕ ಮಾನದಂಡಕ್ಕೆ ಅನುಗುಣವಾಗಿ ಇಲ್ಲದ ಜೀವಿತಗಳನ್ನು ಮತ್ತು ಬೋಧನೆಯನ್ನು ಹೊಂದಿರುವ ಸಹೋದರರನ್ನು ಹಾಗೂ ಸಹೋದರರನ್ನು ಖಂಡಿಸುವದಕ್ಕೆ ಸಾಕಾಗುಷ್ಟು ಪ್ರೀತಿಯನ್ನು ಹೊಂದಿರುವವರನ್ನು ಸಹ

ಹುಡುಕುತ್ತಿದ್ದಾನೆ. ಕರ್ತನು ರಾಜಿ ಮಾಡಿಕೊಳ್ಳುವದನ್ನು ಸಹಿಸಲಾರನು.

ಈ ಪತ್ರವು "ಜಯ ಹೊಂದುವವರು" ಆಗಿರುವಂತೆ ನಮ್ಮೆಲ್ಲರಿಗೂ ಕರೆ ನೀಡುತ್ತದೆ: ನಾವೇನಾಗಿರಬೇಕೆಂದು ಯೇಸು ಬಯಸುತ್ತಾನೋ ಅವರಾಗಿರುವಂತಾಗುವ ಹಾಗೆ ನಮ್ಮ ಹೇಡಿತನವನ್ನು ಜಯಿಸುವವರು, ನಮ್ಮ ಉದಾಸೀನತೆಯನ್ನು, ಮತ್ತು ಮನವರಿಕೆಯಿಲ್ಲದಿರುವಿಕೆಯನ್ನು ಜಯಿಸುವವರು ಆಗಿರುವದು. ನಾವು ಹಾಗೆ ಆಗುವದಾದರೆ, ಆತನು ಅದೇ ರೀತಿಯಲ್ಲಿಯೇ ನಮಗೆ ಒದಗಿಸುವಿಕೆಯ "ಬಚ್ಚಿಟ್ಟಿರುವ ಮನ್ನ" ವನ್ನು ಮತ್ತು ಅನುಮೋದನೆಯ "ಬಿಳೀ ಕಲ್ಲ" ನ್ನು ಕೊಡುವನು.

## ಸೈತಾನನಿಗಾಗಿ ಕೇಂದ್ರಗಳು (2:13)

ಪೆರ್ಗಮದಲ್ಲಿನ ಕ್ರೈಸ್ತರು ಸೈತಾನನ "ಸಿಂಹಾಸನ" ಇದ್ದ ಸ್ಥಳದಲ್ಲಿ ಜೀವಿಸುವವರಾಗಿದ್ದರು. ಈ ದಿನಗಳಲ್ಲಿ ಸಹ ಸಾವಿರಾರು ಜನರ ಯೋಚನೆಗಳ ದಿಕ್ಕನ್ನು ನಿಯಂತ್ರಿಸುವ ಅದೇ ರೀತಿಯ ಕೇಂದ್ರಗಳು - ನಿರ್ಲಜ್ಜೆಯ, ತಿರಸ್ಕಾರದಿಂದ ನೋಡುವರು, ಮತ್ತು ಭೋಗಲಾಭಿಲಾಷಿಗಳು ಆಗಿರುವವರನ್ನು ಆಕರ್ಷಿಸುವ ಸ್ಥಳಗಳು - ಸೈತಾನನು ಹೊಂದಿದ್ದಾನೋ? ಸೈತಾನನ ಪ್ರಭಾವವುಳ್ಳ ಅಂತಹ ಅನೇಕ ಮೂಲಗಳು ನೆನಪಿಗೆ ಬರುತ್ತವೆ: ಲೋಕದ ಪ್ರಮುಖ ನಗರಗಳು, ರಾಜಕೀಯ ಶಕ್ತಿಯ ಕೇಂದ್ರಗಳು, ಕಾಮಾಭಿಲಾಷೆಯ ಭೋಗಗಳಿಗೆ ಸಮರ್ಪಿತವಾದ ಕ್ಷೇತ್ರಗಳು, ಮತ್ತು ಲೌಕಿಕ ವಿಶ್ವವಿದ್ಯಾಲಯಗಳ ಆವರಣಗಳು. ಇವುಗಳ ಪಟ್ಟಿಗೆ, ನಾವು ಸೇರ್ಪಡೆಗೊಳಿಸುವ ಸಂಗತಿಗಳೆಂದರೆ: ಪುಸ್ತಕಗಳು, ಮ್ಯಾಗಜಿನಗಳು, ಸಿನಿಮಾಗಳು, ಟಿವಿ, ಮತ್ತು ಅಂತರ್ಜಾಲ (internet). ಇದರ್ಥವು ಇಲ್ಲಿ ಪಟ್ಟಿ ಮಾಡಲ್ಪಟ್ಟಿರುವ ಪ್ರತಿಯೊಂದು ಮೂಲಗಳು ಸೈತಾನನಿಗೆ ಸೇರಿದ್ದೆಂದಾಗುವದಿಲ್ಲ, ಆದರೆ ಸೈತಾನನು ತನ್ನ ಉದ್ದೇಶಗಳನ್ನು ನೆರವೇರಿಸಿಕೊಳ್ಳುವದಕ್ಕೆ ಇವುಗಳ ಮೂಲಕವಾಗಿ ಕಾರ್ಯ ಮಾಡುತ್ತಾನೆಂದಷ್ಟೆ ಅರ್ಥವಾಗಿದೆ. ನಾವು ದೇವರ ಉದ್ದೇಶಗಳನ್ನು ನೆರವೇರಿಸುವದಕ್ಕೆ ಇದೇ ಕ್ಷೇತ್ರಗಳಲ್ಲಿ ಕಾರ್ಯಮಾಡಬಲ್ಲೆವು, ಆದರೆ ಅದು ಕಷ್ಟಕರವಾಗಿರುವದು - ಪೆರ್ಗಮದಲ್ಲಿಯೂ ಹಾಗೆಯೇ ಇತ್ತು.

## ಕೆಲವು ಸಂಗತಿಗಳು (2:14)

ಯೇಸುವು ನಿಮ್ಮ ವಿರುದ್ಧವಾಗಿ "ಕೆಲವು ವಿಷಯಗಳಲ್ಲಿ . . . ತಪ್ಪು ಹೊರಿಸುವದಾದರೆ," ಅದು ಕಳವಳಗೊಳ್ಳುವ ಸಮಯವಾಗಿರುತ್ತದೆ! 1961ರಲ್ಲಿ, ಲೇಖಕನು ಇಲಿ ವಿಷವನ್ನು ತಿಂದಿದ್ದ ಒಬ್ಬ ಮನುಷ್ಯನಿಗೆ ಶವಸಂಸ್ಕಾರದ ಆರಾಧನೆಯನ್ನು ನಡಿಸಿದ್ದನು. ಆ ಇಲಿಯ ವಿಷಯವು *ಕೆಲವೇ ಕೆಲವು* arsenic (ಒಲಿ ಪಾಷಾಣದ) ಕಾಳುಗಳು ಮಿಶ್ರಣ ಮಾಡಲ್ಪಟ್ಟಿದ್ದ ಮೆಕ್ಕೆ ಜೋಳಗಳ ಆಹಾರವಾಗಿತ್ತು - ಆದರೆ ಆ ವ್ಯಕ್ತಿಯೂ ಹೇಗೂ ಸತ್ತು ಹೋದನು. ಒಬ್ಬ ಮನುಷ್ಯನು ದೈಹಿಕ ಪರೀಕ್ಷೆಗಾಗಿ ವೈದ್ಯನ ಬಳಿಗೆ ಹೋಗುತ್ತಾನೆಂದು ಊಹಿಸಿಕೊಳ್ಳಿರಿ. ಪರೀಕ್ಷೆಯ ಬಳಿಕ, ವೈದ್ಯನು ಆ ವ್ಯಕ್ತಿಗೆ ಪರೀಕ್ಷೆಯ ಸಕಾರಾತ್ಮಕ ಫಲಿತಗಳ ಬಗ್ಗೆ ವರದಿಯನ್ನು ನೀಡುತ್ತಾನೆ. ಬಳಿಕ ಆತನು ಈ ಮಾತುಗಳನ್ನು ಸೇರಿಸಿ ಹೇಳುತ್ತಾನೆ, "ಆದರೆ ನಾನು ಕೆಲವು ಸಂಗತಿಗಳು ಸರಿಯಿಲ್ಲವೆಂದು ಕಂಡುಕೊಂಡೆನು: ನಿನಗೆ ಸಕ್ಕರೆ ಕಾಯಿಲೆಯಿದೆ, ಹೃದಯ ಸಮಸ್ಯೆ, ಮತ್ತು ಕ್ಯಾನ್ಸರ್ ಇರುತ್ತವೆ"!

## ಥುವತ್ತೈರಕ್ಕೆ ಬರೆದ ಪತ್ರ (2:18-29)

ಥುವತ್ತೈರದಲ್ಲಿನ ಸಭೆಗೆ ಬರೆದ ಪತ್ರದ ಮೇಲಿನ ಬಹುಪಾಲು ಪ್ರಸಂಗಗಳು

"ಯೆಜೆಬೇಲ" ಎಂಬ ಹೆಸರನ್ನು ಬಳಸುವ ಬಿರುದುಗಳನ್ನು ಹೊಂದಿರುತ್ತವೆ: "ಯೆಜೆಬೇಲಳ ಮನೆ" ಅಥವಾ "ಯೆಜೆಬೇಲಳ ಜಂಕ್ಷನ್" ಎಂದು ಸಹ ಇರುತ್ತದೆ. ಇದರ ಬದಲಾಗಿ ಅಂತಿಮ ವಾಗ್ದಾನದ ಮೇಲೆ ಗಮನವನ್ನು ಕೊಡುವವನಾಗಿ, Ray Summersನು ಈ ವಿಭಾಗವನ್ನು "ನಕ್ಷತ್ರದ ಮೇಲೆ ಕಾದಿರು" ಎಂದು ಹೆಸರಿಟ್ಟನು. ಕ್ರೈಸ್ತನು "ಅನೇಕ ಸಾರಿ ಕತ್ತಲೆಯಲ್ಲಿ ಮತ್ತು ಅನೇಕ ಜಟಿಲ ಸ್ಥಿತಿಗಳಲ್ಲಿ ನಡೆದು ಸಾಗಬಹುದು, ಆದರೆ ಆತನನ್ನು ಮಾರ್ಗದರ್ಶನ ಮಾಡುವದಕ್ಕೆ ಉದಯಸೂಚಕ ನಕ್ಷತ್ರವು ಕೊಡಲ್ಪಡುವದು; ಆತನು [ಮಿಥ್ಯ ನಾಯಕತ್ವವನ್ನು] ಅನುಸರಿಸುವದಕ್ಕೆ ನಿರಾಕರಿಸಬೇಕು ಮತ್ತು *ನಕ್ಷತ್ರಕ್ಕಾಗಿ ಕಾಯಬೇಕು*."[39] ಇತರ ಸಂಭಾವ್ಯ ಬಿರುದುಗಳಲ್ಲಿ "ಶೋಧಿಸಲ್ಪಟ್ಟ ಸಭೆ" ಮತ್ತು "ರಾಜಿ ಮಾಡಿಕೊಳ್ಳುವಿಕೆಯ ವಿನಾಶತೆ" ಎಂಬವುಗಳು ಸೇರಿರುತ್ತವೆ.

### ವ್ಯಾಪಾರ ಸಂಘಗಳು (2:18-29)

ಥುವತ್ತೈರದಲ್ಲಿನ ಕ್ರೈಸ್ತರು ವ್ಯಾಪಾರ ಸಂಘಗಳ ಒಂದು ಸಮಾಜದಲ್ಲಿ ಜೀವಿಸುವದಕ್ಕೆ ಕಷ್ಟವನ್ನು ಅನುಭವಿಸಿರಬಹುದಾಗಿದೆ. ಬಹುಶಃ ಒಂದು ಸಂಘದಿಂದ ಹೊರಗೆ ಕೆಲಸವನ್ನು ಕಂಡುಕೊಳ್ಳುವದು ಕಠಿಣವಾಗಿರುತ್ತಿತ್ತು, ಆದರೆ ಪ್ರತಿಯೊಂದು ಸಂಘವು ಒಂದಿಲ್ಲಾ ಒಂದು ರೀತಿಯಲ್ಲಿ ಅನ್ಯಧರ್ಮಿಯ ಆರಾಧನೆಯಲ್ಲಿ ಭಾಗಿಯಾಗುತ್ತಿತ್ತು ಮತ್ತು ಒಬ್ಬ ನಂಬಿಗಸ್ತನಾದ ಕ್ರೈಸ್ತನು ಅಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಿರಲಿಲ್ಲ. ಅವರ ದುರ್ದಶೆಯನ್ನು ಅರ್ಥಮಾಡಿಕೊಳ್ಳಬೇಕೆಂದರೆ, ನೀವು ಒಬ್ಬ ಮುಸ್ಲಿಮ್, ಒಬ್ಬ ಬೌದ್ಧ ಮತದವನು, ಅಥವಾ ಒಬ್ಬ ಹಿಂದು ಆಗಿರದೆ ಹೋದರೆ ಉದ್ಯೋಗವೇ ಸಿಕ್ಕುವದಿಲ್ಲ ಎಂದಾದರೆ ಹೇಗಿರುತ್ತದೆಂದು ಊಹಿಸಿಕೊಳ್ಳಿರಿ. ಹಾಗೆ ನಡೆಯುವದಾದಲ್ಲಿ, ನಿಮ್ಮ ಕುಟುಂಬದ ಪೋಷಣೆಗೋಸ್ಕರ ನೀವು ನಿಮ್ಮ ನಂಬಿಕೆಯನ್ನು ರಾಜಿ ಮಾಡಿಕೊಳ್ಳುವಿರೋ, ಅಥವಾ ಅವರು ಹಸಿವೆಯಿಂದ ಇರುವಂತೆ ಬಿಡುವಿರೋ?

### ಒಂದು ಕೆಲಸ ಮಾಡುತ್ತಿದ್ದ ಸಭೆ (2:19)

ಥುವತ್ತೈರವು ಒಂದು ಹೃದಯಸ್ಪರ್ಶಿ, ಕೆಲಸ ಮಾಡುತ್ತಿದ್ದ ಸಭೆಯಾಗಿತ್ತು. ಅದು ಸಹೋದರತ್ವದ ಮುದ್ರಣಕ್ಕಾಗಿ ಈ ಕೆಳಗಿನ ವರದಿಯನ್ನು ಕಳುಹಿಸಿದಂತಹ ಸಭೆಯ ರೀತಿಯಲ್ಲಿರಲಿಲ್ಲ: "ಕಳೆದ ವರ್ಷ ಯಾರೊಬ್ಬರಿಗೂ ದೀಕ್ಷಾಸ್ನಾನವನ್ನು ಕೊಡಲಾಗಿಲ್ಲ, ಮತ್ತು ಯಾರೊಬ್ಬರನ್ನೂ ಅನ್ಯೋನ್ಯತೆಗೆ ಪುನಃ ಸೇರ್ಪಡೆಗೊಳಿಸಿಕೊಳ್ಳಲಿಲ್ಲ, ಮತ್ತು ಯಾರೊಬ್ಬರೂ ನಮ್ಮಲ್ಲಿ ಸದಸ್ಯತ್ವವನ್ನು ಪಡೆದುಕೊಳ್ಳಲಿಲ್ಲ. ನಾವು ಕಡೇ ವರೆಗೂ ನಂಬಿಗಸ್ತರಾಗಿರುವಂತೆ ನಮಗೋಸ್ಕರ ಪ್ರಾರ್ಥಿಸಿರಿ." ಸಂಭಾವ್ಯವಾಗಿ, ಸಭೆಯ ಸದಸ್ಯರು ತಮಗೆ ಪರಿಚಯವಿದ್ದ ಪ್ರತಿಯೊಬ್ಬರಿಗೂ ಬೋಧಿಸಿದ್ದರು ಮತ್ತು ಹಾಗಿದ್ದರೂ ಯಾರಿಂದಲೂ ಪ್ರತ್ಯುತ್ತರವನ್ನು ಪಡೆದಿರಲಿಲ್ಲ - ಆದರೆ ಯೆಶಾಯ 55:11 ಮತ್ತು ರೋಮಾ 10:17ರ ಬೆಳಕಿನಲ್ಲಿ ಅದು ಅಸಂಭವನೀಯವೆಂದು ತೋರುತ್ತದೆ.

---

### ಅಡಿಟಿಪ್ಪಣಿಗಳು

[1]ಈ ಚರ್ಚೆಯಾಂಶದ ಕುರಿತು ಹೆಚ್ಚಿನ ಅಧ್ಯಯನಕ್ಕಾಗಿ, ನೋಡಿರಿ Tommy South, "Christ's Concerns for the Church," *Truth for Today* 9 (October 1988): 48, 51. [2]Harold Hazelip, *The Lord Reigns: A Survey of the Book of Revelation* (Abilene, Tex.: Herald of Truth, n.d.), 5. [3]Ibid., 5, 6. [4]Ibid.,

6. [5]Leon Morris, *Revelation*, rev. ed., The Tyndale New Testament Commentaries, ed. Leon Morris (Grand Rapids, Mich.: Wm. B. Eerdmans Publishing Co., 1987), 58. [6]Ibid., 59 (ಒತ್ತಿ ಹೇಳಿದ್ದು ನನ್ನದು). [7]Homer Hailey, *Revelation* (Grand Rapids, Mich.: Baker Book House, 1979), 120. [8]William Barclay, *Letters to the Seven Churches* (Philadelphia: Westminster Press, 1957), 22. [9]Hailey, 121. [10]ಅಗಾಫೆ ಪ್ರೀತಿಯ ಕುರಿತು ಚರ್ಚೆಗಾಗಿ, ನೋಡಿರಿ see David Roper, "The Greeks Have a Word for It," *Truth for Today* 10 (February 1990): 11–13.

[11]J. B. Phillips, *The New Testament in Modern English* (emphasis added). [12]Morris, 60. [13]J. W. Roberts, *The Revelation to John (The Apocalypse),* The Living Word Commentary, ed. Everett Ferguson (Austin, Tex.: Sweet Publishing Co., 1974), 11. [14]Richard Rogers, "Letters to the Seven Churches, No. 1," *Video Series on Revelation* 4 (Lubbock, Tex.: Sunset Extension Department, 1990). [15]Liddell and Scott's Greek-English Lexicon, 25th ed., rev. and abr. (London: Clarendon Press, 1892), 439. [16]Earl F. Palmer, *1, 2, 3 John & Revelation*, The Communicator's Commentary, ed. Lloyd J. Ogilvie, vol. 12 (Dallas: Word Publishing, 1982), 126. [17]Ray Summers, Worthy Is the Lamb (Nashville: Broadman Press, 1951), 112. [18]Eugene H. Peterson, *The Message: New Testament With Psalms and Proverbs*. [19]Quoted in Warren W. Wiersbe, *The Bible Exposition Commentary*, vol. 2 (Wheaton, Ill.: Victor Books, 1989), 571. [20]Eusebius *Ecclesiastical History* 4.15.

[21]Ibid. [22]LaMar C. Berrett, *Discovering the World of the Bible* (Nashville: Thomas Nelson Publishers, 1979), 528. [23]*Grolier Multimedia Encyclopedia*, 1997 ed., s.v. "Pergamum." [24]Berrett, 529 (emphasis added). [25]Hailey, 131. [26]F. Whitfield, "O How I Love Jesus," *Songs of the Church*, ed. Alton H. Howard (West Monroe, La.: Howard Publishers, 1977). [27]Colin J. Hemer, *The Letters to the Seven Churches of Asia in Their Local Setting* (Sheffield, England: JSOT Press, 1986), 106. [28]James M. Tolle, *The Seven Churches of Asia* (Pasadena, Tex.: Haun Publishing Co., 1968), 50. [29]Alan Johnson, *Revelation*, The Expositor's Bible Commentary, ed. Frank E. Gaebelein, vol. 12 (Grand Rapids, Mich.: Zondervan Publishing House, 1981), 443. [30]Tolle, 51.

[31]ನೋಡಿರಿ Eddie Cloer, "Jezebel: The Devil's Missionary," *Truth for Today* 18 (September 1997): 3–8. [32]ನೋಡಿರಿ David Roper, "Three Manifestations of Divine Power," *Truth for Today* 16 (August 1995): 51–53, and "What Does the Holy Spirit Do?" *Truth for Today* 16 (September 1995): 48. ಇದರ ಜೊತೆಯಲ್ಲಿ, ನೋಡಿರಿ Owen Olbricht, "Miracles & the Holy Spirit," *Truth for Today* 19 (January 1999): 31–36. [33]Tolle, 52. [34]Charles R. Swindoll, *Letters to Churches . . . Then and Now* (Fullerton, Calif.: Insight for Living, 1986), 29. [35]Ibid. [36]John Risse, "Ephesus: The Real Loser," *The Book of Revelation Series*, vol. 1, Audiotapes (Abilene, Tex.: Southern Hills church of Christ, 1991). [37]Jay Lockhart, "The Letter to the Church at Ephesus," *Truth for Today* 8 (March 1988): 6–9. [38]Barclay, 24ರಲ್ಲಿ ಉಲ್ಲೇಖಿಸಲಾಗಿದೆ. [39]Summers, 119 (ಒತ್ತಿ ಹೇಳಿದ್ದು ಆತನದ್ದು).